ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಏಪ್ರಿಲ್ 1 ಮಂಗಳವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 45 | ಸಂಚಿಕೆ: 341 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಇನ್ನು ದುಬಾರಿ ದುನಿಯಾ

● ಹಾಲು, ಮೊಸರು, ವಿದ್ಯುತ್, ಆಟೋಮೊಬೈಲ್ ಪಾರ್ಟ್ಸ್, ಬೆಂಗಳೂರಲ್ಲಿ ಕಸದ ತೆರಿಗೆ, ನೋಂದಣಿ, ಮುದ್ರಾಂಕ ಶುಲ್ಕ, ಅಫಿಡವಿಟ್ ಛಾಪಾ ಕಾಗದ, ಎಟಿಎಂ ಚಾರ್ಜ್ ಸೇರಿ ಹಲವು ಇಂದಿನಿಂದ ದುಬಾರಿ ● ಜನಸಾಮಾನ್ಯರ ದೈನಂದಿನ ಬದುಕಿಗೆ ಹೊರೆ ಮೇಲೆ ಹೊರೆ....!







ಬೆಂಗಳೂರು, ಮಾ. 31(ಕೆಎಂಶಿ)– ಮಧ್ಯ ರಾತ್ರಿಯಿಂದಲೇ ವಿದ್ಯುತ್, ನೀರು, ಹಾಲು, ಮೊಸರು ದರ ಹೆಚ್ಚಿಸಿ ಸರ್ಕಾರ ಜನರ ಜೇಬಿಗೆ ಕತ್ತರಿ ಹಾಕಿದೆ. ಈಗಾಗಲೇ ಬಸ್ ಹಾಗೂ ಮೆಟ್ರೊ ಪ್ರಯಾಣ ದರ ಹೆಚ್ಚಳ ಮಾಡಿದ್ದ ಸರ್ಕಾರ ಇದೀಗ ದಿನಬಳಕೆ ವಸ್ತುಗಳ ಮೇಲೂ ದರ ಹೆಚ್ಚಳದ ಹೊರೆ ಹೇರಿದೆ.

ಈಗಾಗಲೇ ತೀರ್ಮಾನ ಕೈಗೊಂಡಿರುವಂತೆ ಪ್ರತಿ ಲೀಟರ್ ಹಾಲು ಮತ್ತು ಮೊಸರಿಗೆ 4 ರೂ., ಪ್ರತಿ ಯೂನಿಟ್ ವಿದ್ಯುತ್‌ಗೆ 36 ಪೈಸೆ, ಪ್ರತಿ ಲೀಟರ್ ನೀರಿಗೆ ಒಂದು ಪೈಸೆ ಹೆಚ್ಚಳವಾಗಲಿದೆ. ವಿದ್ಯುತ್ ಪ್ರತಿ ಯೂನಿಟ್ ದರ ಹೆಚ್ಚಳದ ಜೊತೆ ನಿಗದಿತ ಮಾಸಿಕ ಶುಲ್ಕದಲ್ಲೂ 20 ರೂ. ಏರಿಕೆಯಾಗಲಿದೆ, ಇದರಿಂದ 120 ರೂ. ಇರುವ ನಿಗದಿತ ಶುಲ್ಕ 140 ರೂ.ಗೆ ಹೆಚ್ಚಳವಾಗಲಿದೆ.

ಜನಸಾಮಾನ್ಯರು ನಿತ್ಯ ಬಳಸುವ ವಸ್ತುಗಳ ಬೆಲೆ ಹೆಚ್ಚಳವಾಗಿರುವುದರಿಂದ ಹೋಟೆಲ್ ಹಾಗೂ ಉಪಾಹಾರ ಮಂದಿರಗಳ ಆಹಾರ ಪದಾರ್ಥಗಳ ದರದಲ್ಲೂ ಗಣನೀಯ ಹೆಚ್ಚಳವಾಗಿ ಜನಸಾಮಾನ್ಯರಿಗೆ ಹೊರೆಯಾಗಲಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಎರಡು ವರ್ಷ ಅಧಿಕಾರಾವಧಿ ಪೂರ್ಣಗೊಳ್ಳಲು ಕೆಲವೇ ದಿನಗಳು ಬಾಕಿ ಇದ್ದು, ಈ ಬೆಲೆ ಏರಿಕೆಯಿಂದ ಜನರ ಮೇಲೆ ಗದಾಪ್ರಹಾರ ಮಾಡಿದಂತಾಗಿದೆ.

ಇಂಧನ ಇಲಾಖೆ ನೌಕರರಿಗೆ ಪಿಂಚಣಿ ಮತ್ತು ಗ್ರ್ಯಾಚುಟಿ ನೀಡಲು ಸರ್ಕಾರ ವಿದ್ಯುತ್ ಪ್ರಸರಣ ನಿಗಮಗಳಿಗೆ ಹಣ ನೀಡಬೇಕಿರುವುದರಿಂದ ರಾಜ್ಯದ ಜನತೆ ಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚು ವರಿ ದರ ತೆರಬೇಕಿದೆ. ವಿದ್ಯುತ್ ದರ ಏರಿಕೆ ಅಲ್ಲದೆ, ನಿಗದಿತ ಮಾಸಿಕ ಶುಲ್ಕಗಳನ್ನೂ ಹೆಚ್ಚಳ ಮಾಡಿ ಹೆಚ್ಚು ಹಣ ವಸೂಲಿಗೆ ಸರ್ಕಾರ ಮುಂದಾಗಿದೆ. ಬೆಂಗಳೂರಿನ ಜನತೆ ಕಸ ವಿಲೇವಾರಿಗೂ ಹಂತ ಹಂತಗಳಲ್ಲಿ ಮಾಸಿಕ ದರ ಹೆಚ್ಚಳದ ಜೊತೆಗೆ ವಿದ್ಯುತ್ ಮತ್ತು ನೀರಿನ ದರ ಹೆಚ್ಚಳವನ್ನೂ ನಾಳೆಯಿಂದಲೇ ಭರಿಸಬೇಕಿದೆ. ಏಪ್ರಿಲ್ 1ರಿಂದ ಹೊಸ ಆರ್ಥಿಕ ವರ್ಷ ಆರಂಭವಾಗುತ್ತಿದ್ದು, ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಆಟೋ ಪಾರ್ಟ್ಸ್‌ಗಳ ಮೇಲಿನ ತೆರಿಗೆಗಳ ಹೊರೆಯೂ ಬೀಳಲಿದೆ.

ನೋಂದಣಿ ಮತ್ತು ಮುದ್ರಾಂಕ ಶುಲ್ಕ ದರ 50 ರೂ.ನಿಂದ 500 ರೂ.ಗಳವರೆಗೂ ನಾಳೆಯಿಂದಲೇ ಹೆಚ್ಚಳವಾಗಲಿದೆ, ಪ್ರಮಾಣ ಪತ್ರಗಳ ಛಾಪಾಕಾಗದ ಕನಿಷ್ಠ ಶುಲ್ಕ 20 ರೂ.ನಿಂದ 100 ರೂ.ಗೆ ಏರಿಕೆಯಾಗಿದೆ. ರಾಜ್ಯ ಸರ್ಕಾರದ ಜೊತೆ ಕೇಂದ್ರ ಸರ್ಕಾರದ ಹೊಸ ತೆರಿಗೆಗಳೂ ಏಪ್ರಿಲ್ 1ರಿಂದಲೇ ಜಾರಿಗೆ ಬರಲಿರುವುದರಿಂದ ಜನರ ಮೇಲೆ ಎರಡೆರಡು ತೆರಿಗೆ ಸಂಕಷ್ಟಗಳು ಎದುರಾಗಲಿವೆ.

ಟ್ರಾನ್ಸ್‌ಫಾರ್ಮರ್, ಜನರೇಟರ್ ಪರಿಶೀಲನೆ; ರಿನೀವಲ್ ಶುಲ್ಕವೂ ಏರಿಕೆ!

ಬೆಂಗಳೂರು: ರಾಜ್ಯ ಸರ್ಕಾರ ಒಂದೆಡೆ ಉಚಿತಗಳನ್ನು ಕೊಟ್ಟು ಮತ್ತೊಂದು ಕಡೆಯಿಂದ ಜನರಿಂದ ಕಿತ್ತುಕೊಳ್ಳುತ್ತಿದೆ. ಇದೀಗ ಲಿಫ್ಟ್, ಟ್ರಾನ್ಸ್‌ಫಾರ್ಮರ್, ಜನರೇಟರ್ ಪರಿಶೀಲನೆ ಮತ್ತು ರಿನೀವಲ್ ಶುಲ್ಕ ಏರಿಕೆ ಮಾಡಿದೆ.

ರಾಜ್ಯ ಇಂಧನ ಇಲಾಖೆ ಲಿಫ್ಟ್, ಟ್ರಾನ್ಸ್‌ಫಾರ್ಮರ್, ಜನರೇಟರ್ ಪರಿಶೀಲನೆ ಮತ್ತು ರಿನೀವಲ್ ಶುಲ್ಕ ಏಕಾಏಕಿ ಏರಿಕೆ ಮಾಡಿ ಆದೇಶ ಹೊರಡಿಸಿದೆ. ಹಿಂದೆ ಇದ್ದ ದರಕ್ಕಿಂತ ಮೂರು ಪಟ್ಟು ಶುಲ್ಕ ಹೆಚ್ಚಳ ಮಾಡಿದೆ. 800 ರೂ. ನಿಂದ 1,000 ರೂ. ನಷ್ಟಿದ್ದ ಶುಲ್ಕದ ಮೊತ್ತವನ್ನ ಏಕಾಏಕಿ 5,000 ರೂ. ನಿಂದ 8,000 ರೂ.ಗಳಿಗೆ ಏರಿಕೆ ಮಾಡಲಾಗಿದೆ.

ಮನೆ, ಕಚೇರಿ, ಫ್ಯಾಕ್ಟರಿಗಳಿಗೆ 25 ಕೆವಿಎ ಟ್ರಾನ್ಸ್‌ಫಾರ್ಮರ್ ಹಾಕಿಸಿ ಕೊಂಡಿದ್ದರೆ ಅದನ್ನ ಪರಿಶೀಲನೆ ಮಾಡಲು 1,300 ರೂ.ನಿಂದ 1,500 ರೂ. ಶುಲ್ಕ ಪಡೆದುಕೊಳ್ಳಲಾಗುತ್ತಿತ್ತು. ಆದ್ರೆ ಈಗ ಆ ದರವನ್ನು 3 ರಿಂದ 5 ಸಾವಿರ ರೂ.ಗೆ ಏರಿಕೆ. ಮಾಡಲಾಗಿದೆ. 5 ರಿಂದ 10 ಕೆವಿಎ ಸಣ್ಣ ಜನರೇಟರ್ ಪರಿಶೀಲನೆ ಮತ್ತು ರಿನೀವಲ್‌ಗೆ 2 ಸಾವಿರ ರೂ. ಇದ್ದ ಶುಲ್ಕವನ್ನು ಇದೀಗ 5 ರಿಂದ 8 ಸಾವಿರ ರೂ. ವರೆಗೆ ಏರಿಕೆ ಮಾಡಲಾಗಿದೆ. ರೈತರ ಐಪಿ ಸೆಟ್–25 ಕೆವಿ ವ್ಯಾಟ್‌ಗೆ 3 ಸಾವಿರ ಇದ್ದ ಶುಲ್ಕವನ್ನು ಏಕಾಏಕಿ 11,800 ರೂ.ಗಳಿಗೆ ಏರಿಕೆ ಮಾಡಲಾಗಿದೆ.

ಮೇಲುಕೋಟೆಯಲ್ಲಿ ವಿಜೃಂಭಣೆಯ ತೆಪ್ಪೋತ್ಸವ





ಮೇಲುಕೋಟೆಯಲ್ಲಿ ಸೋಮವಾರ ರಾತ್ರಿ ಶ್ರೀ ಚೆಲುವನಾರಾಯಣಸ್ವಾಮಿ ತೆಪ್ಪೋತ್ಸವ ವಿಜೃಂಭಣೆಯಿಂದ ನೆರವೇರಿತು. ಬಲಚಿತ್ರದಲ್ಲಿ ಉತ್ಸವ ಮೂರ್ತಿಗಳನ್ನು ಕಾಣಬಹುದು. /ಚಿತ್ರ: ಸಂತಾನಂ. {ವರದಿ ಪುಟ–6}

ವಿಧಾನಸಭೆಯಲ್ಲೇ ಏಕಾಏಕಿ ಹನಿಟ್ರ್ಯಾಪ್ ಪ್ರಕರಣ ಪ್ರಸ್ತಾಪ

ಸಚಿವ ರಾಜಣ್ಣ 'ಮಂತ್ರಿಗಿರಿ'ಗೆ ಸಂಚಕಾರ

● ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್‌ರಿಂದ ಸಿಎಂ, ಡಿಸಿಎಂರಿಂದ ಮಾಹಿತಿ ಸಂಗ್ರಹ ● ಪಕ್ಷದ ವೇದಿಕೆ ಇಲ್ಲವೆ ವರಿಷ್ಠರ ಗಮನಕ್ಕೆ ತರದೇ ಏಕಾಏಕಿ ಬಹಿರಂಗಪಡಿಸಿದ್ದಕ್ಕೆ ವರಿಷ್ಠರ ಕೆಂಗಣ್ಣು

ಬೆಂಗಳೂರು, ಮಾ. 31(ಕೆಎಂಶಿ)– ಹನಿಟ್ರ್ಯಾಪ್ ಪ್ರಕರಣವನ್ನು ವಿಧಾನ ಸಭೆಯಲ್ಲೇ ಪ್ರಸ್ತಾಪಿಸಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಮೇಲೆ ಕಾಂಗ್ರೆಸ್ ವರಿಷ್ಠರ ಕೆಂಗಣ್ಣು ಬಿದ್ದಿದ್ದು, ಮಂತ್ರಿಗಿರಿಗೂ ಸ'ಂಚ'ಕಾ'ರ'



ಬಂದಿದೆ. ರಾಷ್ಟ್ರವ್ಯಾಪಿ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ಎಐಸಿಸಿ ಪ್ರಧಾನಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಸಂಪರ್ಕಿಸಿ ಮಾಹಿತಿ ಪಡೆದಿದ್ದಲ್ಲದೆ, ರಾಜಣ್ಣ ವಿರುದ್ಧ ಕಿಡಿಕಾರಿದ್ದಾರೆನ್ನಲಾಗಿದೆ.

ಈ ಸಚಿವರು ಪದೇ ಪದೆ ಪಕ್ಷವನ್ನು ಮುಜುಗರಕ್ಕೆ ಸಿಲುಕಿಸುತ್ತಲೇ ಇದ್ದಾರೆ. ಇವರುಗಳನ್ನು ಮಂತ್ರಿಸ್ಥಾನದಿಂದ ವಜಾ ಮಾಡಿ ಶಿಸ್ತು ಕ್ರಮ ಕೈಗೊಳ್ಳಿ ಎಂದು ಸೂಚಿಸಿದ್ದರು. ವೇಣುಗೋಪಾಲ್ ಅವರ ಸಲಹೆ ಆಲಿಸಿದ ಮುಖ್ಯಮಂತ್ರಿ, ತಾವು ದೆಹಲಿಗೆ ಬಂದಾಗ ಈ ಸಂಬಂಧ ಚರ್ಚಿಸಿ, ಪಕ್ಷದ ಆದೇಶದಂತೆ ನಡೆದುಕೊಳ್ಳುವುದಾಗಿ ತಿಳಿಸಿದ್ದರು. ಆದರೆ, ಕೆಪಿಸಿಸಿ ಅಧ್ಯಕ್ಷರು ಹನಿಟ್ರ್ಯಾಪ್‌ಗೆ ಸಂಬಂಧಿಸಿದಂತೆ ಸವಿಸ್ತಾರ ವರದಿಯನ್ನು ಈಗಾಗಲೇ ಎಐಸಿಸಿ ಅಂಗಳಕ್ಕೆ ಮುಟ್ಟಿಸಿದ್ದಾರೆ. ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸುವ ಮುನ್ನ ಪಕ್ಷದ ■6ನೇ ಪುಟಕ್ಕೆ

ರಾಜಕೀಯ ಆಯಾಮದಲ್ಲಿ ರಹಸ್ಯ ಭೇದಿಸಲು ಪೊಲೀಸರ ಸಿದ್ಧತೆ

ಬೆಂಗಳೂರು: ಸಹಕಾರ ಸಚಿವ ಮತ್ತು ಮಧುಗಿರಿ ಶಾಸಕ ಕೆ.ಎನ್. ರಾಜಣ್ಣ ಅವರನ್ನು ಹನಿಟ್ರ್ಯಾಪ್ ಮಾಡುವ ಪ್ರಯತ್ನ ಮತ್ತು ಅವರ ಪುತ್ರ ಎಂ.ಎಲ್.ಸಿ. ರಾಜೇಂದ್ರ ಅವರ ಮೇಲಿನ 'ಸುಪಾರಿ' ಹತ್ಯೆ ಸಂಬಂಧ ತನಿಖೆ ನಡೆಸುತ್ತಿರುವ ಪೊಲೀಸ್, ಕಾಣದ ಪ್ರಭಾವಿ ವ್ಯಕ್ತಿಗಳು ಮತ್ತು 'ಉನ್ನತ ಮಟ್ಟದ ರಾಜಕಾರಣಿಗಳು' ತಂದೆ–ಮಗನ ವಿರುದ್ಧ ಹೊಂದಿರುವ ವೈಯಕ್ತಿಕ ದ್ವೇಷ ಸೇರಿದಂತೆ ವಿವಿಧ ಆಯಾಮಗಳಿಂದ ತನಿಖೆ ನಡೆಸಲು ಮುಂದಾಗಿದ್ದಾರೆ.

ರಾಜೇಂದ್ರ ಪ್ರಬಲ ರಾಜಕಾರಣಿಗಳ ಹೆಸರುಗಳನ್ನು ಉಲ್ಲೇಖಿಸದೆ, ದೂರು ನೀಡಿದ್ದಾರೆ. ಈ ರಹಸ್ಯವನ್ನು ಭೇದಿಸುವ ಜವಾಬ್ದಾರಿ ಪೊಲೀಸರ ಮೇಲಿದೆ. ರಾಜಕೀಯ ಸಂಪರ್ಕಗಳಿಂದಾಗಿ ಪ್ರಕರಣ ಮತ್ತಷ್ಟು ಜಟಿಲವಾಗುತ್ತಿದೆ. ಪ್ರಕರಣದ ತನಿಖೆ ನಡೆಸುವ ಪೊಲೀಸರು ಸೂಕ್ಷ್ಮತೆಯಿಂದ ಎದುರಿಸಬೇಕಾಗಿದೆ.

ಹಿಂದೆ ಯಾವುದೋ ಸಂದರ್ಭದಲ್ಲಿ ನಡೆದ ಘಟನೆಗಳು, ರಾಜಣ್ಣ ಅವರನ್ನು ಹನಿಟ್ರ್ಯಾಪ್ ಮಾಡಲು ಪ್ರಯತ್ನ ನಡೆದಿದೆ ಎಂದು ಹೇಳುವುದರೊಂದಿಗೆ ಬಯಲಾಗಿದೆ. ಪ್ರಭಾವಿ ರಾಜಕಾರಣಿಗಳು ಅವುಗಳ ಹಿಂದೆ ಇದ್ದಾರೆ ಎಂದು ಹೇಳಲಾಗುತ್ತಿರುವುದರಿಂದ ಈ ಎರಡು ಪ್ರಕರಣಗಳ ನಡುವೆ ಪರಸ್ಪರ ಸಂಬಂಧವಿದೆ ಎಂದು ಪೊಲೀಸರು ಶಂಕಿಸಿದ್ದಾರೆ. ■6ನೇ ಪುಟಕ್ಕೆ

ಗಾಳಿಯನ್ನ ಬಿಟ್ಟು ಎಲ್ಲದರ ಬೆಲೆ ಏರಿಕೆ

▸ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿನುಡಿ
▸ ಏ.2ರಂದು ಫ್ರೀಡಂ ಪಾರ್ಕ್‌ನಲ್ಲಿ ಬಿಜೆಪಿ ಪ್ರತಿಭಟನೆ
▸ ಏ.5ರಂದು ರಾಜ್ಯಾದ್ಯಂತ ಬಿಜೆಪಿ ಹೋರಾಟ
▸ ಏ.7ರಿಂದ ನಾಲ್ಕು ಹಂತದಲ್ಲಿ ಪ್ರತಿಭಟನೆ ನಿರ್ಧಾರ

ಬೆಂಗಳೂರು: ಈ ಸರ್ಕಾರ, ಗಾಳಿಯೊಂದನ್ನು ಬಿಟ್ಟು ಎಲ್ಲದರ ಬೆಲೆ ಏರಿಕೆ ಮಾಡಿದೆ. ಸಾಮಾನ್ಯ ಜನ, ರೈತರನ್ನು ಈ ಸರ್ಕಾರ ಅರ್ಥಮಾಡಿಕೊಂಡಿಲ್ಲ. ಕಾಂಗ್ರೆಸ್‌ಗೆ ಜನ ಆಶೀರ್ವಾದ ಮಾಡಿದ್ದಾರೆ. ಆದರೆ, ಮತದಾರರಿಗೆ ವರದಾನ ಆಗೋ ಬದಲು ಶಾಪಗ್ರಸ್ತವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಕಿಡಿಕಾರಿದ್ದಾರೆ.

ಬೆಲೆ ಏರಿಕೆ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಲೆ ಏರಿಕೆ ಅಂದರೆ ಎಲ್ಲಾ ಏರಿಕೆ ಮಾಡಿದೆ. ವಿದ್ಯುತ್ ದರ ಏರಿಕೆ ಮಾಡಿದ್ದಾರೆ. ಹಾಲಿನ ದರ ಮೂರು ಬಾರಿ ಏರಿಕೆ ಮಾಡಿದ್ದಾರೆ. ಈಗ ಮತ್ತೆ ಏರಿಕೆ ಆಗಿದೆ. ಸರ್ಕಾರಿ ಆಸ್ಪತ್ರೆ ಚಿಕಿತ್ಸೆ ವೆಚ್ಚವನ್ನು ಜಾಸ್ತಿ ಮಾಡಿದ್ದಾರೆ. ಹೊರ ರೋಗಿಗಳ ಶುಲ್ಕ, ಮರಣೋತ್ತರ ಪರೀಕ್ಷೆ ಶುಲ್ಕ, ವೈದ್ಯಕೀಯ ಪ್ರಮಾಣ ಪತ್ರದ ದರ ಜಾಸ್ತಿ ಆಗಿದೆ. ಲ್ಯಾಬ್ ಶುಲ್ಕ ಜಾಸ್ತಿ ಆಗಿದೆ. ಬಡವರಿಗೂ ಬರೆ ಎಳೆಯೋ ಕೆಲಸ ಈ ಸರ್ಕಾರ ಮಾಡಿದೆ. ನೋಂದಣಿ–ಮುದ್ರಾಂಕ ಶುಲ್ಕ



ಜಾಸ್ತಿ ಆಗಿದೆ. ಪ್ರೊಫೆಷನಲ್ ಟ್ಯಾಕ್ಸ್ ಜಾಸ್ತಿ ಮಾಡಿದ್ದಾರೆ. ಬಸ್ ಟಿಕೆಟ್ ದರ ಏರಿಕೆ ಆಗಿದೆ. ಬೀಜಗಳ ಬೆಲೆ ಜಾಸ್ತಿ ಮಾಡಿದ್ದಾರೆ. ನೀರಿನ ದರ ಜಾಸ್ತಿ ಮಾಡಿದ್ದಾರೆ. ಈ ಸರ್ಕಾರ ಜನರಿಗೆ, ಮತದಾರರಿಗೆ ಶಾಪ ಕೊಡುವ ಕೆಲಸ ಮಾಡಿದೆ ಎಂದು ವಾಗ್ದಾಳಿ ನಡೆಸಿದರು. ಬೆಲೆ ಏರಿಕೆ ವಿರೋಧಿಸಿ ಬಿಜೆಪಿ ಪ್ರತಿಭಟನೆ ಮಾಡುತ್ತಿದೆ.

ರಾಜ್ಯ ಸರ್ಕಾರ ಬಡವರಿಗೆ ಬರೆ ಎಳೆಯುತ್ತಿದೆ. ಇದರ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಸರ್ಕಾರ ಬೆಲೆ ಏರಿಕೆ ನಿರ್ಧಾರ ವಾಪಸ್ ಪಡೆಯಲು ಹೋರಾಟ ನಡೆಸಲಿದ್ದೇವೆ. ಏ.2ರಂದು ಫ್ರೀಡಂ ಪಾರ್ಕ್‌ನಲ್ಲಿ ಬೆಳಗ್ಗೆ 11 ಗಂಟೆಯಿಂದ ಅಹೋರಾತ್ರಿ ಧರಣಿ ಪ್ರಾರಂಭವಾಗಲಿದೆ. ಹಾಲಿ ಮಾಜಿ ಶಾಸಕರು, ಪರಿಷತ್ ಸದಸ್ಯರು, ಪದಾಧಿಕಾರಿಗಳು ಭಾಗಿಯಾಗುತ್ತಾರೆ. ಏ.2ರಂದು ಅಹೋರಾತ್ರಿ ಧರಣಿ ಪ್ರಾರಂಭವಾಗಲಿದೆ. ಏ.5ರಂದು ರಾಜ್ಯಾದ್ಯಂತ ಹೋರಾಟ ನಡೆಯಲಿದೆ. ಎಲ್ಲಾ ಜಿಲ್ಲೆಗಳಲ್ಲಿ ರಸ್ತೆಗೆ ಇಳಿದು ಹೋರಾಟ ಮಾಡಲಿದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡನೆ ಮಾಡಿ ದ್ದಾರೆ. ಮುಸ್ಲಿಂಮರಿಗೆ ಒಲೈಕೆ ಮಾಡೋ ನಿಟ್ಟಿನಲ್ಲಿ ಹಿಂದುಗಳಿಗೆ ಅಪಮಾನ ಮಾಡಿದ್ದಾರೆ. ದೇಶದ ಯಾವುದೇ ರಾಜ್ಯದಲ್ಲಿ ಗುತ್ತಿಗೆಯಲ್ಲಿ ಮುಸ್ಲಿಂಮರಿಗೆ ಮೀಸಲಾತಿ ಇಲ್ಲ. ಮುಸ್ಲಿಂಮರಿಗೆ ಮೀಸಲಾತಿ ಕಾನೂನಿನ ■6ನೇ ಪುಟಕ್ಕೆ

ಏ.7 ರಿಂದ ರಾಜ್ಯಾದ್ಯಂತ ಹೋರಾಟ

ಏಪ್ರಿಲ್ 7ರಿಂದ ರಾಜ್ಯಾದ್ಯಂತ ಹೋರಾಟ ಮಾಡುತ್ತೇವೆ. ಮೈಸೂರಿನಿಂದ ಜನ ಜಾಗೃತಿ ಹೋರಾಟ ಪ್ರಾರಂಭ ಆಗಲಿದೆ. ಕೇಂದ್ರ ಸಚಿವ ಜೋಷಿ ಹೋರಾಟಕ್ಕೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿರುವ ವಿಜಯೇಂದ್ರ, ಏ.7ರಿಂದ ಜನಾಕ್ರೋಶ ಯಾತ್ರೆ ಹೆಸರಿನಲ್ಲಿ ಹೋರಾಟ ನಡೆಯಲಿದೆ. ಮೊದಲ ಹಂತದಲ್ಲಿ ಏ.7ರಂದು ಮೈಸೂರು, ಚಾಮರಾಜನಗರ ಜಿಲ್ಲೆ, ಏ.8ರಂದು ಮಂಡ್ಯ, ಹಾಸನ, ಏ.9ರಂದು ಕೊಡಗು, ಮಂಗಳೂರು, ಏ.10ರಂದು ಉಡುಪಿ, ಚಿಕ್ಕಮಗಳೂರು, 2ನೇ ಹಂತದಲ್ಲಿ ಏ.13ರಿಂದ ಶಿವಮೊಗ್ಗ, ಉತ್ತರ ಕನ್ನಡದಲ್ಲಿ ಹೋರಾಟ ನಡೆಯಲಿದೆ.

ಅಕ್ರಮ ಮದ್ಯ ಮಾರಾಟಕ್ಕೆ ತಡೆ; ಮಾರಿದರೆ ಲಕ್ಷ ರೂ.; ಇಂತಹವರಿಗೆ ಜಾಮೀನು ನೀಡಿದರೆ 2 ಲಕ್ಷ ದಂಡ

ಈ ಅಕ್ರಮದ ಸುಳಿವು ಕೊಟ್ಟವರಿಗೆ 10 ಸಾವಿರ ಬಹುಮಾನ; ಚಾ.ನಗರ ತಾಲೂಕು ಬ್ಯಾಡಮೂಡ್ಲು ಗ್ರಾಮಸ್ಥರ ಕಠಿಣ ನಿರ್ಣಯ

ಚಾಮರಾಜನಗರ, ಮಾ.31–ಅಕ್ರಮ ಮದ್ಯ ಮಾರಾಟ ತಡೆಯುವುದಕ್ಕಾಗಿ ತಾಲೂಕಿನ ಬ್ಯಾಡಮೂಡ್ಲು ಗ್ರಾಮಸ್ಥರು ಕಠಿಣ ನಿರ್ಣಯ ಕೈಗೊಂಡಿದ್ದು, ಗ್ರಾಮಸ್ಥರ ಈ ನಿರ್ಧಾರಕ್ಕೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತಿದೆ.

ಅಕ್ರಮ ಮದ್ಯ ಮಾರಾಟದಿಂದ ಗ್ರಾಮದ ಜನರು ಕುಡಿತಕ್ಕೆ ದಾಸರಾಗಿ ಅವರ ಆರೋಗ್ಯ ಹಾಳು ಮಾಡಿಕೊಳ್ಳುವುದರ ಜೊತೆಗೆ ತಮ್ಮ ಸಂಸಾರವನ್ನು ಸರ್ವನಾಶ ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಅಕ್ರಮ ಮದ್ಯ ಮಾರಾಟ ನಿಲ್ಲಿಸಲು ಯುಗಾದಿ ಹಬ್ಬದ ದಿನವಾದ ಭಾನುವಾರ ಗ್ರಾಮಸ್ಥರೆಲ್ಲ ಸಭೆ ಸೇರಿ, ಈ ಕಟ್ಟುನಿಟ್ಟಿನ ನಿರ್ಣಯ ಕೈಗೊಂಡಿದ್ದೇವೆ ಎಂದು ಗ್ರಾಮದ ಮುಖಂಡರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಅಕ್ರಮವಾಗಿ ಮದ್ಯ ಮಾರಾಟ ಮಾಡಿದರೆ ಲಕ್ಷ ರೂ., ಮಾರಾಟ ಮಾಡಿ ಜೈಲು ಸೇರಿದಂತಹವರಿಗೆ ಜಾಮೀನು ನೀಡಿದರೆ 2 ಲಕ್ಷ ರೂ. ದಂಡ ವಿಧಿಸಲಾಗುವುದು. ಆಸಕ್ತಿದಾಯಕ ವಿಚಾರವೆಂದರೆ, ಮದ್ಯ ಮಾರಾಟದ ಸುಳಿವು ನೀಡಿದವರಿಗೆ 10 ಸಾವಿರ ರೂ. ನಗದು ಬಹುಮಾನ ಸಹ ನೀಡುವುದಾಗಿ ಗ್ರಾಮಸ್ಥರು ಇದೇ ವೇಳೆ ಘೋಷಿಸಿದ್ದಾರೆ.

ಬ್ಯಾಂಕಾಕ್, ಮ್ಯಾನ್ಮಾರ್ ಭೂಕಂಪಕ್ಕೆ

ಸತ್ತವರ ಸಂಖ್ಯೆ 2074ಕ್ಕೆ ಏರಿಕೆ

ಬದುಕುಳಿದ ಸಂತ್ರಸ್ತರ ಮೇಲೆ ಮ್ಯಾನ್ಮಾರ್ ಸೇನೆ ದೌರ್ಜನ್ಯ

ನೈಪಿಡಾವ್: ಮ್ಯಾನ್ಮಾರ್ ಪ್ರಸ್ತುತ ಎರಡು ದುರಂತಗಳನ್ನು ಎದುರಿಸುತ್ತಿದೆ. ಒಂದೆಡೆ, ವಿನಾಶಕಾರಿ ಭೂಕಂಪವು 2,074 ಕ್ಕೂ ಹೆಚ್ಚು ಜನರ ಜೀವಗಳನ್ನು ಬಲಿತೆಗೆದುಕೊಂಡಿದೆ. ಮತ್ತೊಂದೆಡೆ, ಸೇನೆಯು ತನ್ನ ವಾಯುಪಡೆ ಮೂಲಕ



ಸಾಮಾನ್ಯ ಜನರ ಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ. ದೇಶಕ್ಕೆ ಪರಿಹಾರ ಕಾರ್ಯಗಳು ಅತ್ಯಂತ ಅಗತ್ಯವಾಗಿರು ವಾಗ, ಮ್ಯಾನ್ಮಾರ್ ಸೇನೆ (ಜುಂಟಾ) ನಾಗರಿಕ ಪ್ರದೇಶಗಳಲ್ಲಿ ವಾಯುದಾಳಿ ಗಳನ್ನು ತೀವ್ರಗೊಳಿಸುತ್ತಿದೆ ಎಂದು ಆರೋಪಿಸಲಾಗಿದೆ. ಮ್ಯಾನ್ಮಾರ್‌ನ ಅತ್ಯಂತ ಹಳೆಯ ಸಶಸ್ತ್ರ ಬಂಡಾಯ ಗುಂಪುಗಳಲ್ಲಿ ಒಂದಾದ ಕರೆನ್ ನ್ಯಾಷನಲ್ ಯೂನಿಯನ್ ಸೇನೆಯು ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ಬದಲು ತನ್ನದೇ ಆದ ಜನರ ಮೇಲೆ ದಾಳಿ ಮಾಡುತ್ತಿದೆ ಎಂದು ಟೀಕಿಸಿದೆ. ಇನ್ನೊಂದೆಡೆ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೀಕರ ಭೂಕಂಪಗಳಲ್ಲಿ ಸಾವನ್ನಪ್ಪಿದವರ ಸಂಖ್ಯೆ 2,056 ಕ್ಕೆ ಏರಿದೆ ಎಂದು ಆಡಳಿತಾರೂಢ ಮಿಲಿಟರಿ ಜುಂಟಾ ಹೇಳಿದೆ. ಏತನ್ಮಧ್ಯೆ, ಭೂಕಂಪದ ವರದಿ ಮಾಡಲು ಸಿದ್ಧತೆ ನಡೆಸಿದ್ದ ವಿದೇಶಿ ಪತ್ರಿಕಾ ಮಾಧ್ಯಮಗಳನ್ನು ಮ್ಯಾನ್ಮಾರ್‌ಗೆ ಪ್ರವೇಶಿಸುವುದನ್ನು ನಿರ್ಬಂಧಿಸಿ ಜುಂಟಾ ಆದೇಶಿಸಿದೆ.

ಶುಕ್ರವಾರದಂದು 7.7 ತೀವ್ರತೆಯ ಭೂಕಂಪ ಸಂಭವಿಸಿದ ನಂತರ, ಸೇನೆಯು ಕರೆನ್ ರಾಜ್ಯದಲ್ಲಿ ಕೆಎನ್‌ಯು ಪ್ರಧಾನ ಕಚೇರಿಯ ಸಮೀಪ ಡ್ರೋನ್ ಮತ್ತು ವೈಮಾನಿಕ ದಾಳಿಗಳನ್ನು ನಡೆಸಿತು. ಭೂಕಂಪದ ಬಳಿಕ ಹಲವು ಪ್ರದೇಶಗಳಲ್ಲಿ ದಾಳಿಗಳು ಹೆಚ್ಚಾಗಿವೆ ಎಂದು ಪರಿಹಾರ ಗುಂಪಾದ ಫ್ರೀ ಬರ್ಮಾ ರೇಂಜರ್ಸ್ ತಿಳಿಸಿದೆ. ಭೂಕಂಪದ ಕೇಂದ್ರಬಿಂದು ಸೇನಾ ನಿಯಂತ್ರಿತ ಪ್ರದೇಶದಲ್ಲಿದ್ದರೂ, ಇದು ಸಶಸ್ತ್ರ ವಿರೋಧ ಗುಂಪುಗಳ ನಿಯಂತ್ರಣದಲ್ಲಿರುವ ಪ್ರದೇಶಗಳ ಮೇಲೂ ಪರಿಣಾಮ ಬೀರಿತು. ■6ನೇ ಪುಟಕ್ಕೆ

ಐಸ್‌ಕ್ರೀಮ್‌ನಲ್ಲಿ ಡಿಟರ್ಜೆಂಟ್; ಕೂಲ್ ಡ್ರಿಂಕ್ಸ್‌ನಲ್ಲಿ ಫಾಸ್ಪರಿಕ್ ಆಮ್ಲ

ಬೆಂಗಳೂರು: ಸ್ವಚ್ಛತೆ ಮತ್ತು ಕಳಪೆ ಗುಣಮಟ್ಟದ ಉತ್ಪನ್ನಗಳನ್ನು ಬಳಸಿ ಐಸ್ ಕ್ರೀಂ ಮತ್ತು ತಂಪು ಪಾನೀಯ ತಯಾರಿಸುತ್ತಿರುವ ಆರೋಪದ ಮೇಲೆ ತಯಾರಿಕಾ ಘಟಕಗಳ ಮೇಲೆ ದಾಳಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ದಾಳಿ ನಡೆಸಿದೆ.

ರಾಜ್ಯದ 220 ಅಂಗಡಿಗಳಲ್ಲಿ 97 ಅಂಗಡಿಗಳಿಗೆ ನೋಟಿಸ್ ನೀಡಲಾಗಿದೆ ಮತ್ತು ಇತರ ಅಂಗಡಿಗಳಿಗೆ ಸರಿಯಾದ ಶೇಖರಣಾ ಪರಿಸ್ಥಿತಿಗಳನ್ನು ಕಾಯ್ದುಕೊಳ್ಳಲು ವಿಫಲವಾದ ಕಾರಣ ಎಚ್ಚರಿಕೆ ನೀಡಲಾಗಿದೆ ಎಂದು ಎಫ್‌ಡಿಎನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಪಾಸಣೆಯಲ್ಲಿ ಆಘಾತಕಾರಿ ಉಲ್ಲಂಘನೆಗಳು ಪತ್ತೆಯಾಗಿವೆ. ಐಸ್ ಕ್ರೀಮ್‌ಗಳಲ್ಲಿ ಕೆನೆ ಬಣ್ಣದ ವಿನ್ಯಾಸವನ್ನು ರಚಿಸಲು ಡಿಟರ್ಜೆಂಟ್ ಪೌಡರ್ ಅನ್ನು ಬಳಸಲಾಗುತ್ತಿತ್ತು. ಕೂಲ್ ಡ್ರಿಂಕ್‌ಗಳಲ್ಲಿ ಮೂಳೆಗಳನ್ನು ದುರ್ಬಲಗೊಳಿಸುವ ಫಾಸ್ಪರಿಕ್ ಆಮ್ಲ ಹಾಗೂ ಫಿಜ್ ಅನ್ನು ಹೆಚ್ಚಿಸಲು ಬಳಸಲಾಗುತ್ತಿತ್ತು ಎಂದು ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ. ಇಲಾಖೆಯು ಒಟ್ಟು 38,000 ರೂ. ದಂಡ ವಿಧಿಸಿದೆ ಎಂದು ಹೇಳಿದರು. ಮಕ್ಕಳು ಸಾಮಾನ್ಯವಾಗಿ ಸೇವಿಸುವ ಆಹಾರದ ಗುಣಮಟ್ಟ ಮತ್ತು ತಯಾರಿಕೆಯ ವಿಧಾನಗಳನ್ನು ■6ನೇ ಪುಟಕ್ಕೆ

ಮೈಸೂರಲ್ಲಿ ಸಂಭ್ರಮದ ರಂಜಾನ್ ಆಚರಣೆ

ಮೈಸೂರು, ಮಾ.31(ಆರ್‌ಕೆ)– ಮೈಸೂರಲ್ಲಿ ಮುಸ್ಲಿಂ ಬಾಂಧವರು ಇಂದು ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಮೈಸೂರಿನ ತಿಲಕ್‌ನಗರದಲ್ಲಿರುವ ಹಳೇ ಈದ್ಗಾ ಮೈದಾನದಲ್ಲಿ ಸಾವಿರಾರು ಮಂದಿ ಭಾಗಿಯಾಗಿ ಸಾಮೂಹಿಕ ರಂಜಾನ್ ಪ್ರಾರ್ಥನೆ ಸಲ್ಲಿಸಿದರು. ಮೈಸೂರು ಸರ್ ಖಾಜಿ ಹಜರತ್ ಮೌಲಾನಾ ಮೊಹಮದ್ ಉಸ್ಮಾನ್ ಷರೀಫ್, ಸಾಮೂಹಿಕ ಪ್ರಾರ್ಥನೆಯಲ್ಲಿ ರಂಜಾನ್ ಸಂದೇಶ ನೀಡಿದರು.

ಮುಸ್ಲಿಂ ಬಾಂಧವರು ತಾವು ಗಳಿಸಿದ ಆದಾಯದ ಶೇ.2.50ರಷ್ಟನ್ನು ಜಕತ್ ಫಿತ್ರಾ ಹೆಸರಲ್ಲಿ ದಾನ ಮಾಡಬೇಕು. ಎಲ್ಲರೂ ಸಂತೋಷದಿಂದ ಹಬ್ಬ ಆಚರಿಸಲು ಸಹಕರಿಸಿ ಎಂದ ಷರೀಫ್, ದೇಶದ ಪ್ರತಿಯೊಬ್ಬ ಪ್ರಜೆಯ ರಕ್ಷಣೆ ಹಾಗೂ ಕ್ಷೇಮಪಾಲನೆಯಾಗಬೇಕು ಎಂದು ಇದೇ ಸಂದರ್ಭ ಪ್ರಾರ್ಥಿಸಿದರು.

ಹಿಂದೂ ಸಮುದಾಯದವರಿಗೂ ಯುಗಾದಿ ಹಬ್ಬದ ಶುಭಾಶಯ ಹೇಳಿದ ಅವರು, ಕೋಮು ಸೌಹಾರ್ದ, ಸೋದರತ್ವ ಕಾಪಾಡಿಕೊಂಡು ಮುಸ್ಲಿಂ ಹಬ್ಬದಲ್ಲಿ ಹಿಂದೂಗಳು ಮತ್ತು ಹಿಂದೂ ಹಬ್ಬ ಗಳಲ್ಲಿ ಮುಸ್ಲಿಮರು ಭಾಗಿಯಾಗಿ ಪ್ರೀತಿ–ಪ್ರೇಮದಿಂದ ಸಹಬಾಳ್ವೆ ನಡೆಸಬೇಕೆಂದು ಕರೆ ನೀಡಿದರು. ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಮಾಜಿ ಡೀನ್ ಶಕೀಬ್ ಉರ್ ರೆಹಮಾನ್, ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಶೌಕತ್ ಪಾಷ, ಮಾಜಿ ಕಾರ್ಪೊರೇಟರ್‌ಗಳಾದ ಅನ್ವರ್ ಬೇಗ್, ಅಫ್ತಾಬ್, ಸುಹೇಲ್ ಬೇಗ್, ಶೌಕತ್ ಅಲಿ ಖಾನ್, ಜಮೀರ್ ಅಹಮದ್, ಅಶ್ರಫ್, ಮುಮ್ತಾಜ್ ಅಹಮದ್, ಪತ್ರಕರ್ತ ಅಫ್ಸರ್ ಪಾಷ ■6ನೇ ಪುಟಕ್ಕೆ



ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸೋಮವಾರ ರಂಜಾನ್ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಡಾ.ಅಂಬೇಡ್ಕರ್ ಜಯಂತಿ: ಸಂವಿಧಾನ ಕುರಿತು ಸ್ಪರ್ಧಾತ್ಮಕ ಪರೀಕ್ಷೆ, ಉಪನ್ಯಾಸ



ಮೈಸೂರು, ಮಾ.31(ಜಿಎ)–ದಲಿತ ಸಂಘರ್ಷ ಸಮಿತಿ ಬಣ ರಹಿತ ಜಿಲ್ಲಾ ಶಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಪ್ರಯುಕ್ತ ಭಾರತ ಸಂವಿಧಾನ ಕುರಿತು ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ ಆಲಗೂಡು ಈ ವಿಷಯ ತಿಳಿಸಿ, ಮೈಸೂರು, ಚಾಮರಾಜನಗರ ಜಿಲ್ಲೆಯ ಎಲ್ಲಾ ಪದವಿ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದಾಗಿದೆ. ಎರಡೂ ಜಿಲ್ಲೆಯ ಪದವಿ ಕಾಲೇಜುಗಳಲ್ಲಿ ಏ.12 ರಂದು ಅರ್ಹತಾ ಪರೀಕ್ಷೆ, ಏ.20ರಂದು ಎರಡೂ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮುಂದೆ ತಿಳಿಸುವ ಸ್ಥಳದಲ್ಲಿ ಮುಖ್ಯ ಪರೀಕ್ಷೆ ನಡೆಯಲಿದೆ ಎಂದರು.

ತಮ್ಮ ಹತ್ತಿರದ ಸರ್ಕಾರಿ ಕಾಲೇಜಿಗೆ ಭೇಟಿ ನೀಡಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೂ ಅವಕಾಶವಿದೆ. ಹೆಚ್ಚಿನ ಮಾಹಿತಿಗೆ ದೂ. 9663636201 ಚಿನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುರುಡಗಳ್ಳಿ ಮಹದೇವು, ಆಲತ್ತೂರು ಶಿವರಾಜು, ಮೂಡಹಳ್ಳಿ ಮಹದೇವ, ಬಿ.ಕೆ.ಹರೀಶ್ ಹುಣಸೂರು, ಜಯಪ್ರಕಾಶ್ ಹೆಗ್ಡೆ, ಎಸ್ ಚಂದ್ರ ಅಶೋಕಪುರಂ ಉಪಸ್ಥಿತರಿದ್ದರು.

ಪದಕ ಪ್ರದಾನ



ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಎಂಎ ಇತಿಹಾಸ ವಿಷಯದಲ್ಲಿ ಪ್ರಥಮ ರ‍್ಯಾಂಕ್ ಪಡೆದ ವಿರಾಜಪೇಟೆಯ ಮೇರಿ ವಾಜ್ (ಪತಿ ಆಂಥೋನಿ ಡಿಸೋಜ) ಅವರಿಗೆ ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಪದಕ ಪ್ರದಾನ ಮಾಡಿದರು. ಮೇರಿ ವಾಜ್ ಅಮ್ಮತ್ತಿಯಲ್ಲಿರುವ ಗುಡ್ ಶೆಫರ್ಡ್ ಶಾಲೆಯಲ್ಲಿ ಬೋಧಕರಾಗಿದ್ದಾರೆ. ಅವರ ಸಹೋದರ ವಿವಿನ್ ವಾಜ್ ತಪೋವನ್ ಸೋಲೇಸ್ ಅಪಾರ್ಟ್‌ಮೆಂಟ್‌ನ ವ್ಯವಸ್ಥಾಪಕರಾಗಿದ್ದಾರೆ.

ಮೈಸೂರಿನ ಡಾ.ಅಂಬೇಡ್ಕರ್ ಭವನದ ಕಾಮಗಾರಿ ಏಪ್ರಿಲ್‌ನಲ್ಲಿ ಪುನರಾರಂಭಿಸದಿದ್ದರೆ ಅಹೋರಾತ್ರಿ ಧರಣಿ

ಪ್ರಬುದ್ಧ ಭಾರತ ಭೀಮ್ ಸೇನೆ ಎಚ್ಚರಿಕೆ

ಮೈಸೂರು, ಮಾ.31(ಜಿಎ)–ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಯನ್ನು ಏಪ್ರಿಲ್ ತಿಂಗಳೊಳಗೆ ಪುನರಾರಂಭಿಸದಿದ್ದರೆ ಭವನದ ಎದುರು ಜಿಲ್ಲೆಯ ಎಲ್ಲಾ ದಲಿತ ಸಂಘಟನೆಗಳೊಡಗೂಡಿ ಅಹೋರಾತ್ರಿ ಧರಣಿ ನಡೆಸಬೇಕಾಗುತ್ತದೆ ಎಂದು ಪ್ರಬುದ್ಧ ಭಾರತ ಭೀಮ್ ಸೇನೆಯ ರಾಜ್ಯಾಧ್ಯಕ್ಷ ಸಿದ್ದರಾಜು ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಸರ್ಕಾರಗಳು ಅಧಿಕಾರಕ್ಕೆ ಬಂದ ವೇಳೆಯೂ ಭವನ ನಿರ್ಮಾಣ ಚುರುಕಾಗಲಿಲ್ಲ. ಒಂದೊಂದು ಕಾರಣ ನೀಡಿ ಕಾಲಹರಣ ಮಾಡುತ್ತಿದ್ದಾರೆ. ಈ ಹಿಂದೆ ಪ್ರತಿಭಟನೆ ನಡೆಸಿದಾಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮೊದಲಾದವರು ಕೇವಲ ಭರವಸೆಯನ್ನೇ ನೀಡಿದ್ದಾರೆ. ಇದಲ್ಲದೆ, ಈ ಬಾರಿಯ ಬಜೆಟ್‌ನಲ್ಲಿಯೂ ಈ ಭವನ ನಿರ್ಮಾಣಕ್ಕೆ ಹಣ ಇರಿಸಿಲ್ಲ. ಹೀಗಾಗಿ ಪ್ರತಿಭಟನೆ ಅನಿವಾರ್ಯವಾಗಿದೆ ಎಂದರು. ಈಗ ಭವನ ಅಪೂರ್ಣವಾಗಿರುವ ಕಾರಣ ಅನೈತಿಕ ಚಟುವಟಿಕೆ ಕೇಂದ್ರವಾಗಿದೆ. ಇದಲ್ಲದೆ ಎಲ್ಲೆಲ್ಲೂ ಅನೈರ್ಮಲ್ಯವಿದೆ. ಹೀಗಾಗಿ ಭವನ ನಿರ್ಮಾಣ ಕಾಮಗಾರಿ ಪುನರಾರಂಭಿಸಬೇಕು. ನೈರ್ಮಲ್ಯ ಕಾಯ್ದುಕೊಳ್ಳಬೇಕು. ಇಲ್ಲದಿದ್ದಲ್ಲಿ ತೀವ್ರ ಪ್ರತಿಭಟನೆ ನಡೆಸಲಾಗುವುದೆಂದು ಮತ್ತೊಮ್ಮೆ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಚೆಲುವರಾಜು, ಸೋಮಣ್ಣ, ಮಂಜಣ್ಣ, ಶಿವರಾಮು, ಅನ್ವರ್‌ಪಾಷ ಉಪಸ್ಥಿತರಿದ್ದರು.

ಯತ್ನಾಳ್ ಉಚ್ಚಾಟನೆಗೆ ಲಿಂಗಾಯತ ಗೌಡ ಮಹಾಸಭಾ ಖಂಡನೆ



ಪುಟ್ಟಸ್ವಾಮಿ

ಮೈಸೂರು, ಮಾ.31(ಎಸ್‌ಬಿಡಿ)–ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಬಿಜೆಪಿಯಿಂದ ಅಮಾನತುಗೊಳಿಸಿರುವುದು ಖಂಡನೀಯ ಎಂದು ಲಿಂಗಾಯತ ಗೌಡ ಮಹಾಸಭಾದ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ ಹೇಳಿದ್ದಾರೆ.

ಯತ್ನಾಳ್ ಅವರು ಲಿಂಗಾಯತ ಸಮುದಾಯದ ಪ್ರಭಾವಿ ನಾಯಕ. ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಕಟ್ಟಿ ಬೆಳೆಸುವಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ. ಅಂತಹ ನಾಯಕನನ್ನು ಬಿಜೆಪಿ ಅಗೌರವದಿಂದ ನಡೆಸಿಕೊಳ್ಳುವ ಮೂಲಕ ಲಿಂಗಾಯತ ಸಮುದಾಯಕ್ಕೆ ಅವಮಾನ ಮಾಡಿದೆ ಎಂದು ಕಿಡಿಕಾರಿದ್ದಾರೆ.

ಪ್ರತಿ ಚುನಾವಣೆಯಲ್ಲೂ ಲಿಂಗಾಯತ ಸಮುದಾಯ ಬಿಜೆಪಿಗೆ ಬೆಂಬಲ ನೀಡಿದೆ. ಇದೇ ಕಾರಣದಿಂದ ಅಧಿಕಾರವೂ ದಕ್ಕಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ಇಡೀ ಸಮುದಾಯ ಯತ್ನಾಳ್ ಅವರ ಮುಂದಾಳತ್ವದಲ್ಲಿ ಬಿಜೆಪಿ ಬೆಂಬಲಿಸಿದೆ. ಯತ್ನಾಳ್ ಅವರ ಸುದೀರ್ಘ ರಾಜಕಾರಣದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ. ಲಿಂಗಾಯತ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಯತ್ನಾಳ್ ಅವರು ಮನೆ–ಮಠ ಬಿಟ್ಟು ಹೋರಾಟ ಮಾಡಿದ್ದಾರೆ. ಹೀಗಾಗಿ ಇಡೀ ಸಮುದಾಯವೇ ಅವರ ಪರ ನಿಲ್ಲಲಿದೆ. ಯತ್ನಾಳ್ ಅವರ ಅಮಾನತು ಆದೇಶ ಹಿಂಪಡೆಯದಿದ್ದರೆ ಮುಂಬರುವ ದಿನಗಳಲ್ಲಿ ಸಮುದಾಯದ ಜನ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದ್ದಾರೆ.

ಗುರುಕುಲ ಉಚಿತ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಮಾ.31–ಬೆಂಗಳೂರಿನ ದೊಡ್ಡಾಲದಮರ ರಸ್ತೆಯ ರಾಮೋಹಳ್ಳಿಯಲ್ಲಿ ರಾಮಕೃಷ್ಣ ಯೋಗಾಶ್ರಮದಿಂದ ನಡೆಸುತ್ತಿರುವ ಗುರುಕುಲದಲ್ಲಿ 6,7 ಮತ್ತು 8ನೇ ತರಗತಿಗೆ (ಕೆಲವು ನಿಬಂಧನೆಗಳೊಂದಿಗೆ) ಉಚಿತ ಊಟ, ವಸತಿ ಸಹಿತ ಶಿಕ್ಷಣದ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಭಾರತೀಯ ಪರಂಪರೆಯ ಶ್ರೇಷ್ಠ ಗುರುಕುಲ ಪದ್ಧತಿಯ ಈ ಶಾಲೆಯಲ್ಲಿ ಕರ್ನಾಟಕ ಸ್ಟೇಟ್, ಎನ್‌ಐಓಎಸ್, ಜಿಐಐ ಸಿಲಬಸ್ ಮೂಲಕ ವಿದ್ಯಾರ್ಥಿಗಳಿಗೆ ಬೋಧಿಸಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗೆ ಮೊ. 9108760180, 9845726379 ಸಂಪರ್ಕಿಸಬಹುದು.


ನಿಧನ

ಸಂತೋಷ್



ಮೈಸೂರು, ಮಾ. 31–ಮೈಸೂರಿನ ಚಾಮುಂಡಿಪುರಂ ನಿವಾಸಿ ಮತ್ತು ಮಾಜಿ ಪತ್ರಿಕಾ ಛಾಯಾಗ್ರಾಹಕ ಸಂತೋಷ್ (40) ಭಾನುವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಸುಜಾತ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ವರ್ಗ ತಿಳಿಸಿವೆ.

ಚಾಮಮ್ಮ



ಮೈಸೂರಿನ ಅಶೋಕಪುರಂ ನಿವಾಸಿ ಚಾಮಮ್ಮ (93) ಭಾನುವಾರ ನಿಧನರಾದರು. ಮೃತರು ಪುತ್ರ ಜೆ.ಶ್ರೀನಿವಾಸ್ (ವಿಜಯವಾಣಿ ಉಪಸಂಪಾದಕ ಜೆ.ಶಿವಣ್ಣ), ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅಶೋಕಪುರಂ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ವೇತಾ ಡಿಕೋಸ್ಟಾ



ಮೈಸೂರು ವಿಜಯನಗರ 4ನೇ ಹಂತದ ನಿವಾಸಿ ಜಸ್ಟೀನ್ ಸುನೀಲ್ ಡಿಸೋಜಾ ಅವರ ಪತ್ನಿ ಶ್ವೇತಾ ಡಿಕೋಸ್ಟಾ (40) ಭಾನುವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬೆಳವಾಡಿಯ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಕೊಡವ ಸಮಾಜದಲ್ಲಿ ಜನರಲ್ ತಿಮ್ಮಯ್ಯನವರ ಜಯಂತಿ

ಆಗಸ್ಟ್‌ನಲ್ಲಿ ಶ್ರೀಯುತರ ಪ್ರತಿಮೆ ಅನಾವರಣಕ್ಕೆ ನಿರ್ಧಾರ



ಮೈಸೂರಿನ ಕೊಡವ ಸಮಾಜದಲ್ಲಿ ಜನರಲ್ ಕೆ.ಎಸ್.ತಿಮ್ಮಯ್ಯ ಅವರ 119ನೇ ಜಯಂತಿಯನ್ನು ಆಚರಿಸಲಾಯಿತು.

ಮೈಸೂರು, ಮಾ.31(ಜಿಎಲ್‌ಯು)–ಮೈಸೂರಿನ ಕೊಡವ ಸಮಾಜದಲ್ಲಿ ಸೋಮವಾರ ಜನರಲ್ ಕೆ.ಎಸ್.ತಿಮ್ಮಯ್ಯ ಅವರ 119ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಜನಿಸಿ ಭಾರತೀಯ ಸೇನೆಯಲ್ಲಿ ಉನ್ನತ ಸ್ಥಾನ ಅಲಂಕರಿಸಿದ್ದ ಜನರಲ್ ಕೊಡಂದೇರ ಸುಬ್ಬಯ್ಯ ತಿಮ್ಮಯ್ಯ ಅವರ ಜಯಂತಿ ಕಾರ್ಯಕ್ರಮದಲ್ಲಿ ತಿಮ್ಮಯ್ಯ ಅವರು ಭಾರತೀಯ ಸೇನೆಯಲ್ಲಿ ಸಲ್ಲಿಸಿದ ಸೇವೆಯನ್ನು ಸ್ಮರಿಸಲಾಯಿತು.

ಈ ವೇಳೆ ಮಾತನಾಡಿದ ಕೊಡವ ಸಮಾಜದ ಪ್ರಧಾನ ಕಾರ್ಯದರ್ಶಿ ಕೆ.ಎ.ಬೆಳ್ಳಿಯಪ್ಪ ಅವರು, ತಿಮ್ಮಯ್ಯ ಅವರು ಮಾರ್ಚ್ 31, 1906ರಲ್ಲಿ ಮಡಿಕೇರಿಯಲ್ಲಿ ಜನಿಸಿದರು. ಕಾಫಿ ಬೆಳೆಗಾರರ ಕುಟುಂಬದ ಅವರು ಬೆಂಗಳೂರಿನ ಬಿಷಪ್ ಕಾಟನ್ ಶಾಲೆ ಹಾಗೂ ಕೂನೂರಿನ ಸೈಂಟ್ ಜೋಸೆಫರ ಶಾಲೆಯಲ್ಲಿ ಶಿಕ್ಷಣ ಪಡೆದು, ತರುವಾಯ 1926ರಲ್ಲಿ ಎರಡನೆ ಲೆಫ್ಟಿನೆಂಟ್ ಆಗಿ ಭಾರತೀಯ ಸೇನೆಗೆ ಸೇರಿದರು ಎಂದರು.

ನಂತರ 1957ರಿಂದ 1961ರವರೆಗೆ ಭಾರತೀಯ ಸೇನೆಯ ದಂಡನಾಯಕರಾಗಿ ಕರ್ತವ್ಯ ನಿರ್ವಹಿಸಿದರು. ಕೊರಿಯಾ ದೇಶದ ಯುದ್ಧಾನಂತರ ಸಂಯುಕ್ತ ರಾಷ್ಟ್ರಗಳ ಒಂದು ದಳಕ್ಕೆ ಅಧಿಪತಿಯಾದರು. ಭಾರತೀಯ ಸೇನೆಯಿಂದ ನಿವೃತ್ತರಾದ ಬಳಿಕ ಸಂಯುಕ್ತ ರಾಷ್ಟ್ರಗಳ ಶಾಂತಿ–ಸ್ಥಾಪಕ ಸೈನ್ಯದ ಮುಖ್ಯಸ್ಥರಾಗಿ ಅಮೇರಿಕಾದ ಸೈಪ್ರಸ್‌ನಲ್ಲಿದ್ದರು. ಅಮೇರಿಕಾದಲ್ಲಿ ಇರುವಾಗಲೇ 1965ರಲ್ಲಿ ಹೃದಯಾಘಾತದಿಂದ ತಿಮ್ಮಯ್ಯ ಅವರು ನಿಧನರಾದರು ಎಂದು ಬೆಳ್ಳಿಯಪ್ಪ ಅವರು ವಿವರಿಸಿದರು.

ಭಾರತೀಯ ಸೇನೆಯಲ್ಲಿ ಜನರಲ್ ತಿಮ್ಮಯ್ಯ ಅವರು ಸಲ್ಲಿಸಿದ ಸೇವೆಯ ಕಾರಣ ಇಂದಿಗೂ ಅವರ ಸ್ಮರಣೆ ಮಾಡಲಾಗುತ್ತಿದೆ. ಇಂದು ಹಾಗೂ ಭವಿಷ್ಯತ್ತಿನ ಪೀಳಿಗೆಗೂ ಅವರ ಸ್ಮರಣೆ ಚಿರಸ್ಥಾಯಿಯಾಗಿ ಉಳಿಯಲೆಂದು ಕೊಡವ ಸಮಾಜ ಅವರ ಪ್ರತಿಮೆ ನಿರ್ಮಾಣ ಮಾಡುತ್ತಿದೆ ಎಂದರು.

ಕೊಡವ ಸಮಾಜದ ಮುಂಭಾಗ 9 ಅಡಿಯ ತಿಮ್ಮಯ್ಯ ಅವರ ಪ್ರತಿಮೆ ಸ್ಥಾಪನೆ ಮಾಡಲಾಗುತ್ತಿದೆ. ಪ್ರತಿಮೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಆಗಸ್ಟ್‌ನಲ್ಲಿ ಕಾರ್ಯಕ್ರಮ ಆಯೋಜಿಸಿ ಅವರ ಪ್ರತಿಮೆ ಅನಾವರಣ ಮಾಡಲಾಗುವುದು ಎಂದು ಬೆಳ್ಳಿಯಪ್ಪ ತಿಳಿಸಿದರು. ಕೊಡವ ಸಮಾಜದ ಉಪಾಧ್ಯಕ್ಷ ಎಂ.ಕೆ.ನಾಣಯ್ಯ, ಖಜಾಂಚಿ ಕಾಶಿಯಪ್ಪ, ಸದಸ್ಯರಾದ ಕಾವೇರಪ್ಪ ನೆಲ್ಲಮಕ್ಕಡ, ಬಿದ್ದಪ್ಪ ಪೊನ್ನಿಮಾಡ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಏ.14ರಿಂದ ರಂಗಾಯಣ ಚಿಣ್ಣರ ಮೇಳ

ಏ.6ರಿಂದ ಅರ್ಜಿ ವಿತರಣೆ



ಮೈಸೂರು,ಮಾ.31(ಜಿಎ)–ಮೈಸೂರಿನ ರಂಗಾಯಣದಲ್ಲಿ 'ಚಿಣ್ಣರ ಮೇಳ' ಏ.14 ರಿಂದ ಆರಂಭವಾಗಲಿದ್ದು, ಏ.6ರಿಂದ ರಂಗಾಯಣ ಕಚೇರಿಯಲ್ಲಿ ಅರ್ಜಿ ದೊರೆಯಲಿದೆ.

ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹಲವು ಸಂಘ–ಸಂಸ್ಥೆಗಳು, ಕ್ರೀಡೆ, ರಂಗಭೂಮಿ ಸೇರಿದಂತೆ ವಿವಿಧ ಬಗೆಯ ಬೇಸಿಗೆ ಶಿಬಿರಗಳನ್ನು ಆಯೋಜಿಸುತ್ತವೆ. ಆದರೆ ರಂಗಾಯಣದ ಚಿಣ್ಣರ ಮೇಳಕ್ಕೆ ತನ್ನದೇ ಆದ ಮಹತ್ವ ಇದ್ದು, ಪಾಲಕರು ತಮ್ಮ ಮಕ್ಕಳನ್ನು ಈ ಮೇಳಕ್ಕೆ ಸೇರಿಸಲು ನಡೆಸುವ ದೊಡ್ಡ ಮಟ್ಟದ ಕಸರತ್ತು ಇದಕ್ಕೆ ನಿದರ್ಶನವಾಗಿದೆ.

ವರ್ಷದಿಂದ ವರ್ಷಕ್ಕೆ ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತಿರುವ ರಂಗಾಯಣ ಚಿಣ್ಣರ ಮೇಳ ಈ ಬಾರಿ ಏ.14ರಿಂದ ಮೇ10ವರೆಗೆ ನಡೆಯಲಿದ್ದು, ಇದಕ್ಕಾಗಿ ಪೋಷಕರು ಅರ್ಜಿ, ದಾಖಲಾತಿ ವೆಚ್ಚ ಸೇರಿದಂತೆ ವಿವಿಧ ಮಾಹಿತಿಗಳ ಬಗ್ಗೆ ಕಲೆ ಹಾಕುತ್ತಿದ್ದಾರೆ.


ಈ ಬಾರಿಯ ಶಿಬಿರ ಏ.14ರಿಂದ ಮೇ 10ರವರೆಗೆ ಒಟ್ಟು 27 ದಿನಗಳ ಕಾಲ ನಡೆಯಲಿದ್ದು, ಏ.6ರಂದು ಬೆಳಗ್ಗೆ 10ಕ್ಕೆ ರಂಗಾಯಣದ ಕಚೇರಿಯಲ್ಲಿ ಅರ್ಜಿ ವಿತರಿಸಲಾಗುತ್ತದೆ. ಪ್ರತಿ ಮಗುವಿಗೆ 3,000 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದ್ದು, ಒಟ್ಟು 250 ಅರ್ಜಿಗಳನ್ನು ಮಾತ್ರ ನೀಡಲು ತೀರ್ಮಾನಿಸಲಾಗಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ ಎಂದು ರಂಗಾಯಣ ಉಪನಿರ್ದೇಶಕ ಎಂ.ಡಿ.ಸುದರ್ಶನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಚಿಣ್ಣರ ಮೇಳಕ್ಕೆ ಡಿಮ್ಯಾಂಡ್ ಇದ್ದು, ಪೋಷಕರು ಕಚೇರಿಗೆ ದೂರವಾಣಿ ಮೂಲಕ ಚಿಣ್ಣರ ಮೇಳ ಯಾವಾಗ ಆರಂಭಿಸುತ್ತೀರಾ ಎಂದು ಮೈಸೂರು ಮಾತ್ರವಲ್ಲದೇ ರಾಜ್ಯ ವಿವಿಧ ಜಿಲ್ಲೆಗಳಿಂದ ವಿಚಾರಿಸುತ್ತಿದ್ದಾರೆ. ಅದರಂತೆ ಅದರ ಮೇಳದ ಮೆರುಗು ಹೆಚ್ಚಿಸಲು ಅನೇಕ ವಿಚಾರಗಳ ಬಗ್ಗೆ ಚರ್ಚಿಸಲಾಗುತ್ತಿದ್ದು, ವಿಭಿನ್ನ ಹಾಗೂ ಮಕ್ಕಳಿಗೆ ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ.


"ಚಿಣ್ಣರ ಮೇಳದ ಅರ್ಜಿ ಪಡೆದುಕೊಳ್ಳಲು ಪೋಷಕರು ತಡರಾತ್ರಿಯಿಂದ ಸರತಿ ಸಾಲಿನಲ್ಲಿ ನಿಂತು ಕಾಯುತ್ತಾರೆ. ಕೆಲಸಕ್ಕೆ ಹೋಗುವ ಪೋಷಕರಿಗೆ ಅನುಕೂಲವಾಗುವಂತೆ (ಏ.6) ಭಾನುವಾರ ಅರ್ಜಿ ವಿತರಣೆ ಮಾಡಲು ನಿರ್ಧರಿಸಲಾಗಿದೆ. **–ಎಂ.ಡಿ.ಸುದರ್ಶನ್, ಉಪನಿರ್ದೇಶಕ, ರಂಗಾಯಣ.**

ಮಕ್ಕಳು ಶಿಬಿರದಿಂದ ಹೊರಬರುವ ಹೊತ್ತಿಗೆ ಒಂದಷ್ಟು ನಾಟಕ ಪ್ರದರ್ಶಿಸುತ್ತಾರೆ. ಮಣ್ಣಿನ ಆಕೃತಿ ಮಾಡುವುದು, ಚಿತ್ರ ಬರೆಯುವುದು, ರಂಗದ ಆಟಗಳನ್ನು ಹೇಳಿಕೊಡುತ್ತಾರೆ. ಮಕ್ಕಳಿಗೆ ರಂಗ ಚಟುವಟಿಕೆ, ರಂಗಕಲೆ ಪರಿಚಯವಾಗಲಿದೆ. ರಂಗಾಟಗಳು, ಸಮೂಹ ಗಾಯನ, ಸಮೂಹ ನೃತ್ಯ, ಮೂಕಾಭಿನಯ, ಹಾವುಗಳ ಪ್ರದರ್ಶನ, ಅಗ್ನಿಶಾಮಕ ಇಲಾಖೆಯಿಂದ ಬೆಂಕಿ ನಂದಿಸುವ ಪ್ರಾತ್ಯಕ್ಷಿಕೆ, ಪರಿಸರ ವೀಕ್ಷಣೆ, ಮಕ್ಕಳ ಚಲನಚಿತ್ರ ಪ್ರದರ್ಶನ, ಮಕ್ಕಳಿಂದ ರೈತ ಸಂತೆ, ಸಾಮೂಹಿಕ ಓಕುಳಿ ಮುಂತಾದ ಕಾರ್ಯಕ್ರಮಗಳೂ ಇರಲಿವೆ. ಇದರಿಂದ ಕೇವಲ ಪರೀಕ್ಷೆ, ಹೋಂವರ್ಕ್‌ನ ಒತ್ತಡದಿಂದ ಮಕ್ಕಳಿಗೆ ರಿಲ್ಯಾಕ್ಸ್ ಸಿಗಲಿದೆ ಎಂದರು.

ರಂಜಾನ್ ಶುಭಾಶಯ...



ರಂಜಾನ್ ಪ್ರಯುಕ್ತ ಎನ್.ಆರ್.ಕ್ಷೇತ್ರದ ಶಾಸಕರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಅವರನ್ನು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಚಾಮರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮಾಜಿ ಉಪಮೇಯರ್ ಮಹದೇವಪ್ಪ, ಬ್ಲಾಕ್ ಅಧ್ಯಕ್ಷ ಇಕ್ಬಾಲ್, ನಗರ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸೈಯದ್ ಅಬ್ರಾರ್ ಇತರರು ಅಭಿನಂದಿಸಿ, ಶುಭಾಶಯ ಕೋರಿದರು.



ಕುಡಿಯುವ ನೀರಿನ ಘಟಕ ಸ್ಥಾಪನೆ

ಮೈಸೂರು ತಾಲೂಕಿನ ಮಲಿಯೂರು ಪಂಚಾಯತ್‌ನ ಸಿ.ವಿ.ಕೊಪ್ಪಲಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಎಬಿ ಇನ್ ಬೆವ್ ಇಂಡಿಯಾದ ಸರಬರಾಜು ವಿಭಾಗದ ಉಪಾಧ್ಯಕ್ಷ ಮಹೇಶ್ ಮಿತ್ತಲ್ ಹಸ್ತಾಂತರಿಸಿದರು. ಅಬಕಾರಿ ಉಪಅಧೀಕ್ಷಕಿ ಗೀತಾ, ಬನ್ನೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮನೋಜ್‌ಕುಮಾರ್, ಪಿಡಿಒ ಪುಟ್ಟಸ್ವಾಮಿ ಇನ್ನಿತರರಿದ್ದರು.

ಕೆಬಿಎಲ್ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಈಜುಕೊಳ ಲೋಕಾರ್ಪಣೆ



ಮೈಸೂರಿನ ಲಲಿತಾದ್ರಿಪುರದಲ್ಲಿರುವ ಕೆಬಿಎಲ್ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿರುವ ನಗರದ ಮೊದಲ ವಾರ್ಮ್ ಈಜುಕೊಳವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.

ಮೈಸೂರು, ಮಾ.31(ಜಿಎ)–ಮೈಸೂರಿನ ಲಲಿತಾದ್ರಿಪುರದಲ್ಲಿರುವ ಕೆಬಿಎಲ್ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿರುವ ನಗರದ ಮೊದಲ ವಾರ್ಮ್ ಈಜುಕೊಳವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.

ಕೆಬಿಎಲ್ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆ ಹಾಗೂ ಎಂಎಸ್‌ಪಿ ಅಕ್ವಾಟಿಕ್ಸ್ ಕ್ಲಬ್ ಸಹಯೋಗದಲ್ಲಿ ಸೋಮವಾರ ಶಾಲೆಯ ಆವರಣದಲ್ಲಿರುವ ಈಜುಕೊಳದ ಬಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀವತ್ಸ ಸ್ಪರ್ಧಿಗಳಿಗೆ ಈಜಲು ಸೂಚನೆ ನೀಡುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ನಗರದಲ್ಲಿ 10ರಿಂದ 15 ಕಡೆ ಈಜುಕೊಳಗಳಿದ್ದು ಲಲಿತಾದ್ರಿಪುರದ ಕೆಬಿಎಲ್ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಸ್ಪರ್ಧಿಗಳು, ಹೊಸದಾಗಿ ಈಜು ಕಲಿಯುವವರು, ಉತ್ತಮ ಆರೋಗ್ಯ ಕಾಪಾಡಿಕೊಳ್ಳುವವರಿಗೆ ಅನುಕೂಲವಾಗುವಂತೆ ಸುಸಜ್ಜಿತ ಈಜುಕೊಳ ನಿರ್ಮಿಸಲಾಗಿದೆ. ಲಲಿತಾದ್ರಿಪುರ ಭಾಗಕ್ಕೆ ಯಾವುದೇ ಈಜುಕೊಳವಿರಲಿಲ್ಲ. ಹಾಗಾಗಿ ಈ ಭಾಗದ ಈಜುಪ್ರಿಯರು ನಗರ ಕೇಂದ್ರದಲ್ಲಿರುವ ಈಜುಕೊಳಗಳಿಗೆ ಆಗಮಿಸುತ್ತಿದ್ದರು. ಇದೀಗ ಹೊಸ ಕೊಳ ನಿರ್ಮಾಣದಿಂದ ಆ ಕೊರತೆ ದೂರವಾಗಲಿದೆ. ಎಲ್ಲರೂ ಈ ಸೌಲಭ್ಯವನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಶ್ರೀವತ್ಸ ತಿಳಿಸಿದರು.

ನಟ ಶಂಕರ್ ಅಶ್ವಥ್ ಮಾತನಾಡಿ, ಈಜಿನಿಂದ ಆಕರ್ಷಿತನಾಗಿ ನನ್ನ ಮಗನನ್ನು ಈಜು ಪಟುವಾಗಿ ರೂಪಿಸಿದೆ. ಆತನಿಂದ ತರಬೇತಿ ಪಡೆದು ಸಾಕಷ್ಟು ಮಂದಿ ಈಜು ಕಲಿಯುವಂತಾಗಿದೆ. ಈ ಕ್ರೀಡೆಯಿಂದ ನಮ್ಮ ದೈಹಿಕ ಸಾಮರ್ಥ್ಯ ಹೆಚ್ಚಾಗುತ್ತದೆ ಎಂದರು.

ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ ಮಾತನಾಡಿ, ಈಜು ಒಂದು ಆತ್ಮರಕ್ಷಣೆ ಕಲೆಯಲ್ಲದೇ ಆರೋಗ್ಯದ ದೃಷ್ಟಿಯಿಂದ ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕಾದ ಕ್ರೀಡೆಯಾಗಿರುವ ಕಾರಣ ಮಾರ್ಗದರ್ಶಕರೊಬ್ಬರ ನೇತೃತ್ವದಲ್ಲಿ ಈಜು ಕಲಿಯಬೇಕು ಎಂದು ಸಲಹೆ ನೀಡಿ, ಮೈಸೂರಿನಲ್ಲೂ ಮಹಾನಗರ ಪಾಲಿಕೆ ವತಿಯಿಂದ ಈಜುಕೋಳವನ್ನು ನಿರ್ಮಾಣ ಮಾಡಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸರಲ್ಲಿ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕ ಡಿ.ಎಸ್.ಗುರು, ವೈ.ಎಸ್. ಪ್ರಾಪರ್ಟೀಸ್‌ನ ಕೆ.ಎನ್.ಸಂತೋಷ್, ಕೆ.ಹೆಚ್.ಕಿರಣ್, ಸೇಫ್ ವೀಲ್ ಟ್ರಾವೆಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಪ್ರಶಾಂತ್, ಕೆಬಿಎಲ್ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆ ಪ್ರಾಂಶುಪಾಲೆ ಡಾ.ದೀಪ್ತಿ ಚತುರ್ವೇದಿ, ಡಾ.ಸುಮಲಿನಿ ಬಿ.ಸ್ವಾಮಿ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.04.2025 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2025ರಿಂದ 12.04.2025 ವಿಶ್ವವಸು ನಾಮಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಅಧಿಕ ರಕ್ತದೊತ್ತಡ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ,. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಅಂಗಳ ಸಾಹಿತ್ಯ ಬಳಗ, ದೇವರತ್ನ ಫೌಂಡೇಷನ್:** ವಿದ್ಯಾರ್ಥಿ–ಯುವಜನರ ಸಮಸ್ಯೆ–ಸವಾಲು–ಪರಿಹಾರ ಕುರಿತು ವಿಚಾರ ಸಂಕಿರಣ, ಪ್ರಾಸ್ತಾವಿಕ ನುಡಿ: ಸಂಶೋಧನಾ ವಿದ್ಯಾರ್ಥಿ ವರಹಳ್ಳಿ ಆನಂದ, ಅಧ್ಯಕ್ಷತೆ : ಸಾಮಾಜಿಕ ಚಿಂತಕ ಶಿವಸುಂದರ್, ಮುಖ್ಯ ಅತಿಥಿಗಳು: ಪ್ರಗತಿಪರ ಚಿಂತಕ ಜಗ್ನೇಶ್ ಮೇವಾನಿ, ಚೇತನ್ ಅಹಿಂಸಾ, ಶಿವಪ್ರಸಾದ್, ಸವಿತಾ ಪ.ಮಲ್ಲೇಶ್, ಅಹಿಂದ ಜವರಪ್ಪ, ಸ್ಥಳ:ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಡಾ. ಶ್ರೀ ಶಿವಕುಮಾರ ಸ್ವಾಮೀಜಿಗಳ 118ನೇ ಜಯಂತಿ ಹಾಗೂ ಶ್ರೀ ವಿಷ್ಣುಸಂಕಲ್ಪ ಜ್ಯೋತಿಷ್ಯ ಕೇಂದ್ರ ಉದ್ಘಾಟನೆಯ ಪೋಸ್ಟರ್ ಬಿಡುಗಡೆ, ಸಾನ್ನಿಧ್ಯ : ಜ್ಯೋತಿಷಿ ಶ್ರೀ ವಿಷ್ಣು ಸಾಲಿಗ್ರಾಮ ಸ್ವಾಮೀಜಿ, ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಪೋಸ್ಟರ್ ಬಿಡುಗಡೆ : ಚಲನಚಿತ್ರ ನಟ ಸುಪ್ರೀತ್, ಮುಖ್ಯ ಅತಿಥಿಗಳು : ಗೋಪಾಲ್, ವೀರಗಾಸೆ ಕಲಾವಿದ ಅಂಬಳೆ ಶಿವಣ್ಣ, ಲಯನ್ ಗೋಲ್ಡನ್ ಟಿ. ಸುರೇಶ್, ಸ್ಥಳ: ನಮನಾ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 16ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ನವಾವರಣ ಪೂಜೆ, ಶ್ರೀಚಕ್ರಾರ್ಚನೆ, ಸಂಜೆ 5.30ರಿಂದ ವಿವಿಧ ಗಣಪತಿ ಮತ್ತು ಶ್ರೀ ವಾಂಛಾಕಲ್ಪಲತಾ ಶ್ರೀ ವಿದ್ಯಾಗಣೇಶ ಪರ್ಯಾಯ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಮೈಸೂರು ಅರಮನೆ ಮಂಡಳಿ:** ಯುಗಾದಿ ಹಬ್ಬದ ಪ್ರಯುಕ್ತ 'ಯುಗಾದಿ ಸಂಗೀತೋತ್ಸವ', ಸಂಜೆ 5.30ರಿಂದ 6 ಗಂಟೆವರೆಗೆ ಆಕಾಶವಾಣಿ ಕಲಾವಿದ ಆರ್.ಮೋಹನ್ ಮತ್ತು ತಂಡದಿಂದ 'ಕ್ಲಾರಿಯೋನೆಟ್ ಮತ್ತು ವಾದ್ಯ ವೈವಿಧ್ಯತೆ' ಕಾರ್ಯಕ್ರಮ. ಸಂಜೆ 6.15ರಿಂದ 6.45ರವರೆಗೆ ಕಲಾವಿದ ಡಾ.ಎಂ.ಪಿ.ಪ್ರೀತಮ್ ಮತ್ತು ತಂಡದಿಂದ ಕನ್ನಡ, ಹಿಂದಿ, ಕೊರಿಯಾ ಗೀತೆಗಳ ನೃತ್ಯ. ರಾತ್ರಿ 7ರಿಂದ 7.45ರವರೆಗೆ ದೀಪಿಕಾ ಶ್ರೀಕಾಂತ್ ತಂಡದಿಂದ ಸುಗಮ ಸಂಗೀತ. ರಾತ್ರಿ 8 ರಿಂದ 9ರವರೆಗೆ ನಿವೃತ್ತ ಅಧಿಕಾರಿ ಡಾ. ಕಾ. ರಾಮೇಶ್ವರಪ್ಪ ಅವರ ಇನಿದನಿ ಮಣ್ಣಿ ಮಕ್ಕಳ ಹೊನ್ನ ಪದಗಳ ಬಳಗ ವತಿಯಿಂದ 'ಜಾನಪದವೇ ಸತ್ಯ– ಜಾನಪದವೇ ನಿತ್ಯ' ಜಾನಪದ ಗೀತೆಗಳ ಗಾಯನ ಕಾರ್ಯಕ್ರಮಸ್ಥಳ: ಅರಮನೆ ಆವರಣ.

■ **ಶ್ರೀರಾಮ ಸೇವಾ ಮಂಡಲಿ ಚಾರಿಟಬಲ್ ಟ್ರಸ್ಟ್:** 31ನೇ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15 ರಿಂದ ಅದಿತಿ ನಡುತೊಟ್ಟ ಮತ್ತು ಕೀರ್ತಿ ಪಿ.ಬಿ.–ಶ್ರೀವತ್ಸ– ಧಿಮಂತ್ ಭಟ್ ಅವರಿಂದ ದ್ವಂದ್ವ ಗಾಯನ, ಸಂಜೆ 6.15 ರಿಂದ ವಿದುಷಿ ವಸುಧಾ ರವಿ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಎನ್. ಗುರುಮೂರ್ತಿ–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕೆ.ಎಂ.ರೇವಣ್ಣ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ತಾಜಾರಾಂ ಶಾಸ್ತ್ರಿ, ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 8.30–ಯೋಗ ಕುರಿತ ವಿಶೇಷ ಸರಣಿ ಮಹಾ ಯೋಗ, ಭಾಗವಹಿಸುತ್ತಾರೆ–ಡಾ. ವಿನಯ್ ಕುಮಾರ್ ಎಸ್, ಪ್ರಸ್ತುತಿ : ನೂತನ. ಎಸ್. ಕದಂ, 8.35ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಆರ್.ಎನ್.ಶ್ರೀಲತಾ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್ ಎಂ.ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ: ಅಂಜನಾ. ಡಿ. ಕುಂಬ್ಳೆ, 12.45 ಯಾರು ಕಾಣದ ಪ್ರವಾಸಿ ತಾಣ, ನಾಗಮಂಗಲ ತಾಲೂಕಿನ ಪಂಚಕೂಟ ಬಸದಿಗಳನ್ನು ಪರಿಚಯಿಸುತ್ತಾರೆ–ತೈಲೂರು ವೆಂಕಟಕೃಷ್ಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಸೇತು ಭಾರತಂ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು: ಎಂ.ವಿ.ಪ್ರಭಾಮಣಿ, 2.40–ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಂಬೆ ಸಹೋದರಿಯರು–ಹಾಡುಗಾರಿಕೆ, 4.00 ಕಥಾಕಾಲಕ್ಷೇಪ–ಶ್ರೀರಾಮ ಪಟ್ಟಾಭಿಷೇಕ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ದತ್ತು ಗ್ರಾಮ ಯೋಜನೆ ಮೂಲಕ ಗ್ರಾಮೀಣ ಅಭಿವೃದ್ಧಿ ಕುರಿತು ಸಂವಾದ. ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಜಿ.ಎಸ್.ಯೋಗೀಶ್ ಮತ್ತು ಗುಂಡ್ಲುಪೇಟೆ ತಾಲೂಕು ದೊಡ್ಡತಿಪ್ಪೂರು ಗ್ರಾಮದ ಎಂ.ಶಶಿಕುಮಾರ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಸಂಸತ್ ಸಮೀಕ್ಷಾ. 8.15 ನಾಟಕ: ಮೈಲಿಗೆ, ರಚನೆ–ತ್ರಿಪುರಾಂತಕ ಜಿ.ಎಲ್., ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಲಾಜಿ ಶಂಕರ್–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಮೈಸೂರು ಮೂಲದ ವೈದ್ಯರ ಅಪಹರಿಸಿ ಹತ್ಯೆಗೈದಿದ್ದ ಮೂವರಿಗೆ ಜೈಲು

ಶಾಬಾ ಷರೀಫ್‌ರನ್ನು 2019ರಲ್ಲಿ ಅಪಹರಿಸಿ ಕೇರಳದ ನಿಲಂಬೂರಿನಲ್ಲಿ ವರ್ಷವಿಡೀ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದ ಪ್ರಕರಣವಿದು


ಶಾಬಾ ಷರೀಫ್

ಮೈಸೂರು/ಮಲಪ್ಪುರಂ (ಕೇರಳ), ಮಾ. 31(ಆರ್‌ಕೆ)– ಮೈಸೂರಿನಲ್ಲಿ ಸಾಂಪ್ರದಾಯಿಕ ಮದ್ದು ನೀಡುತ್ತಿದ್ದ ವೈದ್ಯ ಶಾಬಾ ಷರೀಫ್ ಅವರನ್ನು ಅಪಹರಿಸಿ ಹತ್ಯೆಗೈದಿದ್ದ ಮೂವರು ಹಂತಕರಿಗೆ ಕೇರಳದ ಮಂಜೇರಿಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಕಠಿಣ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಶೈಬಿನ ಅಶ್ರಫ್(37), ಪಿ. ಶಿಹಾಬುದ್ದೀನ್(36), ನಿಶಾದ್ ನಡುತೋದಿಕ (32) ಶಿಕ್ಷೆಗೆ ಗುರಿಯಾದವರು.

ಶೈಬಿನ ಅಶ್ರಫ್‌ಗೆ 13 ವರ್ಷ, 9 ತಿಂಗಳು, 2.44 ಲಕ್ಷ ರೂ. ದಂಡ, ಶಿಹಾಬುದ್ದೀನ್‌ಗೆ 8 ವರ್ಷ, 9 ತಿಂಗಳು, 60,000 ರೂ. ದಂಡ ಮತ್ತು ನಿಶಾದ್‌ಗೆ 5 ವರ್ಷ 9 ತಿಂಗಳ ಜೈಲು ಶಿಕ್ಷೆ ಹಾಗೂ 45,000 ರೂ. ದಂಡ ವಿಧಿಸಿ ನ್ಯಾಯಾಧೀಶ ಎಂ. ತುಷಾರ ತೀರ್ಪು ನೀಡಿದ್ದಾರೆ.

ಮೈಸೂರಿನ ಬೋಗಾದಿಯ 2ನೇ ಹಂತದ ನಿವಾಸಿ ಶಾಬಾ ಷರೀಫ್(60) ಅವರನ್ನು 2019ರ ಆಗಸ್ಟ್ 1ರಂದು ಅಪಹರಿಸಿ 2020ರ ಅಕ್ಟೋಬರ್ 20ರಂದು ಕೇರಳದ ನಿಲಂಬೂರಿನ ಮನೆಯೊಂದರಲ್ಲಿ ಚಿತ್ರಹಿಂಸೆ ನೀಡಿ ಹತ್ಯೆ ಮಾಡಲಾಗಿತ್ತು.

ಷರೀಫ್ ಅವರು ಮೈಸೂರಿನ ಬೋಗಾದಿ 2ನೇ ಹಂತದಲ್ಲಿ ಪೈಲ್ಸ್ ಕ್ಲಿನಿಕ್ ನಡೆಸುತ್ತಿದ್ದರು. ಅವರು ಚಿಕಿತ್ಸೆಯ ಪರಿಣಾಮಕಾರಿ ಕೈಗುಣದಿಂದಾಗಿ ಚಿರಪರಿಚಿತರಾಗಿ ಅಪಾರ ಜನಪ್ರಿಯತೆಯನ್ನೂ ಗಳಿಸಿದ್ದರು. ಷರೀಫ್ ಅವರ ಅಪಹರಣದ ಹಿಂದೆ ಮಧ್ಯಪ್ರಾಚ್ಯದಲ್ಲಿ ನೆಲೆಸಿದ್ದ ಉದ್ಯಮಿ ಶೈಬಿನ ಅಶ್ರಫ್ ಮಾಸ್ಟರ್ ಮೈಂಡ್ ಕೈವಾಡವಿರುವುದಾಗಿ ಪೊಲೀಸರು ದೋಷಾರೋಪಣಾ ಪಟ್ಟಿಯಲ್ಲಿ ತಿಳಿಸಿದ್ದರು.

ಷರೀಫ್‌ರನ್ನು ನಿಲಂಬೂರಿಯ ಅಶ್ರಫ್ ಮನೆಯಲ್ಲಿ ಒಂದು ವರ್ಷ ಕಾಲ ಒತ್ತೆಯಾಳಾಗಿರಿಸಿ ಚಿತ್ರಹಿಂಸೆ ನೀಡಲಾಗಿತ್ತು. ಅವರಿಂದ ಪೈಲ್ಸ್ ಗುಣಪಡಿಸುವ ಮದ್ದು ರಹಸ್ಯ ಸೂತ್ರ ತಿಳಿದುಕೊಂಡು ತಾವು ಕ್ಲಿನಿಕ್ ಪ್ರಾರಂಭಿಸಲು ಆರೋಪಿಗಳು ಪ್ರಯತ್ನಿಸಿದ್ದರಾದರೂ, ಷರೀಫ್ ಗುಟ್ಟುಬಿಟ್ಟುಕೊಡಲು ನಿರಾಕರಿಸಿದ್ದರು.

ದೀರ್ಘ ಕಾಲದ ಚಿತ್ರಹಿಂಸೆ ನಂತರ ಷರೀಫ್, 2020ರ ಅಕ್ಟೋಬರ್ 8ರಂದು ಸಾವನ್ನಪ್ಪಿದ್ದರು. ಮರುದಿನ ಅಶ್ರಫ್ ಮತ್ತು ಸಹಚರರು ಮೃತದೇಹವನ್ನು ತುಂಡು ತುಂಡಾಗಿ ಕತ್ತರಿಸಿ ನಿಲಂಬೂರ್ ಬಳಿಯ ಸೀರೇಹಾಜಿ ಸೇತುವೆಯಿಂದ ಚಾಲಿಯಾರ ನದಿಗೆ ಎಸೆದಿದ್ದರು.

ಈ ಕೊಲೆ ಪ್ರಕರಣ ಸುಮಾರು ಒಂದೂವರೆ ವರ್ಷ ಕಾಲ ಹೊರ ಬಂದಿರಲಿಲ್ಲ. 2022ರ ಏಪ್ರಿಲ್ ತಿಂಗಳಲ್ಲಿ ಶೈಬಿನ ಸಹಚರರ ಪೈಕಿ ಮೂವರು ತಿರುವನಂತಪುರಂನ ಸಚಿವಾಲಯದ ಮುಂದೆ ಆತ್ಮಾಹುತಿಗೆ ಯತ್ನಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿತ್ತು.

ಮುಕ್ಕುಟದಲ್ಲಿರುವ ಶೈಬಿನ ಮನೆಯಿಂದ 3 ಲಕ್ಷ ರೂ. ನಗದು ಮತ್ತು ಕಂಪ್ಯೂಟರ್ ಕಳವು ಮಾಡಿದ್ದ ಮೂವರು, ಪ್ರತೀಕಾರದ ಭಯದಿಂದ ಈ ಕೃತ್ಯಕ್ಕಿಳಿದಿದ್ದರು. ಶೈಬಿನ ದೂರಿನ ಮೇರೆಗೆ ಕಳವು ಪ್ರಕರಣದ ತನಿಖೆ ನಡೆಸುತ್ತಿದ್ದ ಪೊಲೀಸರಿಗೆ ಮೈಸೂರು ವೈದ್ಯನನ್ನು ಅಪಹರಿಸಿ ಚಿತ್ರಹಿಂಸೆ ನೀಡಿ ಹತ್ಯೆಗೈದಿದ್ದಾರೆಂಬ ಆಘಾತಕಾರಿ ಮಾಹಿತಿಯನ್ನು ಅವರು ವಿಚಾರಣೆ ವೇಳೆ ಬಹಿರಂಗಪಡಿಸಿದ್ದರು. ಕಳ್ಳತನದ ದೂರು ನೀಡಿದ್ದ ಶೈಬಿನ, ಈ ಭೀಕರ ಹತ್ಯೆ ಅಪರಾಧದ ಹಿಂದಿನ ಸೂತ್ರಧಾರಿ ಎಂಬುದು ಬಹಿರಂಗವಾಗಿತ್ತು.

ಕೂದಲೆಳೆಯಿಂದ ಹಂತಕರಿಗೆ ಶಿಕ್ಷೆ!

ಮೈಸೂರು/ಮಲಪ್ಪುರಂ (ಕೇರಳ), ಮಾ.31(ಆರ್‌ಕೆ)– ಮೈಸೂರಿನಲ್ಲಿ ಸಾಂಪ್ರದಾಯಿಕ ಮದ್ದು ನೀಡುವ ವೈದ್ಯ ಶಾಬಾ ಷರೀಫ್ ಹತ್ಯೆ ಪ್ರಕರಣದಲ್ಲಿ ಮೃತದೇಹ ಇಲ್ಲ ಇನ್ನಾವುದೇ ಅವಶೇಷಗಳು ಲಭ್ಯವಿಲ್ಲವಾದರೂ, ಆರೋಪಿಗಳಿಗೆ ಶಿಕ್ಷೆ ವಿಧಿಸಲು ಕೂದಲೆಳೆ ಪೊಲೀಸರಿಗೆ ಬ್ರಹ್ಮಾಸ್ತ್ರವಾಗಿದೆ.

2020ರಲ್ಲಿ ವೈದ್ಯನ ಮೃತದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಚಾಲಿಯಾರ ನದಿಗೆ ಎಸೆಯಲಾಗಿತ್ತು. ಹಾಗಾಗಿ ತನಿಖೆಗಿಳಿದ ಪೊಲೀಸರಿಗೆ ದೇಹ ಲಭ್ಯವಾಗಲಿಲ್ಲ. ಆದರೆ ಪ್ರಮುಖ ಆರೋಪಿ ಶೈಬಿನ ಅಶ್ರಫ್ ಕಾರಿನಲ್ಲಿ ಕಂಡುಬಂದ ಒಂದು ಕೂದಲೆಳೆಯು ಹತ್ಯೆಗೀಡಾಗಿದ್ದ ಶಾಬಾ ಷರೀಫ್ ಅವರ ಹತ್ಯೆಗೆ ಬಲವಾದ ಸಾಕ್ಷ್ಯವಾಯಿತು.

ತನಿಖೆ ವೇಳೆ 42 ಕೂದಲೆಳೆಗಳನ್ನು ಸಂಗ್ರಹಿಸಿ ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿತ್ತು. ಷರೀಫ್‌ಗೆ ಸೇರಿದ ಒಂದೇ ಒಂದು ಕೋಶದ ಮೈಟೋಕಾಂಡ್ರಿಯಾ ಡಿಎನ್‌ಎ ಪರೀಕ್ಷೆಯಿಂದ ಕೊಲೆಯಾದವರ ಗುರುತು ದೃಢಪಟ್ಟಿತ್ತು.

ಕೊಲೆ ಸಾಕ್ಷ್ಯ ನಾಶ ಮಾಡಲು ಆರೋಪಿಗಳು ಸಾಕಷ್ಟು ಪ್ರಯತ್ನಿಸಿದ್ದರಾದರೂ, ಕೂದಲಿನ ಎಳೆಯಿಂದ ಪಡೆದ ಡಿಎನ್‌ಎ ಹೊಂದಾಣಿಕೆಯು ಆರೋಪಿಗಳಿಗೆ ಶಿಕ್ಷೆ ವಿಧಿಸಲು ಪ್ರಮುಖ ವೈಜ್ಞಾನಿಕ ಸಾಕ್ಷ್ಯವಾಯಿತು ಎಂದು ತನಿಖಾಧಿಕಾರಿಗಳು ಹಾಗೂ ಸರ್ಕಾರಿ ಅಭಿಯೋಜಕರು ತಿಳಿಸಿದ್ದಾರೆ.

ಈ ಮಧ್ಯೆ 2019ರಲ್ಲಿ ವೈದ್ಯ ಶಾಬಾ ಷರೀಫ್ ಕುಟುಂಬದವರು ಮೈಸೂರಲ್ಲಿ ನೀಡಿದ್ದ ನಾಪತ್ತೆ ದೂರಿನ ಮೂಲಕ ಪೊಲೀಸರು ಷರೀಫ್ ಅವರ ಗುರುತು ಪತ್ತೆ ಮಾಡಿದ್ದು, ಇದೂ ಸಹ ಆರೋಪಿಗಳಿಗೆ ಶಿಕ್ಷೆ ವಿಧಿಸಲು ಕಾರಣವಾಗಿದೆ.

ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ: 2 ವರ್ಷದ ಮಗು ಸಾವು

ಐವರಿಗೆ ಗಾಯ

ಮೈಸೂರು, ಮಾ.31(ಆರ್‌ಕೆ)– ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಎರಡು ವರ್ಷದ ಮಗು ಸಾವನ್ನಪ್ಪಿ, ಐವರು ಗಾಯಗೊಂಡಿರುವ ಘಟನೆ ಮೈಸೂರಿ ರಿಂಗ್ ರಸ್ತೆಯಲ್ಲಿ ಸೋಮವಾರ ಸಂಜೆ ಸಂಭವಿಸಿದೆ.

ಬೆಂಗಳೂರಲ್ಲಿ ನೆಲೆಸಿರುವ ಉಡುಪಿ ಮೂಲದ ನರೇಶ್ ಅವರ ಪುತ್ರಿ ಮೈಥಿಲಿ ಅಪಘಾತದಲ್ಲಿ ಸಾವನ್ನಪ್ಪಿದ್ದು, ಕಾರು ಚಾಲನೆ ಮಾಡುತ್ತಿದ್ದ ನರೇಶ್, ಅವರ ಪತ್ನಿ, ಅತ್ತೆ, ಬಾವ, ಬಾಮೈದ ಗಾಯಗೊಂಡಿದ್ದಾರೆ.

ಕೇರಳದ ವೈನಾಡಿಗೆ ಪ್ರವಾಸಕ್ಕೆ ತೆರಳಿದ್ದ ಇವರು ಮೈಸೂರು ರಿಂಗ್ ರಸ್ತೆ ಮೂಲಕ ಬೆಂಗಳೂರಿಗೆ ವಾಪಸ್ಸಾಗುವಾಗ ಸೋಮವಾರ ಸಂಜೆ 6.30ರ ವೇಳೆಯಲ್ಲಿ ಈ ದುರ್ಘಟನೆ ಸಂಭವಿಸಿದೆ. ವಿಜಯನಗರ ನಾಲ್ಕನೇ ಹಂತದ ಬಸವನಹಳ್ಳಿ ಜಂಕ್ಷನ್ ಹಾಗೂ ಹಿನಕಲ್ ಫ್ಲೈಓವರ್ ಜಂಕ್ಷನ್ ನಡುವೆ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ ಚಾಲಕನ ಪಕ್ಕದ ಆಸನದಲ್ಲಿದ್ದ ಮಗುವಿಗೆ ಬಲವಾದ ಪೆಟ್ಟು ಬಿದ್ದಿದೆ. ಕೂಡಲೇ ಆ ಮಗುವನ್ನು ಜಯನಗರದ ಕಾಂಗರು ಕೇರ್ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಗಿ ತಿಳಿದು ಬಂದಿದೆ.

ನರೇಶ್ ಸೇರಿದಂತೆ ಗಾಯಗೊಂಡಿರುವ ಐವರನ್ನು ಡಿಆರ್‌ಎಂ ಹಾಗೂ ಬೃಂದಾವನ ಆಸ್ಪತ್ರೆಗೆ ದಾಖಲಿಸಲಾಗಿದೆ. ಮುಂದಿನ ಆಸನದಲ್ಲಿ ಮಗುವಿನೊಂದಿಗೆ ಯಾರು ಕುಳಿತಿದ್ದರು, ಗಾಯಾಳುಗಳ ಹೆಸರು ಸೇರಿದಂತೆ ಹೆಚ್ಚಿನ ವಿವರ ಸದ್ಯಕ್ಕೆ ಲಭ್ಯವಾಗಿಲ್ಲ. ವಿವಿಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ: ಸವಾರು ಸಾವು

ಮೈಸೂರು, ಮಾ.31(ಎಸ್‌ಬಿಡಿ)– ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಕಡಕೊಳ ಗ್ರಾಮದ ಬಳಿ ಯುಗಾದಿ ದಿನ ಸಂಭವಿಸಿದೆ.

ದೊಡ್ಡಕಾನ್ಯ ಗ್ರಾಮದ ಸಾಯಿರಾಜು(29) ಅಪಘಾತದಲ್ಲಿ ಮೃತಪಟ್ಟವರು. ಇವರು ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿರುವ ಆಟೋಮಷೀನ್ ಕಂಪನಿಯೊಂದರಲ್ಲಿ ಸೂಪರ್‌ವೈಸರ್ ಆಗಿದ್ದರು.

ಭಾನುವಾರ ಕಂಪನಿಗೆ ರಜೆ ಇತ್ತಾದರೂ ವೈಯಕ್ತಿಕ ಕೆಲಸ ನಿಮಿತ್ತ ತಮ್ಮ ಅಪ್ಪಾಚಿ ಆರ್‌ಟಿಆರ್ ಬೈಕ್(ಕೆಎ–09, ಹೆಚ್‌ಟಿ–3257)ನಲ್ಲಿ ತಾಂಡವಪುರಕ್ಕೆ ಹೋಗಿದ್ದರು. ಸಂಜೆ 5 ಗಂಟೆ ವೇಳೆಯಲ್ಲಿ ಗ್ರಾಮಕ್ಕೆ ವಾಪಸ್ಸಾಗುವಾಗ ಕಡಕೊಳ ಟಿವಿಎಸ್ ಫ್ಯಾಕ್ಟರಿ ರಸ್ತೆಯಲ್ಲಿ ಬೈಕ್ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದ ಕಾರಣ ಸಾಯಿರಾಜು ಸ್ಥಳದಲ್ಲೇ ಮೃತಪಟ್ಟಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದ ಮೈಸೂರು ದಕ್ಷಿಣ ಠಾಣೆ ಪೊಲೀಸರು, ಸಾಯಿರಾಜು ದೇಹವನ್ನು ಮೈಸೂರು ವೈದ್ಯಕೀಯ ಹಾಗೂ ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸಾಗಿಸಿ, ವೈದ್ಯಕೀಯ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವ



ಅರಮನೆ ಮಂಡಳಿಯಿಂದ ಸಂಗೀತ ರಸದೌತಣ



ಯುಗಾದಿ ಸಂಗೀತೋತ್ಸವಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಶಾಸಕ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಅರಮನೆ ಆಡಳಿತ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮತ್ತಿತರರಿದ್ದರು. ಮತ್ತೊಂದು ಚಿತ್ರದಲ್ಲಿ ಖ್ಯಾತ ಗಾಯಕ ನವೀನ್ ಸಜ್ಜು ಮತ್ತು ತಂಡದಿಂದ ಗಾನಾಮೃತ ಸಂಗೀತ ಕಾರ್ಯಕ್ರಮ ನಡೆಯಿತು

ಮೈಸೂರು, ಮಾ.31(ಎಂಕೆ)– ಅಂದದ ಮೈಸೂರು ಅರಮನೆ ಆವರಣದಲ್ಲಿ ಮೇಳೈಸಿದ ಸಂಗೀತ ಗಾನಾಮೃತ... ಯುಗಾದಿ ಸಂವತ್ಸರಕ್ಕೆ ಸಂಗೀತೋತ್ಸವದ ಮುನ್ನುಡಿ...!

ಮೈಸೂರು ಅರಮನೆ ಮಂಡಳಿ ವತಿಯಿಂದ ಅರಮನೆ ಆವರಣದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಆಯೋಜಿಸಿರುವ 'ಯುಗಾದಿ ಸಂಗೀತೋತ್ಸವ'ದಲ್ಲಿ ಸಂಗೀತದ ನಾದ–ನಿನಾದ ಕಲಾಭಿಮಾನಿಗಳ ಮನ ಸೂರೆಗೊಂಡಿತು. ಯುಗಾದಿ ಹಬ್ಬ (ಮಾ.30)ದ ದಿನದಂದು ಭವ್ಯ ಚಾಲನೆ ಪಡೆದ ಸಂಗೀತೋತ್ಸವದಲ್ಲಿ ಮೊದಲ ದಿನ ಖ್ಯಾತ ಹಿನ್ನಲೆ ಗಾಯಕ ಅಜಯ್ ವಾರಿಯರ್, ಇಂದು ನಾಗರಾಜ್, ಕಂಬದ ರಂಗಯ್ಯ, ಶಶಿಕಲಾ ಮತ್ತು ತಂಡ ಸಂಗೀತ ರಸದೌತಣ ನೀಡಿದರೆ, ಎರಡನೇ ದಿನವಾದ ಸೋಮವಾರ ಗಾನಮೃತದ ಸವಿ ನೀಡಲಾಯಿತು.

ಉಪ್ಪುಂದ ರಾಜೇಶ್ ಪಡಿಯಾರ್ ಮತ್ತು ತಂಡದ 'ಕನ್ನಡವೇ ಸತ್ಯ ಸುಗಮ ಸಂಗೀತ' ಕಿವಿಗೆ ಇಂಪು ನೀಡಿದರೆ, ಕು.ಅನನ್ಯ ಮತ್ತು ತಂಡದ ಭರತನಾಟ್ಯ ಪ್ರದರ್ಶನ ರೋಮಾಂಚನಗೊಳಿಸಿತು. ನಂತರ ವಿ. ರವಿಕುಮಾರ್ ಮತ್ತು ತಂಡ, ಮಲಯ ಮಾರುತ ಚಿತ್ರದ 'ಶಾರದೆ ದಯೆ ತೋರಿದೆ', ಚಲಿಸುವ ಮೋಡಗಳು ಚಿತ್ರದ 'ಜೇನಿನ ಹೊಳೆಯೋ ಹಾಲಿನ ಮಳೆಯೋ', ಶ್ರೀ ಕೃಷ್ಣದೇವರಾಯ ಚಿತ್ರದ' 'ಶ್ರೀ ಚಾಮುಂಡೇಶ್ವರಿ ಅಮ್ಮ', ಹೊಸಬೆಳಕು ಚಿತ್ರದ 'ಹೊಸಬೆಳಕು ಮೂಡುತ್ತಿದೆ' ಹತ್ತಾರು ಸುಮಧುರ ಗೀತೆಗಳನ್ನು ಹಾಡಿ ನೆರೆದಿದ್ದವರ ಮನಗೆದ್ದರು.

ಗಾನಾಮೃತ: ನಂತರ ವೇದಿಕೆಗೆ ಆಗಮಿಸಿದ ಖ್ಯಾತ ಹಿನ್ನಲೆ ಗಾಯಕ ನವೀನ್ ಸಜ್ಜು ಮತ್ತು ತಂಡ ಸಂಗೀತ ಪ್ರಿಯರಿಗೆ ಗಾನಾಮೃತ ನೀಡಿತು. ಕನಕ ಚಿತ್ರದ 'ಹೋಗುಮ ಹೋಗುಮ ಲಾಂಗ್ ಡ್ರೈವ್ ಹೋಗುಮ', 'ಒಳಿತು ಮಾಡು ಮನುಷ್ಯ ನೀ ಇರೋದು ಮೂರು ದಿವಸ', 'ಗುರುವೆ ನಿನ್ನಾಟ ಬಲ್ಲವರ್ಯಾರಾರೋ' ಸೇರಿದಂತೆ ಹತ್ತಕ್ಕೂ ಹೆಚ್ಚು ಜನಪ್ರಿಯ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಎಲ್ಲರನ್ನು ರಂಜಿಸಿದರು.

ಚಾಲನೆ: ಮೂರು ದಿನಗಳ 'ಯುಗಾದಿ ಸಂಗೀತೋತ್ಸವ'ಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಭಾನುವಾರ ಚಾಲನೆ ನೀಡಿದ್ದರು. ಶಾಸಕ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಅರಮನೆ ಆಡಳಿತ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮತ್ತಿತರರಿದ್ದರು.

ಗಾಯಕಿ ರಮಾಮಣಿಯವರಿಗೆ 'ಸಂಗೀತ ಕಲಾರಾಧಕಿ' ಪ್ರಶಸ್ತಿ ಪ್ರದಾನ



31ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ವಿದುಷಿ ಆರ್.ಎ.ರಮಾಮಣಿ ಸಂಗೀತ ಕಛೇರಿ ಸೋಮವಾರ ನಡೆಸಿಕೊಟ್ಟರು.

ಮೈಸೂರು, ಮಾ.31(ಎಸ್‌ಪಿಎನ್)– ಹಿರಿಯ ಗಾಯಕಿ ವಿದುಷಿ ಆರ್.ಎ.ರಮಾಮಣಿ ಅವರಿಗೆ 'ಸಂಗೀತ ಕಲಾರಾಧಕಿ' ಪ್ರಶಸ್ತಿಯನ್ನು ಸೋಮವಾರ ಪ್ರದಾನ ಮಾಡಲಾಯಿತು. ಮೈಸೂರು ಕಾಳಿದಾಸ ರಸ್ತೆಯ ವಿವಿ ಮೊಹಲ್ಲಾದ ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಮೈಸೂರಿನ ತ್ಯಾಗರಾಜ ಸಂಗೀತ ಸಭಾ ಪ್ರಾಯೋಜಕತ್ವದಲ್ಲಿ ನಡೆದ 31ನೇ ಶ್ರೀರಾಮನವಮಿ ಸಂಗೀತೋತ್ಸವ ಇಂದಿ (ಸೋಮವಾರ) ನಿಂದ ಏ.9ರವರೆಗೆ ಹಮ್ಮಿಕೊಂಡಿರುವ ಸಂಗೀತ ಗಾಯನ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಆರ್.ಅನಂತರಾಮು ಮಾತನಾಡಿ, ಕಳೆದ 30 ವರ್ಷಗಳಿಂದ ಶ್ರೀ ರಾಮನವಮಿ ಪ್ರಯುಕ್ತ ನಾಡಿನ ವಿವಿಧ ಜಿಲ್ಲೆಗಳಿಂದ ಪ್ರಸಿದ್ಧ ಗಾಯಕರಿಂದ ಸಂಗೀತೋತ್ಸವನ್ನು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ವಿದುಷಿ ಆರ್.ಎ.ರಮಾಮಣಿ ಅವರಿಗೆ ಕಲಾರಾಧಕಿ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಈ ವೇಳೆ ಉಪಾಧ್ಯಕ್ಷ ಹೆಚ್.ಕೆ. ನರಸಿಂಹಮೂರ್ತಿ, ಕಾರ್ಯದರ್ಶಿ ಕೆ.ಎಸ್.ಎನ್.ಪ್ರಸಾದ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ತ್ಯಾಗರಾಜ ಸಂಗೀತ ಸಭಾ ಕಾರ್ಯಕ್ರಮ ಆಯೋಜಿಸಿದ್ದರು. ವಿದ್ವಾನ್ ಶ್ರೀಕಾಂತ್(ಪಿಟೀಲು), ತುಮಕೂರು ಬಿ.ರವಿಶಂಕರ್(ಮೃದಂಗ), ವಿದ್ವಾನ್ ಶರತ್ ಕೌಶಿಕ್(ಘಟಂ) ನುಡಿಸಿ, ಕಾರ್ಯಕ್ರಮಕ್ಕೆ ಮೆರಗು ತಂದರು.

ಇಂದಿನಿಂದ ಹಾಲು, ವಿದ್ಯುತ್ ದರ ಏರಿಕೆಗೆ ಖಂಡನೆ

ಮೈಸೂರು, ಮಾ.31(ಎಸ್‌ಪಿಎನ್)– ಏಪ್ರಿಲ್ 1ರಿಂದ ಅನ್ವಯವಾಗುವಂತೆ ಹಾಲು ಮತ್ತು ವಿದ್ಯುತ್ ದರವನ್ನು ಹೆಚ್ಚಿಸಲು ನಿರ್ಧಾರ ಕೈಗೊಂಡಿರುವ ರಾಜ್ಯ ಸರ್ಕಾರದ ನಿಲುವು ಜನವಿರೋಧಿಯಾಗಿದೆ ಎಂದು ಎಐಯುಟಿಯುಸಿ ಕರ್ನಾಟಕ ರಾಜ್ಯ ಸಮಿತಿ ಆರೋಪಿಸಿದೆ.

ಒಂದು ಲೀಟರ್ ಹಾಲಿನ ಬೆಲೆ ನಾಲ್ಕು ರೂ. ಹಾಗೂ ಕೆಪಿಟಿಸಿಎಲ್‌ನ ವಿವಿಧ ನಿಗಮಗಳು ಪ್ರತಿ ಯೂನಿಟ್‌ಗೆ 0.36 ಪೈಸೆ ಹೆಚ್ಚಿಸಿರುವುದು ಜನ ವಿರೋಧಿಯಾಗಿದೆ. ಈಗಾಗಲೇ ನೀರಿನ ದರ, ಬಸ್ ಟಿಕೆಟ್ ದರ ಏರಿಕೆ ಮಾಡಿರುವುದಕ್ಕೆ ಜನ ಸಾಮಾನ್ಯರ ಬದುಕು ಬೀದಿಗೆ ಬಂದಿದೆ. ಇದೀಗ ಮತ್ತೆ ಹಾಲು ಮತ್ತು ವಿದ್ಯುತ್ ದರ ಏರಿಕೆಯ ನಿರ್ಧಾರ ದುಡಿಯುವ ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಕಿಡಿಕಾರಿದೆ.

ಜನ ಸಾಮಾನ್ಯರು ಹಾಗೂ ಅಸಂಘಟಿತ ಕಾರ್ಮಿಕರಿಗೆ ಸ್ಕೀಮ್ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರ ವೇತನ ಹೆಚ್ಚಳ ಮಾಡದಿರುವುದರಿಂದ ಅವರ ಕೊಳ್ಳುವ ಸಾಮರ್ಥ್ಯವೂ ಕುಗ್ಗಿದೆ. ಹಾಗಾಗಿ ಈ ದರ ಏರಿಕೆಯು ಅವರ ಜೀವನವನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ ಎಂದು ಆರೋಪಿಸಿದೆ.

ಆದ್ದರಿಂದ ಈ ಜನವಿರೋಧಿ ಹಾಲಿನ ದರ ಏರಿಕೆಯನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕೆಂದು ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಕರ್ನಾಟಕ ರಾಜ್ಯ ಸಮಿತಿ ರಾಜ್ಯ ಕಾರ್ಯದರ್ಶಿ ಕೆ.ಸೋಮಶೇಖರ್ ಯಾದಗಿರಿ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.


ಯು ಡಿಜಿಟಲ್ ವಾರ್ಷಿಕೋತ್ಸವ; ಲಾಗೈಡ್ ಹೆಚ್.ಎನ್.ವೆಂಕಟೇಶ್ ಅವರಿಗೆ ಸನ್ಮಾನ...



ಸಾಂಸ್ಕೃತಿಕ ನಗರಿ ಮೈಸೂರಿನ ಹೆಮ್ಮೆಯ ಯು ಡಿಜಿಟಲ್ ಸಂಸ್ಥೆಯ 5ನೇ ವಾರ್ಷಿಕೋತ್ಸವ ಸಮಾರಂಭವನ್ನು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿತ್ತು. ಮೈಸೂರಿನ ಮಂಜು ನೇತೃತ್ವದ ಯು ಡಿಜಿಟಲ್ ಸಂಸ್ಥೆಯ 5ನೇ ವಾರ್ಷಿಕೋತ್ಸವದಲ್ಲಿ ಪಬ್ಲಿಕ್ ಟಿವಿ ಎಚ್.ಆರ್.ರಂಗನಾಥ್, ನ್ಯೂಸ್ ಫಸ್ಟ್‌ನ ಮುಖ್ಯಸ್ಥ ಎಸ್.ರವಿಕುಮಾರ್, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಸೇರಿ ಹಲವರು ಉಪಸ್ಥಿತರಿದ್ದರು. ಮೈಸೂರಿನ 'ಲಾಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್ ಅವರನ್ನು ಮೈಸೂರು ಪೇಟ ತೊಡಿಸಿ, ಹಾರ ಶಾಲು ಹಾಕಿ, ನೆನಪಿನ ಕಾಣಿಕೆ ನೀಡಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಮಂಡ್ಯ ಶಾಸಕ ರವಿ ಗಣಿಗ ಅವರನ್ನು ಅಭಿನಂದಿಸಲಾಯಿತು.

ಮಂಡ್ಯ ಮಾಜಿ ಎಸ್‌ಪಿ ಯತೀಶ್, ಮೈಸೂರು ಮಾಜಿ ಎಸಿಪಿ ಶಾಂತಮಲ್ಲಪ್ಪ ಸೇರಿ 369 ಪೊಲೀಸರಿಗೆ ಮುಖ್ಯಮಂತ್ರಿ ಪದಕ


ಎನ್.ಯತೀಶ್


ಶಾಂತಮಲ್ಲಪ್ಪ


ವಿ.ಚೇತನ್


ತಖಿಉಲ್ಲಾ

ಬೆಂಗಳೂರು, ಮಾ. 31– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸ್ ಧ್ವಜ ದಿನಾಚರಣೆಯಾದ ಏಪ್ರಿಲ್ 2ರಂದು ಬೆಂಗಳೂರಿನ ಕೆಎಸ್‌ಆರ್‌ಪಿ ಕವಾಯತು ಮೈದಾನದಲ್ಲಿ 2022, 23, 24ನೇ ಸಾಲಿನ ಒಟ್ಟು 369 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಲಿದ್ದಾರೆ.

ಮಂಡ್ಯ ಹಿಂದಿನ ಎಸ್ಪಿ ಹಾಲಿ ಮಂಗಳೂರು ಎಸ್ಪಿಯಾಗಿರುವ ಎನ್. ಯತೀಶ್ 2023ನೇ ಸಾಲಿನ ಪದಕ ಸ್ವೀಕರಿಸಲಿದ್ದಾರೆ.

ಮೈಸೂರು ಸಿಎಆರ್‌ನ ಆರ್‌ಪಿಐ ಕೆ.ಎಂ. ಮೂರ್ತಿ, ಮೈಸೂರು ಜಿಲ್ಲೆ ದಕ್ಷಿಣ ಉಪವಿಭಾಗದ ಕಚೇರಿಯ ಕಾನ್‌ಸ್ಟೇಬಲ್ ಎಂ. ನಾರಾಯಣ, ವಿಜಯನಗರ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ವಿ.ಆರ್. ಸಬರೀಶ್ (ಹಾಲಿ ಮೇಟಗಳ್ಳಿ ಠಾಣೆ ಎಸ್‌ಐ), ಮಂಡ್ಯ ಜಿಲ್ಲೆ ನಾಗಮಂಗಲ ಸರ್ಕಲ್ ಇನ್‌ಸ್ಪೆಕ್ಟರ್ ಕೆಎನ್. ಸುಧಾಕರ್, ಮಡಿಕೇರಿ ಸಿಐಡಿ ಅರಣ್ಯ ಘಟಕದ ಸಬ್‌ಇನ್‌ಸ್ಪೆಕ್ಟರ್ ಸಿ.ಯು. ಸವಿ, ಕೊಡಗು ಜಿಲ್ಲೆ ಡಿಸಿಆರ್‌ಬಿ ಹೆಡ್ ಕಾನ್‌ಸ್ಟೇಬಲ್ ಎಂ.ಎನ್. ನಿರಂಜನ್, ಹಾಸನ ಜಿಲ್ಲೆ ಕೆಎಸ್‌ಆರ್‌ಪಿ 11ನೇ ಪಡೆಯ ಆರ್‌ಹೆಚ್‌ಸಿ ಬಿವೈ ಕಾಂತರಾಜು, ಹಾಸನ ಪಟ್ಟಣ ಠಾಣೆಯ ಕಾನ್‌ಸ್ಟೇಬಲ್ ಮಂಜುನಾಥ, ವಿರಾಜಪೇಟೆ ಗ್ರಾಮಾಂತರ ಠಾಣೆಯ ಕಾನ್‌ಸ್ಟೇಬಲ್ ಡಿ. ರಾಜು 2022ನೇ ಸಾಲಿನ ಪದಕ ಸ್ವೀಕರಿಸಲಿದ್ದಾರೆ.

ಮಂಡ್ಯ ಎಸ್ಪಿ ಎನ್.ಯತೀಶ್ (ಹಾಲಿ ಮಂಗಳೂರು ಎಸ್ಪಿ), ಮೈಸೂರು ದಕ್ಷಿಣ (ಗ್ರಾಮಾಂತರ) ಠಾಣೆಯ ಇನ್ಸ್‌ಪೆಕ್ಟರ್ ಎಂ.ಎಲ್.ಶೇಖರ್, ಮದ್ದೂರು ಗ್ರಾಮಾಂತರ ಸರ್ಕಲ್ ಇನ್ಸ್‌ಪೆಕ್ಟರ್ ವೆಂಕಟೇಗೌಡ, ಮೈಸೂರು ಸೆನ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಎಂ.ಎಲ್.ಸಿದ್ದೇಶ್, ವರುಣ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ವಿ.ಚೇತನ್ (ಹಾಲಿ ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್), ಚಾಮರಾಜನಗರ ಜಿಲ್ಲೆ ಕುದೂರು ಠಾಣೆಯ ಸಬ್ ಇನ್ಸ್‌ಪೆಕ್ಟರ್ ಟಿ.ಎಂ. ತಾಜುದ್ದಿನ್, ಶ್ರವಣ ಬೆಳಗೊಳ ಠಾಣೆ ಸಬ್‌ಇನ್ಸ್‌ಪೆಕ್ಟರ್ ಶಿವಶಂಕರ, ಮೈಸೂರು ನಗರ ಸಿಸಿಬಿ ಹೆಡ್ ಕಾನ್‌ಸ್ಟೆಬಲ್ ಸಲೀಂ, ಮೈಸೂರು ಸಿಎಆರ್ ಎಆರ್ ಎಸ್‌ಐ ಕೆ.ಶಿವಕುಮಾರ್, ಹೆಚ್.ಡಿ.ಕೋಟೆ ಠಾಣೆಯ ಕಾನ್‌ಸ್ಟೆಬಲ್ ಸೈಯದ್ ಕಬೀರುದ್ದಿನ್, ಮಡಿಕೇರಿ ಡಿಸಿಆರ್‌ಬಿ ಹೆಡ್ ಕಾನ್‌ಸ್ಟೆಬಲ್ ಸಿ.ಕೆ ರಾಜೇಶ್, ಅರಸೀಕೆರೆ ತಾಲೂಕು ಬಾಣಾವರ ಠಾಣೆ ಸಬ್ ಇನ್ಸ್‌ಪೆಕ್ಟರ್ ಸಿ.ಎಸ್.ಸುರೇಶ್ ಅವರು 2023ನೇ ಸಾಲಿನ ಪದಕ ಸ್ವೀಕರಿಸಲಿದ್ದಾರೆ.

ಮೈಸೂರಿನ ದೇವರಾಜ ಉಪವಿಭಾಗದ ಎಸಿಪಿಯಾಗಿದ್ದ ಶಾಂತಮಲ್ಲಪ್ಪ, ಮೈಸೂರು ಜಿಲ್ಲೆ ಸೆನ್ ಠಾಣೆಯ ಇನ್‌ಸ್ಪೆಕ್ಟರ್ ಎಸ್.ಪಿ. ಸುನಿಲ್, ಮೈಸೂರು ಕೆಎಸ್‌ಆರ್‌ಪಿ 5ನೇ ಪಡೆಯ ಸ್ಪೆಷಲ್ ಆರ್‌ಪಿಐ ಹೆಚ್.ಎಂ. ಗಂಗಾಧರ, ಮೈಸೂರು ಕೆಪಿಎ ಆರ್‌ಹೆಚ್‌ಸಿ ಹೆಚ್.ಎಂ. ನಂಜುಂಡಮೂರ್ತಿ, ಮಂಡ್ಯ ಜಿಲ್ಲೆ ಹಲಗೂರು ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀಧರ, ಕೆಆರ್.ಪೇಟೆ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀಮತಿ ಬಿ. ಸುಮಾರಾಣಿ, ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಟೌನ್ ಠಾಣೆಯ ಎಎಸ್‌ಐ ತಖಿಉಲ್ಲಾ, ಹಾಸನ ಜಿಲ್ಲೆ ಚನ್ನರಾಯಪಟ್ಟಣ ಟೌನ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಡಿ.ಕೆ. ರಂಗಸ್ವಾಮಿ, ಹಾಸನ ಎಫ್‌ಪಿಬಿ ಹೆಡ್ ಕಾನ್‌ಸ್ಟೇಬಲ್ ಹೆಚ್.ಡಿ. ಯೋಗೇಶ್, ಹಾಸನ ಕೆಎಸ್‌ಆರ್‌ಪಿ 11ನೇ ಪಡೆಯ ಕಾನ್‌ಸ್ಟೇಬಲ್ ಟಿ.ಎನ್. ಕೃಷ್ಣಪ್ಪ ಅವರುಗಳು 2024ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಸ್ವೀಕರಿಸಲಿದ್ದಾರೆ.

ದೆಹಲಿಯಲ್ಲಿ ನಾಳೆ ನೂತನ ಕರ್ನಾಟಕ ಭವನ ಉದ್ಘಾಟನೆ

ನವದೆಹಲಿ: ದೆಹಲಿಯ ಚಾಣಕ್ಯಪುರಿ ಪ್ರದೇಶದಲ್ಲಿರುವ 'ಕಾವೇರಿ' ಹೆಸರಿನ ಹೊಸ ಕರ್ನಾಟಕ ಭವನ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ (ಏ.2) ಉದ್ಘಾಟಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಶಿ, ಎಚ್‌ಡಿ ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ ಮತ್ತು ವಿ ಸೋಮಣ್ಣ ಭಾಗವಹಿಸಲಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಯುವ ಜನತೆ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಬಾರದು

• ಮಹಾರಾಣಿ ವಿಜ್ಞಾನ ಕಾಲೇಜು ನಿವೃತ್ತ ಪ್ರಾಂಶುಪಾಲೆ ಡಾ|| ಎಸ್.ಸುಧಾ ಕಿವಿಮಾತು • ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ಪ್ರದಾನ



ಮೈಸೂರು ಕನ್ನಡ ವೇದಿಕೆ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರಿಗೆ 'ಸಾಲುಮರದ ತಿಮ್ಮಕ್ಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು,ಮಾ.31(ಎಂಟಿವೈ)– ಪಾಶ್ಚಿಮಾತ್ಯ ಸಂಸ್ಕೃತಿ, ಆಚರಣೆಗೆ ಯುವ ಜನತೆ ಮಾರುಹೋಗಿ ಭಾರತೀಯ ಸಂಸ್ಕೃತಿಯನ್ನು ಕಡೆಗಣಿಸಬಾರದು ಎಂದು ಮಹಾರಾಣಿ ವಿಜ್ಞಾನ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ.ಎಸ್.ಸುಧಾ ಸಲಹೆ ನೀಡಿದ್ದಾರೆ.

ಮೈಸೂರು ಕನ್ನಡ ವೇದಿಕೆ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರಿಗೆ 'ಸಾಲು ಮರದ ತಿಮ್ಮಕ್ಕ' ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿ, ಪರಂಪರೆಗೆ ಹೆಚ್ಚಿನ ಮನ್ನಣೆಯಿದೆ. ವಿದೇಶಿಗರು ಭಾರತೀಯ ಸಂಸ್ಕೃತಿಯನ್ನು ಅನುಸರಿಸಲು ಬಯಸುತ್ತಾರೆ. ಈ ಹಿನ್ನಲೆಯಲ್ಲಿ ನಮ್ಮ ಪರಂಪರೆ ಹಾಗೂ ಸಂಸ್ಕೃತಿ ರಕ್ಷಣೆಗೆ ಯುವ ಜನತೆ ಪಣ ತೊಡಬೇಕು. ಸಾಮಾಜಿಕ ಜಾಲತಾಣದ ಪ್ರಭಾವ, ರೀಲ್ಸ್ ಗೀಳು, ಜಂಕ್‌ಫುಡ್ ರುಚಿಗೆ ತುತ್ತಾಗಿ ನಮ್ಮ ಸಂಸ್ಕೃತಿ ನಶಿಸುವಂತೆ ಮಾಡಬಾರದು ಎಂದರು.

ಈ ಹಿಂದೆ ಹೆಣ್ಣು ಮಕ್ಕಳಿಗೆ ಶಿಕ್ಷಣ ಪಡೆಯಲು ಅವಕಾಶ ಇರುತ್ತಿರಲಿಲ್ಲ. ಆದರೆ, ಕೆಲ ದಶಕಗಳಿಂದೀಚೆಗೆ ಕಾಲ ಬದಲಾಗಿದ್ದು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಸಿಗುತ್ತಿದೆ. ಶಿಕ್ಷಣ ಪಡೆದ ಕಾರಣ ಎಲ್ಲ ಕ್ಷೇತ್ರಗಳಲ್ಲೂ ಹೆಣ್ಣು ಮಕ್ಕಳು ಸಾಧನೆ ಮಾಡುತ್ತಿದ್ದಾರೆ. ಆದರೆ ನಗರ ಪ್ರದೇಶದ ಮಹಿಳೆಯರಿಗೆ ಸಿಕ್ಕಿರುವ ಅವಕಾಶ, ಸ್ಥಾನಮಾನ ಗ್ರಾಮೀಣ ಹೆಣ್ಣು ಮಕ್ಕಳಿಗೆ ಸಿಗುತ್ತಿಲ್ಲ. ಪೋಷಕರು, ಅದರಲ್ಲೂ ತಾಯಿಯಾದವರು ತನ್ನ ಹೆಣ್ಣು–ಗಂಡು ಮಕ್ಕಳಿಗೆ ಸಮಾನವಾಗಿ ಸಂಸ್ಕಾರವನ್ನು ಕಲಿಸಬೇಕು. ರೀಲ್ಸ್ ಮಾಡಿ ಸಮಯ ಕಳೆಯುತ್ತಾ, ಜಂಕ್‌ಫುಡ್ ಮನೆಗೆ ತರಿಸಿಕೊಳ್ಳುತ್ತಿರುವುದರಿಂದ ಮಕ್ಕಳು ಸ್ಥೂಲಕಾಯಕ್ಕೆ ಒಳಗಾಗುತ್ತಿದ್ದಾರೆ. ಇದು ಎಲ್ಲ ಕಾಯಿಲೆಗಳಿಗೂ ಮೂಲವಾಗುತ್ತಿದೆ. ಹೀಗಾಗಿ ಹೆಣ್ಣು ತನ್ನ ಆರೋಗ್ಯ ಕಾಪಾಡಿಕೊಂಡರೆ ತನ್ನ ಇಡೀ ಕುಟುಂಬ ಆರೋಗ್ಯದಿಂದ ಇರುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಮೊಬೈಲ್ ಮತ್ತು ಡಿಜಿಟಲ್ ಯುಗದಲ್ಲಿ ಹೆಣ್ಣಿಗೆ ತನ್ನ ಖಾಸಗೀತನವನ್ನು ಕಾಪಾಡಿಕೊಳ್ಳುವುದೇ ದೊಡ್ಡ ಸವಾಲಾಗಿದೆ. ಮಮತೆ, ಕರುಣೆ, ತಾಳ್ಮೆ ಮೊದಲಾದ ಪ್ರಕೃತಿದತ್ತ ಗುಣಗಳನ್ನು ಹೆಣ್ಣು ಮರೆಯುತ್ತಿದ್ದು, ರೀಲ್ಸ್‌ನಲ್ಲೇ ಹೆಚ್ಚು ಸಮಯ ಕಳೆಯುತ್ತಾ, ಮಕ್ಕಳನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಹೀಗಾಗಿ ಹೆಣ್ಣು ಮಕ್ಕಳು ರೀಲ್ಸ್‌ಗಿಂತ ನಿಜ ಜೀವನಕ್ಕೆ ಒತ್ತು ನೀಡಬೇಕು ಎಂದರು.

ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತರಾದ ಡಾ.ಎಸ್.ರಮ್ಯಾ ಮಾತನಾಡಿ, ಪುರುಷ ಪ್ರಧಾನ ಸಮಾಜದಲ್ಲಿ ಸಮಾನತೆಗಾಗಿ ಹೋರಾಡುತ್ತಿದ್ದ ಮಹಿಳೆ, ತಂತ್ರಜ್ಞಾನ ಮುಂದುವರಿದಂತೆ ಭವಿಷ್ಯದಲ್ಲಿ ರೋಬೋಟ್‌ಗಳ ಜತೆಗೆ ಸಮಾನತೆಗಾಗಿ ಹೋರಾಡಬೇಕಾದ ಸ್ಥಿತಿ ನಿರ್ಮಾಣವಾಗಲಿದೆ. ಕೃತಕ ಬುದ್ಧಿಮತ್ತೆ, ರೋಬೋಟ್‌ಗಳು ಎಲ್ಲ ಕ್ಷೇತ್ರಗಳಲ್ಲೂ ಬರುತ್ತಿದ್ದರೂ ಮಹಿಳೆ ತೋರುವ ಪ್ರೀತಿ, ವಾತ್ಸಲ್ಯವನ್ನು ರೋಬೋಟ್ ನೀಡುವುದಿಲ್ಲ. ಹೀಗಾಗಿ ಮಹಿಳೆ ಈ ಗುಣಗಳನ್ನು ಬಿಡಬಾರದು ಎಂದು ಸಲಹೆ ನೀಡಿದರು.

ಸಾಲುಮರದ ತಿಮ್ಮಕ್ಕ ಪ್ರಶಸ್ತಿ: ಕಾರ್ಯಕ್ರಮದಲ್ಲಿ ಪೌರಕಾರ್ಮಿಕ ಮಹಿಳೆ ಆರ್.ಪಾರ್ವತಿ, ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತರಾದ ಡಾ.ಎಸ್. ರಮ್ಯಾ, ಮಹಿಳಾ ಸಬ್ ಇನ್ಸ್‌ಪೆಕ್ಟರ್ ಎಂ.ಬಿ.ಗೀತಾ, ಸಮಾಜ ಸೇವಕಿ ರಾಜಶ್ರೀ ರಾಹುಲ ಆಲಗೂರ, ಸೌಂದರ್ಯ ತಜ್ಞೆ ಅಂಬಿಕಾ ವೆಂಕಟೇಶ್, ಶುಶ್ರೂಷಕಿ ಬಿ.ನಾಗಜ್ಯೋತಿ ಪ್ರತಿಧ್ವನಿ ಪ್ರಸಾದ್, ಶ್ರೀರಂಗಪಟ್ಟಣ ಕಸಾಪ ಅಧ್ಯಕ್ಷೆ ಎನ್.ಸರಸ್ವತಿ, ತೇಜಸ್ವಿನಿ (ಕಂಪ್ಯೂಟರ್ ಆಪರೇಟರ್), ಕಲಾವಿದೆ ಪ್ರೇಮ, ಪವಿತ್ರರಾಜು (ಮಾಧ್ಯಮ) ಅವರಿಗೆ ಸಾಲುಮರದ ತಿಮ್ಮಕ್ಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ದಂತ ವೈದ್ಯ ಡಾ.ಲೋಕೇಶ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮನೋಹರ್, ನಾಲಾಬೀದಿ ರವಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಪ್ರಶ್ನೆ : ಪ್ರಪಂಚದಲ್ಲಿ ಒಟ್ಟು ಎಷ್ಟು ದೇಶಗಳಿವೆ?

ಉತ್ತರ : ಪ್ರಪಂಚದಲ್ಲಿ ಇರೋದು ಒಂದೇ ದೇಶ, ಅದು ಭಾರತ, ಉಳಿದೆಲ್ಲವೂ ವಿದೇಶ.

ಮೈಸೂರು ಮಿತ್ರ

ಮಂಗಳವಾರ, 1 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಪ್ರತಿ ಸಮಸ್ಯೆಯೂ ನಮಗೆ ಜೀವನದಲ್ಲಿ ಒಂದು ಕೊಡುಗೆಯಿದ್ದಂತೆ. ಏಕೆಂದರೆ ಸಮಸ್ಯೆಗಳಿಲ್ಲದೇ ನಾವು ಬೆಳೆಯಲಾರೆವು. – ಟೋನಿ ರಾಬಿನ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

ನಿಮ್ಮ ಪತ್ರಗಳು

■ ನಡೆದಾಡುವ ದೇವರು



ಕೈ ಮುಗಿಯುವೆವು ನಾವು ನಿಮ್ಮ ಸೇವೆಗೆ....
ಭಾರತದ ಅಪ್ರತಿಮ ಕಾಯಕ ಯೋಗಿಗೆ....
ಸ್ಮರಿಸುವೆವು ಸಮಾಜಕ್ಕೆ ನೀವು ನೀಡಿದ ಕೊಡುಗೆ....
ತೊಡಲಿಲ್ಲ ನೀವು ಎಂದಿಗೂ ಆಡಂಬರದ ಉಡುಗೆ....
ಎಲ್ಲರ ಪ್ರೀತಿಯನು ಗಳಿಸಿಕೊಂಡಿರಿ ನಿಮ್ಮ ಮುಡಿಗೆ....
ಅಪಾರ ಸೇವೆಗೈದಿರಿ ನಮ್ಮ ಈ ಕರುನಾಡಿಗೆ....
ಗುಡಿಯೊಳಗೆ ಸ್ಥಿರವಾಗಿ ನಿಂತವನು ಆ ದೇವರು....
ಮನೆ ಮನೆಯ ಬಾಗಿಲಿಗೆ ನಡೆದವರು ಈ ದೇವರು....
ಎಷ್ಟು ಕೊಟ್ಟರೂ ಮುಗಿಯಲಿಲ್ಲ ಇವರು ನೀಡಿದ ದಾಸೋಹ.
ಎಂದಿಗೂ ಕಡಿಮೆಯಾಗಲಿಲ್ಲ ಮಕ್ಕಳ ಮೇಲಿನ ವ್ಯಾಮೋಹ.
ಮನುಕುಲದ ಏಳಿಗೆಗಾಗಿ ಪಡೆದರಿವರು ಸನ್ಯಾಸ...
ಸಾರಿದರು ಬಸವ ತತ್ವ ಕಾಯಕವೇ ಕೈಲಾಸ...
ಮನುಷ್ಯತ್ವ, ಮಾನವೀಯತೆ ಕಲಿಸಿದ ಜ್ಞಾನಗಂಗಾ...
ಯೋಗ, ಧ್ಯಾನ, ಆಧ್ಯಾತ್ಮಿಕತೆಯ ಮಹಾ ಋಷ್ಯಶೃಂಗ...
ಭಾರತ ದೇಶಕ್ಕೆ ಮಾದರಿ ನಮ್ಮ ತುಮಕೂರಿನ ಸಿದ್ಧಗಂಗಾ...
ಅನ್ನವಿತ್ತ ಕೈಗಳಿಂದು ಕಾಣದಾಗಿದೆ...
ಜ್ಞಾನವಿತ್ತ, ಜ್ಞಾನ ಸೂರ್ಯ ಮರೆಯಾಗಿದೆ...
ಕಾಣುವಾಸೆಯಾಗಿದೆ ದಿವ್ಯಮೂರ್ತಿಯನ್ನು ಕಣ್ಣಿಗೆ...
ಮತ್ತೊಮ್ಮೆ ಹುಟ್ಟಿ ಬನ್ನಿ ಈ ನಮ್ಮ ಕರುನಾಡಿಗೆ...
ನೀವು ಮಾಡಿದ ಸೇವೆ ಬೆಳಕಾಗಿದೆ ಎಲ್ಲರ ಬಾಳಿಗೆ...
ಎಲ್ಲೆಲ್ಲೂ ತುಂಬಿ ತುಳುಕುತ್ತಿದೆ, ಸಿದ್ಧಗಂಗಾ ಮಠದ ಜೋಳಿಗೆ.

–ಪ್ರದೀಪ್ ಆರ್ಯ ನಾಯಕ್, ಮುಳ್ಳೂರು, ಸರಗೂರು ತಾ.

■ ನಾ ಕಂಡಂತಹ ಗುಬ್ಬಿಗೂಡು ರಮೇಶ್

ಮಾನ್ಯರೆ,

ಹೆಸರು ಮಾತ್ರ ಗುಬ್ಬಿಗೂಡು ರಮೇಶ್ ಎಂದಿರಬಹುದು. ಆದರೆ ಒಳ ಹೊಕ್ಕಿ ನೋಡಿದರೆ ಮೈಸೂರಿನ ಅರಮನೆಯಂತಹ ವಿಶಾಲ ಹೃದಯ ಅವರಲ್ಲಿ ನೆಲೆಯೂರಿದೆ. ಪ್ರತಿ ಮಂಗಳವಾರ ಅವರು ಬರೆಯುತ್ತಿರುವ ಅಂಕಣ ಬರಹ ದೀಪಸಾಲು. ಈ ಅಂಕಣ ಪ್ರತಿಯೊಬ್ಬ ಕನ್ನಡಿಗ ಓದಿದಾಗಲೂ ಅವನ ಹೃದಯಕ್ಕೆ ಬೆಳಕಾಗುವ ನಂದಾದೀಪದ ಸಾಲು ಎಂದು ನಿಸ್ಸಂಶಯವಾಗಿ ಹೇಳಬಹುದು.

ಗುಬ್ಬಿಗೂಡು ರಮೇಶ್ ಅವರು ಉತ್ತಮವಾದ ಹುದ್ದೆಯಲ್ಲಿದ್ದರೂ ಹಲವರಿಗಿಂತ ಉತ್ತಮ ಗೆಳೆಯರಾಗಿದ್ದಾರೆ ಎಂದು ನಾನಂತೂ ಹೃದಯಪೂರ್ವಕವಾಗಿ ಹೇಳಬಲ್ಲೆ. One sincere friend better than all his relatives ಎಂಬ ನಾಣ್ನುಡಿ ಅಕ್ಷರಶಃ ಗುಬ್ಬಿಗೂಡು ರಮೇಶ್ ಅವರಿಗೆ ಹೊಂದಿಕೆಯಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಮಾ.25ರ ಮಂಗಳವಾರದ ಅಂಕಣ ದೀಪಸಾಲು ಅದರ ತಲೆಬರಹ ಮಕ್ಕಳಿಗೆ ಮಾತ್ರವಲ್ಲ, ಪೋಷಕರಿಗೂ ಪರೀಕ್ಷಾ ಕಾಲ ಈ ಲೇಖನವನ್ನು ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ತಪ್ಪದೇ ಓದಿದರೆ ಕನಿಷ್ಠ ಪಕ್ಷ ಎಳ್ಳಷ್ಟಾದರೂ ಉಪಕಾರವಾಗುತ್ತದೆ ಮತ್ತು ಬರೆದಂತಹ ಲೇಖಕರ ಲೇಖನ ನಿಜಕ್ಕೂ ಸಾರ್ಥಕ ಮತ್ತು ಪೂರಕ. ಈ ಲೇಖನ ಪರೀಕ್ಷಾ ಸಮಯದಲ್ಲಿ ಒಂದು ಎಚ್ಚರಿಕೆಯ ಗಟೆಯಾಗಿದೆ. ಇಂತಹ ಲೇಖನ ಕೊಟ್ಟಂತಹ ಮಹನೀಯರಾದ ಗುಬ್ಬಿಗೂಡು ರಮೇಶ್ ಅವರಿಗೆ ಶುಭಮಸ್ತು.

–ಜಯಪ್ರಕಾಶ ನಾರಾಯಣ, ನಂಜನಗೂಡು

■ ಇದೊಂದು ದರಿದ್ರ ಸರ್ಕಾರ

ಮಾನ್ಯರೆ,

ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರವು ಹೊಟೇಲುಗಳಿಂದ ಕಸದ ಸಣ್ಣ ಡ್ರಮ್‌ಗಳನ್ನು ಎತ್ತಿಕೊಂಡು ಸಾಗಿಸಲು ದಿನಕ್ಕೆ ಒಂದು ಸಾವಿರದಂತೆ ವಸೂಲಿಯನ್ನು ಮಾಡಲು ಆಜ್ಞೆ ಹೊರಡಿಸಿದೆ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವುದು ಸರಿಯಷ್ಟೆ.

ಎಲ್ಲಾ ವಸ್ತುಗಳ ಮೇಲೆ ಎಲ್ಲಾ ರೀತಿಯ ಕರ (ಟ್ಯಾಕ್ಸ್) ಹಾಕಿದ್ದಾಯಿತು. ಈಗ ಹೊಟೇಲುಗಳ ಮೇಲೆ ಅದರ ಕಾಕದೃಷ್ಟಿ ಬಿದ್ದಿದೆ. ಹೊಟೇಲುಗಳ ಕಸದ ರಾಶಿಯನ್ನೂ, ಗ್ರಾಹಕರು ತಿಂದು ಉಳಿದ ಆಹಾರ ಪದಾರ್ಥಗಳನ್ನು ಹಾಕಿರುವ ಪ್ಲಾಸ್ಟಿಕ್ ಡ್ರಮ್‌ಗಳಲ್ಲಿರುವುದನ್ನು ತಮ್ಮ ಸಾಗಣೆ ವಾಹನದಲ್ಲಿರಿಸಿಕೊಂಡು ಹೋಗಲು ಒಂದು ತಿಂಗಳಿಗೆ ಮೂವತ್ತು ಸಾವಿರ ರೂಪಾಯಿಗಳನ್ನು ತೆರಬೇಕಂತೆ!

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಕಾದ ಕಬ್ಬಿಣದ ಸರಳಿನಿಂದ ಬರೆ ಎಳೆದರಂತೆ ಎಂಬ ಕನ್ನಡ ಗಾದೆಯಂತೆಯೇ ಈ ಹುಚ್ಚು ತೀರ್ಮಾನವಿದೆ. ಹುಚ್ಚು ಸರ್ಕಾರ ಹುಚ್ಚು ತೀರ್ಮಾನ!!

ನಮ್ಮ ಸರ್ಕಾರದ ಟ್ರಜರಿಯು ಅಷ್ಟೊಂದು ಖಾಲಿಯಾಗಿದೆಯೇ? ಈಗ ಸ್ವಲ್ಪ ದಿನಗಳ ಕೆಳಗೆ ಮುಜರಾಯಿ ದೇವಾಲಯಗಳ ಹುಂಡಿ ಹಣವನ್ನು ಸಹಾ ಸರ್ಕಾರದ ಖರ್ಚು – ವೆಚ್ಚಗಳಿಗೆ ಅನುಕೂಲ ಮಾಡಲು ಸಂಪುಟವು ನಿರ್ಧಾರ ಮಾಡಿದ್ದು ಇನ್ನೂ ಜನಮನದಲ್ಲಿ ಇರುವಂತೆಯೇ ಈಗ ಹೊಟೇಲುಗಳ ಕಸದ ಡ್ರಮ್‌ಗಳ ಮೇಲೆ ತನ್ನ ಕಪ್ಪು ದೃಷ್ಟಿಯನ್ನು ಬೀರಿರುವುದು ಅತ್ಯಂತ ವಿಷಾದಕರ.

–ಬೇಲೂರು ದ.ಶಂ. ಪ್ರಕಾಶ್, ಮೈಸೂರು

■ ಮಚ್ಚು–ಲಾಂಗೂ ನಟರೂ, ಪೊಲೀಸರೂ...!

ಮಾನ್ಯರೆ,

ಮಚ್ಚು ಹಿಡಿದು ರೀಲ್ಸ್ ಮಾಡಿದ ಬಿಗ್ ಬಾಸ್ ವೀರರ ವಿರುದ್ಧ ಪ್ರಕರಣ ದಾಖಲಿಸಿರುವ ಪೊಲೀಸರು ರೀಲ್ಸ್ ಮಾಡಲು ಬಳಸಿದ್ದ ಅಸಲಿ ಮಚ್ಚುಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಮಚ್ಚು–ಲಾಂಗು ಝಳಪಿಸುತ್ತಾ ಜನಗಳನ್ನು ಅಟ್ಟಾಡಿಸಿ ಕೊಚ್ಚುವ ದೃಶ್ಯಗಳನ್ನು ನಗರಗಳ ಹೃದಯ ಭಾಗಗಳಲ್ಲಿ ಚಿತ್ರೀಕರಣ ನಡೆಸಿ, ನೂರಾರು ಅಡಿ ಕಟೌಟ್ ನೆಟ್ಟು ಸೂಪರ್ ಹಿಟ್ ಆಗಿರುವ ಚಲನಚಿತ್ರಗಳಲ್ಲಿ ನಾಯಕ ನಟರು ಹಿಡಿದಿದ್ದ ಮಚ್ಚು–ಲಾಂಗು–ಸುತ್ತಿಗೆಗಳು ಅಸಲಿಯೋ... ನಕಲಿಯೋ...?

ಮಚ್ಚು–ಲಾಂಗು ಹಿಡಿದು ರೀಲ್ಸ್ ಮಾಡುವುದು ಅಪರಾಧವಾದರೆ ಅದೇ ಮಚ್ಚು–ಲಾಂಗು ಹಿಡಿದು ಕ್ರೌರ್ಯ ಮೆರೆಯುವ ದೃಶ್ಯಗಳಿರುವ ಚಲನಚಿತ್ರದ ಚಿತ್ರೀಕರಣ ಮಾಡುವುದೂ ಅಪರಾಧವಲ್ಲವೇ? ರೀಲ್ಸ್ ಸ್ಟಾರುಗಳ ವಿರುದ್ಧ ಸಮರ ಸಾರಿರುವ ಪೊಲೀಸರು ಸಿನಿಮಾ ಸ್ಟಾರುಗಳ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲವೇಕೆ? ವಿಪರ್ಯಾಸವೆಂದರೆ ಮಚ್ಚು ಲಾಂಗು ಸುತ್ತಿಗೆ ಹಿಡಿದು ಅಟ್ಟಾಡಿಸಿ ಕೊಚ್ಚುವ ದೃಶ್ಯಗಳ ಚಿತ್ರೀಕರಣ ನಡೆಯುವಾಗ ಇದೇ ಪೊಲೀಸರು ಅವರಿಗೆ ಭದ್ರತೆ ಒದಗಿಸಿರುತ್ತಾರೆ! ಇನ್ನೇಕೆ ತಡ? ಅಂತಹ ಚಲನಚಿತ್ರಗಳಲ್ಲಿ ನಟಿಸಿರುವ ನಟರು ಝಳಪಿಸಿದ ಮಚ್ಚು ಲಾಂಗು ಸುತ್ತಿಗೆಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರು ಕಾರ್ಯೋನ್ಮುಖವಾಗಲಿ!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ತತ್ತ್ವಶೋಧನೆ ಕಷ್ಟ

ಕರ್ಮ, ಜ್ಞಾನ, ಭಕ್ತಿ ಎಂಬ ಮೂರು ತತ್ತ್ವಗಳನ್ನು ಭಗವದ್ಗೀತೆಯು ಎತ್ತಿಹಿಡಿದಿದೆ. ಗೀತೆಯ ಹದಿನೆಂಟು ಅಧ್ಯಾಯಗಳಲ್ಲೂ ಈ ಮೂರು ತತ್ತ್ವಗಳ ವಿಚಾರವು ಪ್ರಸ್ತುತವಾಗಿದೆ. ಆದರೂ ಮೂರನೆಯ ಅಧ್ಯಾಯವನ್ನು ಕರ್ಮಯೋಗವೆಂದೂ ಏಳನೆಯ ಅಧ್ಯಾಯವನ್ನು ಜ್ಞಾನಯೋಗವೆಂದೂ, ಹನ್ನೆರಡನೆಯ ಅಧ್ಯಾಯವನ್ನು ಭಕ್ತಿ ಯೋಗವೆಂದೂ ಕರೆಯುವ ರೂಢಿ ಇದೆ. ಈ ಮೂರೂ ಒಂದನ್ನು ಬಿಟ್ಟು ಒಂದಿಲ್ಲ. ಯಾವ ಕರ್ಮಾಚರಣೆಯನ್ನೂ ಮಾಡದೆ, ಭಗವಂತನಲ್ಲಿ ಭಕ್ತಿಯಿಲ್ಲದೆ ಜ್ಞಾನವನ್ನು ಪಡೆಯುವುದು ಅಸಾಧ್ಯ. ಭಕ್ತನಾದವನು ಭಗವಂತನ ಸೇವೆಯೇ ಮುಂತಾದ ಕರ್ಮಗಳನ್ನು ಆಚರಿಸಲೇಬೇಕು. ಕರ್ಮಗಳಲ್ಲಿ ತೊಡಗಿಕೊಂಡವನು ಜ್ಞಾನಹೀನನಾದರೆ ಆ ಕರ್ಮಗಳೆಲ್ಲ ಯಾಂತ್ರಿಕವಾಗುತ್ತವೆ. ಅವುಗಳಿಂದ ಮುಕ್ತಿ ದೊರಕುವುದು ಅಸಂಭವ. ಕರ್ಮಗಳೇ ಬಂಧನಕ್ಕೆ ಕಾರಣವೆಂದು ಶಾಸ್ತ್ರಗಳು ಸಾರಿ ಹೇಳುತ್ತಿವೆ. ಕರ್ಮಗಳ ಫಲವನ್ನು ಅನುಭವಿಸುವುದಕ್ಕಾಗಿ ಜನ್ಮವನ್ನೆತ್ತುತ್ತೇವೆ. ಆ ಜನ್ಮದಲ್ಲಿ ಮತ್ತೆ ಅನಿವಾರ್ಯವಾಗಿ ಕರ್ಮಗಳನ್ನು ಆಚರಿಸುವುದರಿಂದ ಬಿಡುಗಡೆಯೇ ಅಸಾಧ್ಯವಾಗುತ್ತದೆ. ಭಗವಂತನ ಅನುಗ್ರಹದಿಂದ ಜೀವಾತ್ಮನಿಗೆ ಶುದ್ಧಜ್ಞಾನವುಂಟಾದರೆ ಮಾತ್ರ ಅನಾದಿಯಾಗಿ ಬಂದಿರುವ ಕರ್ಮಗಳು ಸುಟ್ಟು ಬೂದಿಯಾಗುತ್ತವೆ ಎಂಬುದು ಶ್ರೀ ಕೃಷ್ಣನ ಮಾತು.

ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ (4.37)

ಜ್ಞಾನಕ್ಕೆ ಕಾರಣ ಭಗವದನುಗ್ರಹ. ಅದು ಉಂಟಾಗುವುದು ಹೇಗೆ? ಭಕ್ತಿಯಿಂದ–

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥
(18.55)

ಭಕ್ತಿಯಿಂದ ನನ್ನ ಸ್ವರೂಪವನ್ನು ತಿಳಿದುಕೊಂಡು ತತ್ತ್ವತಃ ನಾನು ಯಾರೆಂಬುದನ್ನು ಅರಿತು ನನ್ನಲ್ಲಿ ಸೇರುತ್ತಾನೆ ಎಂದು ಭಗವಂತನೇ ಹೇಳಿರುವುದರಿಂದ ಭಕ್ತಿಯು ಮೂಲ ಕಾರಣವೆಂದಾಯಿತು. ಇಂತಹ ಭಕ್ತಿಯು ನಮ್ಮಲ್ಲಿ ಮೂಡುವುದು ಹೇಗೆ? ಅದಕ್ಕೆ ಕಾರಣ ಸತ್ಕರ್ಮಗಳು. ದುಷ್ಕರ್ಮಗಳನ್ನು ಮಾಡುತ್ತಿರುವವರಿಗೆ ಜ್ಞಾನವಾಗಲಿ ಅದರ ಫಲವಾದ ಭಕ್ತಿಯಾಗಲಿ ಹುಟ್ಟುವುದು ಅಸಾಧ್ಯ. ಆದ್ದರಿಂದ ಮಾನವರು ಮೊದಲು ಧರ್ಮ ಮಾರ್ಗದಲ್ಲಿ ನಡೆದು ಸತ್ಕರ್ಮ ನಿರತರಾಗಬೇಕು. ಇದರಿಂದ ಬುದ್ಧಿ ಶುದ್ಧವಾಗುತ್ತದೆ. ಬುದ್ಧಿ ಶುದ್ಧವಾಗುವುದು ಎಂದರೆ ಏನು? ಅದರಲ್ಲಿ ಸೇರಿಕೊಂಡಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಮುಂತಾದ ಮಲಿನ ಭಾವಗಳು ದೂರವಾಗುತ್ತವೆ. ಆಗ ಬುದ್ಧಿಯಲ್ಲಿ ಶ್ರದ್ಧೆ, ಜ್ಞಾನ, ಭಕ್ತಿ ಇವೆಲ್ಲ ಅಂಕುರಿಸುತ್ತವೆ. ಇದನ್ನೇ ಬುದ್ಧಿ ಶುದ್ಧಿ ಎನ್ನುತ್ತಾರೆ. ಹೀಗೆ ಕರ್ಮ, ಜ್ಞಾನ, ಭಕ್ತಿಗಳು ಪರಸ್ಪರ ಸಾಪೇಕ್ಷ. ಒಂದಿಲ್ಲದೆ ಇನ್ನೊಂದು ಉಂಟಾಗದು.

ದಾರ್ಶನಿಕ ಕವಿ ಡಿ.ವಿ.ಜಿ. ಇವುಗಳ ಬಗೆಗೆ ಹೇಳಿರುವುದು ಏನೆಂದು ನೋಡೋಣ –

ಭಕ್ತಿ ನಂಬುಗೆ ಸುಲಭ ಭಜನೆ ವಂದನೆ ಸುಲಭ
ತತ್ತ್ವಶೋಧನೆ ಕಷ್ಟ, ಮತಿಕಾರ್ಯ ಕಷ್ಟ,
ಸುತ್ತುವುದು ಗಿರಿಸುತ್ತ ಸುಳುವೆಂದು ಲೋಕಜನ
ಹತ್ತುವನು ತಾಪಸಿಯಾ ಮಂಕುತಿಮ್ಮ ॥

ಭಕ್ತಿ ಎಂಬ ಮುಗ್ಧ ಭಾವನೆಯಿಂದ ದೇವಸ್ಥಾನಕ್ಕೋ ಗುರುದ್ವಾರಕ್ಕೋ, ಚರ್ಚಿಗೋ ಹೋಗಿ ದೀಪ ಹಚ್ಚುವುದು, ಮೇಣದ ಬತ್ತಿ ಹಚ್ಚುವುದು, ಕೈ ಮುಗಿಯುವುದು, ಭಜನೆ ಮಾಡುವುದು, ಹಾಡು ಹೇಳುವುದು, ಮಂತ್ರಗಳನ್ನು ಕೇಳಿಸಿಕೊಳ್ಳುವುದು, ಘಂಟೆ ಬಾರಿಸುವುದು ಸುಲಭ. ಯಾರು ಬೇಕಾದರೂ ಅದನ್ನು ಮಾಡಬಹುದು. ಆದರೆ ಭಕ್ತಿ ಎಂದರೆ ಏನು? ದೇವರು ಎಂದು ನಾವು ನಂಬಿರುವ ತತ್ತ್ವಕ್ಕೂ ನಮಗೂ ಇರುವ ಸಂಬಂಧವೇನು? ಆ ದೇವರು ಏಕೆ ಈ ಪ್ರಪಂಚವನ್ನು ಸೃಷ್ಟಿಸಿ ಇದರಲ್ಲಿ ನಾವು ತೊಳಲಾಡುವಂತೆ ಮಾಡಿದ್ದಾನೆ. ಇದರಿಂದ ನಮಗಾಗಲಿ ಆ ದೇವರಿಗಾಗಲೀ ಆಗುವ ಪ್ರಯೋಜನ ಏನು? ಎಂಬ ತತ್ತ್ವವನ್ನು ಶೋಧಿಸುವುದು ಕಷ್ಟ, ಏಕೆಂದರೆ ಮತಿಯ ಕಾರ್ಯ, ಎಂದರೆ ಬುದ್ಧಿಯ ಕೆಲಸ ಯಾವಾಗಲೂ ಕಷ್ಟ, ಟಿಕೆಟ್ ಕೊಂಡು ವಿಮಾನದಲ್ಲಿ ಪಯಣಿಸುವುದು ಸುಲಭ. ವಿಮಾನ ಆಕಾಶದಲ್ಲಿ ಹೇಗೆ ಹಾರುತ್ತದೆ. ಅಷ್ಟೊಂದು ವೇಗವನ್ನು ಹೇಗೆ ಪಡೆಯುತ್ತದೆ, ಸಾವಿರಾರು ಮೈಲಿ ದೂರದಲ್ಲಿರುವ ಸ್ಥಳವನ್ನು ನಿರ್ದಿಷ್ಟವಾಗಿ ಹೇಗೆ ತಲುಪುತ್ತದೆ ಎಂಬುದನ್ನು ಅರಿತುಕೊಳ್ಳುವ ಕಾರ್ಯ ಕಷ್ಟ, ಭಕ್ತಿಗೆ ಭಗವಂತ ವಶನಾಗುತ್ತಾನೆ. ನಾವು ಆಡಿದರೆ, ಹಾಡಿದರೆ ಅವನು ಸಂತೋಷಪಡುತ್ತಾನೆ ಎಂಬುದೆಲ್ಲ ನಮ್ಮ ಕಲ್ಪನೆಯಲ್ಲವೆ? ಜಗತ್ತನ್ನೇ ಸೃಷ್ಟಿಸಿರುವ ಸರ್ವಶಕ್ತ ಭಗವಂತನಿಗೆ ನಾವು ಅರ್ಪಿಸುವ ಹೂವು, ಹಣ್ಣು ಹಾಡು, ಮಂತ್ರ ತಂತ್ರಗಳಿಂದ ಏನು ಆಗಬೇಕಾಗಿದೆ? ಇದರಲ್ಲಿ ತತ್ತ್ವದ ಅಂಶವೆಷ್ಟು, ಕಲ್ಪನೆಯಷ್ಟು ಎಂಬ ಚಿಂತನೆ ಕಷ್ಟ, ಯಾವ ದೇವರೂ ಇಲ್ಲ, ಜೀವನವೆಂಬುದು ಅರ್ಥವಿಲ್ಲದ ಆಕಸ್ಮಿಕ, ಇದಕ್ಕೆ ಗುರಿಯಿಲ್ಲ, ಗುರುವೂ ಬೇಕಿಲ್ಲ ಎಂದು ಹೇಳುವ ಚಾರ್ವಾಕನೊಂದು ಕಡೆ. ದೇವರನ್ನು ಬಿಟ್ಟು ಬೇರೆ ಏನೂ ಇಲ್ಲ, ಅವನ ಬಳಿ ಸಾರುವುದೇ ಜೀವನದ ಗುರಿ, ಅವನೆ ಸಕಲರ ಗುರು ಎಂದು ಹೇಳುವ ಆಸ್ತಿಕರ ವಾದ ಇನ್ನೊಂದು ಕಡೆ. ಇದರಲ್ಲಿ ಸತ್ಯವಾವುದು? ಮಿಥ್ಯೆ ಯಾವುದು ಎಂಬ ನಿರ್ಣಯ ಕಷ್ಟ, ಆ ದೇವರು ಸಾಕಾರನೋ ನಿರಾಕಾರನೋ ಎಂಬುದರ ಬಗೆಗೂ ಒಮ್ಮತವಿಲ್ಲ. ನಿರಾಕಾರವಾಗಿರುವ ಶಕ್ತಿಯೇ ಭಕ್ತಾನುಗ್ರಹಕ್ಕಾಗಿ ಆಕಾರವಿದ್ದಂತೆ ಕಾಣಿಸಿಕೊಳ್ಳುತ್ತದೆ ಎನ್ನುವವರು ಕೆಲವರು. ಹಾಗಲ್ಲ, ಶಂಖಚಕ್ರ ಗದಾಪದ್ಮಧಾರಿಯಾಗಿ ಚತುರ್ಭುಜನಾಗಿರುವುದೇ ದೇವರ ನಿಜರೂಪ ಎನ್ನುವವರು ಇನ್ನು ಕೆಲವರು. ಇಲ್ಲ, ಅವನ ಪರಮ ಸ್ವರೂಪ ಜಟಾಧಾರಿಯಾಗಿ ತ್ರಿಶೂಲವನ್ನು ಧರಿಸಿರುವುದು ಎನ್ನುವವರು ಹಲವರು. ಇದು ಒಂದು ದೇಶದ ಜನರ ನಂಬಿಕೆಯಾದರೆ, ಬೇರೆ ಬೇರೆ ದೇಶಗಳ ಜನರ ನಂಬಿಕೆಗಳು ಅನಂತ. ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಣಯಿಸುವವರಾರು? ಈ ಚರ್ಚೆಗಳಿಗರ್ಥವಿದೆಯೇ?

ಏನು ಜೀವನದರ್ಥ? ಏನು ಪ್ರಪಂಚಾರ್ಥ?
ಏನು ಜೀವ ಪ್ರಪಂಚಗಳ ಸಂಬಂಧ?
ಕಾಣದಿಲ್ಲಿರ್ಪುದೇನಾನುಮುಂಟೆ? ಅದೇನು
ಜ್ಞಾನ ಪ್ರಮಾಣವೇಂ ಮಂಕುತಿಮ್ಮ?

ಹೀಗೆ ಎಲ್ಲವೂ ಪ್ರಶ್ನೆಯಾಗಿಯೇ ಉಳಿದು ಬಿಡುತ್ತದೆ. ಮೂಲ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವವರಿಲ್ಲ. ಅವರು ಅಷ್ಟು ದೊಡ್ಡವರು, ಅವರು ಹೇಳಿದುದನ್ನು ತೆಪ್ಪಗೆ ಒಪ್ಪಿಕೊಳ್ಳೋಣ ಎನ್ನುವವರೇ ಬಹುಮಂದಿ. **ಮಹಾಜನೋ ಯೇನಗತಃ ಸ ಪಂಥಾಃ** ಹೆಚ್ಚು ಜನ ಹೇಗೆ ಹೋಗುತ್ತಿದ್ದಾರೋ ಹಾಗೆ ಹೋಗುವುದೇ ಲೇಸು ಎಂಬುದು ಅನೇಕರ ತೀರ್ಮಾನ. ಸತ್ಯವನ್ನು ಕಂಡವರಾರು? ಮಹಾಕುಂಭ ಮೇಳದಲ್ಲಿ ನದೀ ಸಂಗಮದಲ್ಲಿ ಮುಳುಗಿ ಎದ್ದಾಗ ಸತ್ಯವು ಕಾಣುವುದೆ? ಅಲ್ಲಿಗೆ ಬಂದಿದ್ದ ಸಹಸ್ರ ನಾಗಾಸಾಧು, ಅಘೋರಿ ಮುಂತಾದವರು ಜ್ಞಾನಿಗಳೋ ಅಲ್ಲವೋ? ಅವರು ಭೂಮಿಯ ಮೇಲಿನ ಸಾಮಾನ್ಯ ಜನರ ಜೀವನವನ್ನು ತಿರಸ್ಕರಿಸಿ ವಿಚಿತ್ರ ಜೀವನವನ್ನು ನಡೆಸುತ್ತಿರುವುದಕ್ಕೆ ಫಲವೇನು? ಪರಲೋಕದ ಅಸ್ತಿತ್ವವೇ ಸಂದಿಗ್ಧವಾಗಿರುವಾಗ ಅಲ್ಲಿ ಏನನ್ನೋ ಪಡೆಯುವ ಆಶೆಯಿಂದ ಇಹಲೋಕದ ಸಕಲ ಸುಖ ಸೌಕರ್ಯಗಳನ್ನು ತ್ಯಜಿಸಿರುವುದು ಸಾರ್ಥಕ ಕಾರ್ಯವೆ?

ಪರದ ಮೇಲ್ ಕಣ್ಣಿಟ್ಟು ಧರೆಯ ತುಚ್ಛವೆನ್ನುತ್ತ
ತೊರೆದಾಯ ಸಂಗೊಳ್ಳೆ ದೊರೆವ ಫಲವೇನು?
ಸುರಧೇನುವಿಗೇಣಿಯಿಡ ಹೊರಟು ನಿನ್ನಂಗಳದ
ಕಿರಿಹೂವ ಮರೆಯುವೆಯ ಮಂಕುತಿಮ್ಮ ।

ಪರಲೋಕದಲ್ಲಿ ದಿವ್ಯ ಸುಖ ದೊರಕುವುದೆಂದು ಅದರ ಮೇಲೆ ಕಣ್ಣಿಟ್ಟು ಈ ಭೂಲೋಕದ ಸುಖಗಳೆಲ್ಲ ತುಚ್ಛ, ಹೀನ, ಅನಿತ್ಯ, ಅಪ್ರಯೋಜಕ ಎಂದು ತೊರೆದು ಆಯಾಸ ಮಾಡಿಕೊಳ್ಳುವ ಶ್ರಮಕ್ಕೆ ಖಚಿತವಾದ ಫಲವೇನಿದೆ? ಸುರಧೇನು ಎಂದರೆ ದೇವಲೋಕದಲ್ಲಿದೆ ಯೆಂದು ನಂಬಲಾದ ಕಾಮಧೇನು. ಏಣಿಯನ್ನು ಹಾಕಿಕೊಂಡು ಅಷ್ಟು ಎತ್ತರಕ್ಕೆ ಹೋಗಿ ಕಾಮಧೇನುವಿನ ಹಾಲನ್ನೋ ಕಲ್ಪವೃಕ್ಷದ ಹೂವನ್ನೋ ಪಡೆಯಲು ಪ್ರಯತ್ನಿಸಿ ನಿನ್ನ ಮನೆಯ ಅಂಗಳದಲ್ಲೇ ಬೆಳೆದಿರುವ ಹೂವನ್ನು ಮರೆಯುವೆಯಾ? ಅದು ಸರಿಯೇ? ಎಂದು ಡಿ.ವಿ.ಜಿ. ಪ್ರಶ್ನಿಸಿದ್ದಾರೆ. ನಾವು ಕಾಣುವ ಆಧ್ಯಾತ್ಮಿಕ ಜೀವಿಗಳಲ್ಲಿ, ಸಾಧು ಸಂತರಲ್ಲಿ ಯಾರು ಸತ್ಯವನ್ನು ಅರಿತವರೋ–ನಾವರಿಯೆವು. ಒಂದು ವೇಳೆ ಪರತತ್ತ್ವದ ಅನುಭವವನ್ನು ಪಡೆದಿದ್ದರೂ ಅವರು ನಮ್ಮೊಡನೆ ಅದನ್ನು ಹಂಚಿಕೊಂಡು ತಿಳಿಸುವರೆಂಬ ಖಾತರಿಯಿಲ್ಲ. ಅವರು ತಿಳಿಸಿದರೂ ಅದನ್ನು ಅರಿಯುವ ಸಾಮರ್ಥ್ಯ ನಮ್ಮಲ್ಲಿಲ್ಲದಿರಬಹುದು. ನಮ್ಮ ಶಾಸ್ತ್ರಜ್ಞಾನ, ವಾದ ಕೌಶಲ ಅಲ್ಲಿ ಪ್ರಯೋಜನಕ್ಕೆ ಬರಲಾರದು.

ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣಕಾರಣಮ್ ।
ಅತಃ ಪ್ರಯತ್ನಾದ್ ಜ್ಞಾತವ್ಯಂ ತತ್ತ್ವಜ್ಞಾತ್ತತ್ತ್ವ ಮಾತ್ಮನಃ॥

ದೊಡ್ಡ ಅರಣ್ಯದಂತೆ ಶಬ್ದ ಜಾಲವು ಮನೋಭ್ರಮಣೆಗೆ ಕಾರಣವಾಗಬಹುದು. ಅದನ್ನು ಬಿಟ್ಟು ತತ್ತ್ವವನ್ನು ತಿಳಿದಿವರಿಂದ ನಾವು ತಿಳಿದುಕೊಳ್ಳಬೇಕು. ಅಂತಹ ಪುಣ್ಯ ಎಷ್ಟು ಜನರಿಗಿದೆಯೋ ಯಾರಿಗಿದೆಯೋ ತಿಳಿಯದು. ಈ ತತ್ತ್ವಜ್ಞಾನದ ಗೊಡವೆಯೇ ಬೇಡ. ಮುಗ್ಧ ಭಕ್ತಿಯಿಂದಲೇ ಬೇಡರ ಕಣ್ಣಪ್ಪನಂತೆ, ಕೋಳೂರ ಕೊಡಗೂಸಿನಂತೆ ಭಗವಂತನ ಸಾಕ್ಷಾತ್ಕಾರವನ್ನು ಪಡೆಯುವುದೇ ಸುಲಭ. ಆದರೆ ತತ್ತ್ವ ಶೋಧನೆ ಕಷ್ಟ, ಯಾವ ದಾರ್ಶನಿಕನ ಸಿದ್ಧಾಂತವನ್ನು ನೋಡಿದರೂ ಅದರಲ್ಲೊಂದು ಕುಂದು ಕಂಡು ಬರುತ್ತದೆ. ಯಾವ ಲೋಪವೂ ಯಾವ ದೋಷವೂ ಇಲ್ಲದ ದರ್ಶನವೇ ಸಿಕ್ಕುವುದಿಲ್ಲ. ಅದು ಶಾಸ್ತ್ರದ ದೌರ್ಬಲ್ಯದಿಂದಲೋ ನಮ್ಮ ಬುದ್ಧಿಯ ವೈಕಲ್ಯದಿಂದಲೋ ತಿಳಿಯದು. ಬುದ್ಧಿಯ ಶುದ್ಧಿಗಾಗಿ ಪ್ರಯತ್ನಿಸೋಣ.

ತತ್ತ್ವ ಸಾಕ್ಷಾತ್ಕಾರ ಚಿತ್ತ ಶುದ್ಧಿಯಿನಹುದು
ಚಿತ್ತಶೋಧನೆ ಮತಿ ಚಮತ್ಕಾರವಲ್ಲ
ಬಿತ್ತರದ ಲೋಕಪರಿಪಾಕದಿಂ ಸತ್ಕರ್ಮ–
ಸಕ್ತಿಯಿಂ ಶುದ್ಧತೆಯಾ ಮಂಕುತಿಮ್ಮ ।

ಪೊಲೀಸರ ಬ್ರಿಟಿಷ್ ಕಾಲದ ಟೋಪಿಗೆ ಗುಡ್ ಬೈ!

ಹೊಸ ಮಾದರಿ ಟೋಪಿ ಪರಿಚಯಿಸಲು ರಾಜ್ಯ ಪೊಲೀಸ್ ಇಲಾಖೆ ನಿರ್ಧಾರ

ಏಪ್ರಿಲ್ 4ರಂದು ಎಡಿಜಿಪಿ ಉಮೇಶ್ ಅಧ್ಯಕ್ಷತೆಯಲ್ಲಿ ಮಹತ್ವದ ಸಭೆ

- ಈಗಿರುವ ಟೋಪಿಯಿಂದ ಆರೋಗ್ಯದ ಮೇಲೆ ಪರಿಣಾಮ
- ನೆರೆ ರಾಜ್ಯದ ಪೊಲೀಸರ ಟೋಪಿ ಬಗ್ಗೆ ಅಧ್ಯಯನ
- ಬದಲಾವಣೆ ಬಗ್ಗೆ ಈ ಮೊದಲು ಚರ್ಚೆ ಆಗಿತ್ತು



ಈಗಿರುವ ಟೋಪಿಯಿಂದ ಕಿರಿಕಿರಿ

ಈಗ ಪೊಲೀಸರು ಬಳಸುವ ಬ್ರಿಟಿಷರ ಕಾಲದ ಟೋಪಿ ತಲೆ ಮೇಲೆ ಸರಿಯಾಗಿ ನಿಲ್ಲುವುದಿಲ್ಲ. ರ್‍ಯಾಲಿ, ಪ್ರತಿಭಟನೆ, ಗಲಾಟೆ–ಗದ್ದಲ, ಲಾಠಿ ಚಾರ್ಜ್ ಸೇರಿದಂತೆ ಹಲವು ಸಂದರ್ಭಗಳಲ್ಲಿ ಕೆಳಗೆ ಬೀಳುತ್ತಿತ್ತು. ಈ ವೇಳೆ ಟೋಪಿ ಕೆಳಗೆ ಬಿದ್ದರೆ ಮತ್ತೆ ತೆಗೆದು ಹಾಕಿಕೊಳ್ಳಲು ಕಿರಿಕಿರಿ ಉಂಟಾಗುತ್ತಿತ್ತು. ಜೊತೆಗೆ ಸಮವಸ್ತ್ರಕ್ಕೆ ಅಗೌರವ ತೋರಿದಂತಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಟೋಪಿ ಬದಲಾವಣೆ ಪೊಲೀಸರ ಹಲವು ವರ್ಷಗಳ ಬೇಡಿಕೆಯಾಗಿತ್ತು.

ಕೇರಳ, ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ಅಲ್ಲಿನ ಪೊಲೀಸರಿಗೆ ಸ್ಮಾರ್ಟ್ ಪೀಕ್ ಹ್ಯಾಟ್‌ಗಳನ್ನು ನೀಡಲಾಗಿದೆ. ಈಗ ಅದಕ್ಕಿಂತ ಭಿನ್ನವಾದ ಟೋಪಿ ಪರಿಚಯಿಸಲು ಪೊಲೀಸ್ ಇಲಾಖೆ ತೀರ್ಮಾನ ಮಾಡಿದೆ.



“ ಪೊಲೀಸ್ ಸಿಬ್ಬಂದಿ ಟೋಪಿ ಬದಲಾವಣೆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಪೊಲೀಸ್ ಇಲಾಖೆ ಉನ್ನತ ಅಧಿಕಾರಿಗಳು ಏನು ತೀರ್ಮಾನ ಮಾಡಿದ್ದಾರೋ ನನಗೆ ಮಾಹಿತಿ ಇಲ್ಲ. –ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತರು.

ಮೈಸೂರು,ಮಾ.31(ಬಿಎಲ್‌ಯು)–ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಹೆಡ್ ಕಾನ್ಸ್‌ಟೇಬಲ್ ಹಾಗೂ ಕಾನ್ಸ್ ಟೇಬಲ್‌ಗಳು ಧರಿಸುತ್ತಿರುವ ಬ್ರಿಟಿಷ್ ಕಾಲದ ಟೋಪಿಗಳ ಬದಲಾವಣೆ ಮಾಡುವ ಕಾಲ ಸನ್ನಿಹಿತವಾಗಿದೆ. ಪೊಲೀಸರು ಈಗ ಧರಿಸುತ್ತಿರುವ ಸ್ಲೋಚ್ ಹ್ಯಾಟ್ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಕೇಂದ್ರ ಆರೋಗ್ಯ ಇಲಾಖೆ ನೀಡಿರುವ ಎಚ್ಚರಿಕೆಯನ್ನು ಪರಿಗಣಿಸಿ ಟೋಪಿ ಬದಲಾವಣೆಗೆ ಪೊಲೀಸ್ ಇಲಾಖೆ ಮಹತ್ವದ ನಿರ್ಧಾರ ಮಾಡಿದೆ.

ಟೋಪಿಯನ್ನು ಬದಲಾವಣೆ ಮಾಡುವ ಸಂಬಂಧ ಸಾಧಕ ಬಾಧಕಗಳ ಬಗ್ಗೆ ವರದಿ ನೀಡುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಅಲೋಕ್ ಮೋಹನ್, ಕೆಎಸ್‌ಆರ್‌ಪಿ ಎಡಿಜಿಪಿ ಉಮೇಶ್ ಅವರಿಗೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಏಪ್ರಿಲ್ 4ರಂದು ಹಿರಿಯ ಅಧಿಕಾರಿಗಳ ಸಭೆ ನಡೆಯಲಿದೆ.

ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಹಾಗೂ ಕಾನ್ಸ್ ಟೇಬಲ್‌ಗಳು ಈಗ ಧರಿಸುತ್ತಿರುವ ಟೋಪಿಯಿಂದ ಅವರ ಆರೋಗ್ಯದ ಮೇಲೆ ಯಾವ ರೀತಿ ದುಷ್ಪರಿಣಾಮ ಬೀರುತ್ತಿದೆ. ಈಗಿರುವ ಟೋಪಿಗೆ ಪರ್ಯಾಯವಾಗಿ ಯಾವ ರೀತಿಯ ಟೋಪಿ ಪರಿಚಯಿಸಬೇಕು. ನೆರೆ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಯಾವ ರೀತಿಯ ಟೋಪಿ ಬಳಕೆಯಲ್ಲಿದೆ ಎಂಬುದು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಅಧ್ಯಯನ ಮಾಡಿ ವರದಿ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಏಪ್ರಿಲ್ 4ರಂದು ಎಡಿಜಿಪಿ ಉಮೇಶ್ ಅವರು ಕರೆದಿರುವ ಸಭೆಯಲ್ಲಿ ಪೊಲೀಸ್ ಇಲಾಖೆಯ ಪ್ರಧಾನ ಕಚೇರಿಯ ಐಜಿಪಿ, ಬೆಂಗಳೂರಿನ ಎಲ್ಲಾ ವಿಭಾಗದ ಡಿಸಿಪಿಗಳು, ಸಿಎಆರ್ ಡಿಸಿಪಿ, ಬೆಂಗಳೂರು ನಗರ ಜಿಲ್ಲೆಯ ಎಸ್ಪಿ, ಕೆಎಸ್‌ಆರ್‌ಪಿ ಕಮಾಂಡೆಂಟ್ ಭಾಗಿಯಾಗಲಿದ್ದು, ಟೋಪಿ ಬದಲಾವಣೆ ಸಾಧಕ ಬಾಧಕಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.


ಬ್ರಿಟಿಷರ ಕಾಲದ ಪೊಲೀಸ್ ಸಮವಸ್ತ್ರ ಸಂಹಿತೆಯಲ್ಲಿ ಟೋಪಿ ಬದಲಾವಣೆ ಮಾಡುವಂತೆ ಪೊಲೀಸ್ ಇಲಾಖೆ ಸಿಬ್ಬಂದಿ ಹಲವು ವರ್ಷಗಳಿಂದ ಮನವಿ ಮಾಡುತ್ತಿದ್ದರು. ಇದೇ ವೇಳೆ ಕರ್ನಾಟಕದ ಪೊಲೀಸ್ ಇಲಾಖೆ ಹೆಡ್ ಕಾನ್ಸ್‌ಟೇಬಲ್ ಹಾಗೂ ಕಾನ್ಸ್‌ಟೇಬಲ್‌ಗಳು ಧರಿಸುತ್ತಿರುವ ಟೋಪಿಯಿಂದ ಅವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಇಲಾಖೆ ಕೂಡ ಎಚ್ಚರಿಕೆ ನೀಡಿತ್ತು.

ಈ ಹಿನ್ನೆಲೆ ಬ್ರಿಟಿಷರ ಕಾಲದ ಟೋಪಿ ಬದಲಾವಣೆ ಮಾಡಲು ನಿರ್ಧರಿಸಲಾಗಿದ್ದು, ಇದಕ್ಕೆ ಪರ್ಯಾಯವಾಗಿ ಯಾವ ರೀತಿಯ ಟೋಪಿ ಬಳಕೆಗೆ ತರಬೇಕು ಎಂಬ ಬಗ್ಗೆ ಈಗ ಚರ್ಚೆ ಆರಂಭವಾಗಿದೆ.

2018 ರಲ್ಲಿ ಕೂಡ ಟೋಪಿ ಬದಲಾವಣೆ ಮಾಡುವ ಬಗ್ಗೆ ಚರ್ಚೆ ಮುನ್ನೆಲೆಗೆ ಬಂದಿತ್ತು. ಆದರೆ ಆ ವೇಳೆಗೆ ಲಕ್ಷಾಂತರ ಸ್ಲೋಚ್ ಹ್ಯಾಟ್ ಸಿದ್ಧವಾಗಿತ್ತು. ಈ ಸಮಯದಲ್ಲಿ ಟೋಪಿ ಬದಲಾವಣೆ ಮಾಡಿದರೆ ಈಗಾಗಲೇ ಸಿದ್ಧವಾಗಿದ್ದ ಸ್ಲೋಚ್ ಹ್ಯಾಟ್‌ಗಳು ಮೂಲೆ ಸೇರಿ ಆರ್ಥಿಕ ನಷ್ಟವಾಗುತ್ತದೆ ಎಂಬ ದೃಷ್ಟಿಯಿಂದ ಹಳೇ ಟೋಪಿ ಬದಲಾವಣೆ ಮಾಡಲಿಲ್ಲ.

ಬ್ರಿಟಿಷರ ಕಾಲದಲ್ಲಿನ ಪೊಲೀಸರು ಖಾಕಿ ಶರ್ಟ್, ಅರ್ಧ ಪ್ಯಾಂಟ್, ಖಾಕಿ ಪೇಟ ಹಾಗೂ ಕಂದು ಬಣ್ಣದ ಬೂಟ್ ಧರಿಸುತ್ತಿದ್ದರು. ಸ್ವಾತಂತ್ರ್ಯ ನಂತರ ಕೂಡ ಬ್ರಿಟಿಷ್ ಕಾಲದ ಸಮವಸ್ತ್ರ ಸಂಹಿತೆ ಅನುಸರಿಸಲಾಯಿತು. ಆದರೆ ಅರ್ಧ ಪ್ಯಾಂಟ್ ಬದಲು ಪೂರ್ಣ ಪ್ರಮಾಣದ ಪ್ಯಾಂಟ್ ಹಾಗೂ ನೀಲಿ ಮತ್ತು ಕೆಂಪು ಬಣ್ಣದ ಟರ್ಬನ್ ಮಾದರಿಯ ಕ್ಯಾಪ್ ಪರಿಚಯಿಸಲಾಯಿತು.

ನೀವೆ ಅಧಿಕಾರದಲ್ಲಿ ಮೊಳೆ ಹೊಡೆದು ಕುಳಿತುಕೊಂಡಿದ್ದೀರಿ; ನೀವೇನು ಕಡಿದು ಕಟ್ಟೆ ಹಾಕಿದ್ದೀರಿ?



ಬೆಂಗಳೂರು: ಕಳೆದ 11 ವರ್ಷಗಳಿಂದ ನೀವೆ ಅಧಿಕಾರದಲ್ಲಿ ಮೊಳೆ ಹೊಡೆದು ಕುಳಿತು ಕೊಂಡಿದ್ದೀರಿ. ಇಷ್ಟು ದಿನ ನೀವು ಕಡಿದು ಕಟ್ಟೆ ಹಾಕಿರುವುದು ಏನು. ಎಲ್ಲಾ ಸಮಸ್ಯೆಗಳಿಗೆ ಕಾಂಗ್ರೆಸ್ ಹಾಗೂ ನೆಹರು ಮೇಲೆ ಗೂಬೆ ಕೂರಿಸುವುದೆ ನಿಮ್ಮ ಕೆಲಸವೆ.. ಎಂದು ಪ್ರಧಾನಿ ಮೋದಿ ವಿರುದ್ಧ ಸಚಿವ ದಿನೇಶ್ ಗುಂಡೂರಾವ್ ಕಿಡಿಕಾರಿದ್ದಾರೆ.

ಕಾಂಗ್ರೆಸ್ ನೀತಿಗಳಿಂದಾಗಿ ದಶಕಗಳಿಂದ ನಕ್ಸಲಿಸಂಗೆ ಪ್ರೋತ್ಸಾಹ ಸಿಕ್ಕಿದೆ ಎಂಬ ಮೋದಿ ಅವರ ಹೇಳಿಕೆ ವಿರುದ್ಧ ದಿನೇಶ್ ಗುಂಡೂರಾವ್ ಕಿಡಿಕಾರಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ನಕ್ಸಲ್ ಸಮಸ್ಯೆಗೆ ಕಾಂಗ್ರೆಸ್ ನೀತಿ ಕಾರಣ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಪ್ರಧಾನಿಯವರಿಗೆ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಒಂದು ಕಾಂಗ್ರೆಸ್ ಇರಬೇಕು ಇಲ್ಲವೆ ನೆಹರು ಇರಬೇಕು. ಇವರೆಡನ್ನು ಕನವರಿಸದೆ ಪ್ರಧಾನಿ ಜೀವಿಸಲಾರರು ಎಂದು ವ್ಯಂಗ್ಯವಾಡಿದ್ದಾರೆ.

ಮೋದಿಯವರ ವರಸೆ ಹೇಗಿದೆ ಎಂದರೆ, ದೇಶದ GDP ಕುಸಿದರೆ ಅದಕ್ಕೆ ಕಾಂಗ್ರೆಸ್ ಕಾರಣ ಎನ್ನುತ್ತಾರೆ ಇಲ್ಲವೆ ನೆಹರು ಕಾರಣ ಎನ್ನುತ್ತಾರೆ. ನಿರುದ್ಯೋಗ, ರೂಪಾಯಿ ಅಪಮೌಲ್ಯಕ್ಕೂ ಇದೆ ಕಾರಣ ಕೊಡುತ್ತಾರೆ. ಕೊನೆಗೆ ಮಳೆ ಜಾಸ್ತಿ ಬಂದರೂ ನೆಹರು ಕಾರಣ, ಮಳೆ ಬಾರದೆ ಇದ್ದರೂ ನೆಹರು ಕಾರಣ ಎನ್ನುತ್ತಾರೆ. ಇಂತಹವರಿಗೆ ಏನನ್ನ ಬೇಕು. ಅಲ್ಲಾ ಸ್ವಾಮಿ ಮೋದಿಯವರೆ, ಕಳೆದ 11 ವರ್ಷಗಳಿಂದ ನೀವೆ ಅಧಿಕಾರದಲ್ಲಿ ಮೊಳೆ ಹೊಡೆದು ಕುಳಿತು ಕೊಂಡಿದ್ದೀರಿ. ಇಷ್ಟು ನೀವು ಕಡಿದು ಕಟ್ಟೆ ಹಾಕಿರುವುದು ಏನು.? ಎಲ್ಲಾ ಸಮಸ್ಯೆಗಳಿಗೆ ಕಾಂಗ್ರೆಸ್ ಹಾಗೂ ನೆಹರು ಮೇಲೆ ಗೂಬೆ ಕೂರಿಸುವುದೆ ನಿಮ್ಮ ಕೆಲಸವೆ..? ಎಂದು ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಜಿಲ್ಲೆಗೆ 14 ನಮ್ಮ ಕ್ಲಿನಿಕ್ ಮಂಜೂರು

● ಈ ಪೈಕಿ ರಾಜೀವ್‌ನಗರದಲ್ಲಿ ಒಂದು ಕಾರ್ಯಾರಂಭ ● ಜಿಲ್ಲೆಯಲ್ಲಿ ಕಳೆದ 2 ವರ್ಷದಿಂದ ವೈದ್ಯಕೀಯ ಸೇವೆ ಒದಗಿಸುತ್ತಿರುವ 9 ಕ್ಲಿನಿಕ್‌ಗಳು

ಮೈಸೂರು,ಮಾ.31(ಪಿಎಂ)– ನಗರ ಪ್ರದೇಶದ ಬಡ ವರ್ಗಕ್ಕೆ ಅವರ ವಸತಿ ಪ್ರದೇಶದಲ್ಲೇ ಪ್ರಾಥಮಿಕ ಹಂತದ ವೈದ್ಯಕೀಯ ಸೇವೆಯನ್ನು ಉಚಿತವಾಗಿ ಕಲ್ಪಿಸುವ ಉದ್ದೇಶದಿಂದ 'ನಮ್ಮ ಕ್ಲಿನಿಕ್' ವ್ಯವಸ್ಥೆ ಅಸ್ತಿತ್ವಕ್ಕೆ ತರಲಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ 9 ನಮ್ಮ ಕ್ಲಿನಿಕ್‌ಗಳು ಸೇವೆ ಒದಗಿಸುತ್ತಿವೆ.

ಇದೀಗ ಜಿಲ್ಲೆಯಲ್ಲಿ ಹೊಸದಾಗಿ 14 ನಮ್ಮ ಕ್ಲಿನಿಕ್‌ಗಳ ಆರಂಭಕ್ಕೆ ಅವಕಾಶ ದೊರೆತಿದ್ದು, ಸರ್ಕಾರ ಮಂಜೂರು ಮಾಡಿರುವ ಈ 14 ಕ್ಲಿನಿಕ್‌ಗಳ ಪೈಕಿ ಇತ್ತೀಚೆಗೆ ಮೈಸೂರಿನ ರಾಜೀವ ನಗರದಲ್ಲಿ ಒಂದು ಕ್ಲಿನಿಕ್ ಕಾರ್ಯಾರಂಭ ಮಾಡಿದೆ. ಉಳಿದ 13 ಕ್ಲಿನಿಕ್‌ಗಳ ಸಜ್ಜುಗೊಳಿಸುವ ಕಾರ್ಯ ಪ್ರಗತಿಯಲ್ಲಿ ಸಾಗಿದೆ.


ಪಿಎಂ ಅಭಿಮ್ ಯೋಜನೆಯಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುವ ಈ ಕ್ಲಿನಿಕ್‌ಗಳು 12 ಬಗೆಯ ವೈದ್ಯಕೀಯ ಸೇವೆಗಳನ್ನು (ಓಪಿಡಿ) ಉಚಿತವಾಗಿ ಕಲ್ಪಿಸಲಿವೆ. ಈ ಕ್ಲಿನಿಕ್‌ಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಮಾದರಿಯಲ್ಲಿಯೇ ಬೆಳಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಕಾರ್ಯನಿರ್ವಹಿಸಲಿವೆ. ವೈದ್ಯರು, ಸ್ಟಾಫ್ ನರ್ಸ್, ಗ್ರೂಪ್ ಡಿ, ಡಾಟಾ ಎಂಟ್ರಿ ಸಿಬ್ಬಂದಿ ಇಲ್ಲಿ ಸೇವೆ ಒದಗಿಸಲಿದ್ದಾರೆ.

ಈಗಾಗಲೇ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ 9 ನಮ್ಮ ಕ್ಲಿನಿಕ್‌ಗಳ ಪೈಕಿ 8 ಕ್ಲಿನಿಕ್‌ಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇನ್ನು ಹೊಸ 14 ನಮ್ಮ ಕ್ಲಿನಿಕ್‌ಗಳ ಪೈಕಿ 5 ಸರ್ಕಾರಿ ಕಟ್ಟಡದಲ್ಲಿ ಬರಲಿದ್ದು, ಉಳಿದ ಕ್ಲಿನಿಕ್‌ಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಸಜ್ಜುಗೊಳಿಸಲು ಮುಂದಾಗಲಾಗಿದೆ.

ಎಲ್ಲೆಲ್ಲಿ 14 ನಮ್ಮ ಕ್ಲಿನಿಕ್‌ಗಳು: ಟಿ.ನರಸೀಪುರ ತಾಲೂಕಿನ ಬನ್ನೂರು ಪಟ್ಟಣ ಹಾಗೂ ಕೆಆರ್ ನಗರ ಪಟ್ಟಣದಲ್ಲಿ ಬಾಡಿಗೆ ಕಟ್ಟಡಗಳಲ್ಲಿ ನಮ್ಮ ಕ್ಲಿನಿಕ್ ಆರಂಭಿಸಲಾಗುತ್ತಿದೆ. ಉಳಿದಂತೆ 12 ಕ್ಲಿನಿಕ್‌ಗಳು ಮೈಸೂರು ನಗರದಲ್ಲಿ ಆರಂಭಗೊಳ್ಳಲಿದ್ದು, ಈ ಪೈಕಿ ಈಗಾಗಲೇ ರಾಜೀವ್‌ನಗರದಲ್ಲಿ ಒಂದು ಆರಂಭಗೊಂಡಿದೆ. ಅಂತೆಯೇ ಮೈಸೂರು ನಗರದ ಸರ್ದಾರ್ ವಲ್ಲಭಭಾಯ್ ಪಟೇಲ್‌ನಗರ, ಭಾರತ ನಗರ, ವಿಜಯನಗರ ನಾಲ್ಕನೇ ಹಂತ (ಬಾಡಿಗೆ ಕಟ್ಟಡ), ವಿಜಯನಗರ ಮೂರನೇ ಹಂತ, ದಟ್ಟಗಳ್ಳಿ, ವಿಜಯನಗರ ಮೊದಲ ಹಂತದ ಬಾಡಿಗೆ ಕಟ್ಟಡಗಳಲ್ಲಿ ನಮ್ಮ ಕ್ಲಿನಿಕ್‌ಗಳನ್ನು ಆರಂಭಿಸಲಾಗುತ್ತಿದೆ. ಅದೇ ರೀತಿ ಹಳೇ ಕೆಸರೆ (ಸ್ಲಂ ಬೋರ್ಡ್ ಕಟ್ಟಡ), ಚಾಮುಂಡಿಬೆಟ್ಟ (ಸರ್ಕಾರಿ ಕಟ್ಟಡ), ಏಕಲವ್ಯನಗರ (ಸ್ಲಂ ಬೋರ್ಡ್‌ನ ಸರ್ಕಾರಿ ಕಟ್ಟಡ), ನಗರ ಬಸ್ ನಿಲ್ದಾಣ ಮತ್ತು ಸಬ್‌ಅರ್ಬನ್ ಬಸ್ ನಿಲ್ದಾಣದಲ್ಲಿ ಸರ್ಕಾರಿ ಕಟ್ಟಡಗಳಲ್ಲಿ ನಮ್ಮ ಕ್ಲಿನಿಕ್‌ಗಳನ್ನು ಸಜ್ಜುಗೊಳಿಸಲಾಗುತ್ತಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಆರ್‌ಸಿಹೆಚ್ (ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ) ಅಧಿಕಾರಿ ಹಾಗೂ ನಮ್ಮ ಕ್ಲಿನಿಕ್ ಜಿಲ್ಲಾ ನೋಡಲ್ ಅಧಿಕಾರಿ ಡಾ.ಮೊಹಮ್ಮದ್ ಶಿರಾಜ್ ಅಹಮ್ಮದ್, ಸರ್ಕಾರಿ ಆರೋಗ್ಯ ಸೇವೆಗಳು ಸಮರ್ಪಕವಾಗಿ ತಲುಪದ ಸ್ಥಳಗಳಲ್ಲಿ ಈ ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುತ್ತದೆ. ಈಗಾಗಲೇ ಒಂಭತ್ತು ನಮ್ಮ ಕ್ಲಿನಿಕ್‌ಗಳು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿವೆ. ಈಗ 14 ನಮ್ಮ ಕ್ಲಿನಿಕ್‌ಗಳು ಮಂಜೂರು ಆಗಿದ್ದು, ಈ ಪೈಕಿ ಮೊನ್ನೆಯಷ್ಟೇ ರಾಜೀವನಗರದಲ್ಲಿ ಒಂದು ಕಾರ್ಯಾರಂಭ ಮಾಡಿದೆ ಎಂದು ತಿಳಿಸಿದರು.

ಈ ರೀತಿಯ ಒಂದು ಕ್ಲಿನಿಕ್ 15 ಸಾವಿರ ಜನಸಂಖ್ಯೆಗೆ ಸೇವೆ ನೀಡಲಿದೆ. ರಾಜೀವ್‌ನಗರದಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇರಲಿಲ್ಲ. ಹಾಗಾಗಿ ಈ ಪ್ರದೇಶವನ್ನು ಆಯ್ಕೆ ಮಾಡಿ ಕ್ಲಿನಿಕ್ ತೆರೆಯಲಾಗಿದೆ. 13 ನಮ್ಮ ಕ್ಲಿನಿಕ್‌ಗಳು ಏಪ್ರಿಲ್ ಅಂತ್ಯದೊಳಗೆ ಆರಂಭಗೊಳ್ಳಲಿವೆ. ಹತ್ತಿರದ ಪಿಹೆಚ್‌ಸಿಗಳ ನಿಯಂತ್ರಣಕ್ಕೆ ಈ ಕ್ಲಿನಿಕ್‌ಗಳು ಒಳಪಟ್ಟಿರುತ್ತವೆ. ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದಲ್ಲಿ ಈಗಾಗಲೇ ಕ್ಲಿನಿಕ್ ಸಜ್ಜುಗೊಳಿಸಲಾಗಿದ್ದು, ಕಾರ್ಯಾರಂಭ ಬಾಕಿ ಉಳಿದಿದೆ ಎಂದರು.



ದಟ್ಟಗಳ್ಳಿ 3ನೇ ಹಂತದಲ್ಲಿರುವ ನಮ್ಮ ಕ್ಲಿನಿಕ್.

72,281 ಮಂದಿಗೆ ವೈದ್ಯಕೀಯ ಸೇವೆ

ಈಗಾಗಲೇ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ 9 ನಮ್ಮ ಕ್ಲಿನಿಕ್‌ಗಳಿಂದ 2024 ಏಪ್ರಿಲ್‌ನಿಂದ 2025ರ ಫೆಬ್ರವರಿವರೆಗೆ 72,281 ಮಂದಿ ವೈದ್ಯಕೀಯ ಸೇವೆ ಪಡೆದಿದ್ದಾರೆ. ಈ ಪೈಕಿ 38,128 ಮಹಿಳೆಯರು, 34,146 ಪುರುಷರು ಹಾಗೂ ಇತರೆ 7 ಮಂದಿ ಸೇರಿದ್ದಾರೆ. ಅಂತೆಯೇ ಕ್ಲಿನಿಕ್‌ವಾರು ಅಂಕಿ ಅಂಶ ನೋಡುವುದಾದರೆ, ಯರಗನಹಳ್ಳಿ ನಮ್ಮ ಕ್ಲಿನಿಕ್‌ನಿಂದ 11,822, ಟಿ.ನರಸೀಪುರ ನಮ್ಮ ಕ್ಲಿನಿಕ್‌ನಿಂದ 8,413, ಶ್ರೀರಾಂಪುರ ಕ್ಲಿನಿಕ್‌ನಿಂದ 13,581, ಕೆಆರ್ ನಗರ ನಮ್ಮ ಕ್ಲಿನಿಕ್‌ನಿಂದ 8,086, ಹೆಚ್‌ಡಿ ಕೋಟೆ ನಮ್ಮ ಕ್ಲಿನಿಕ್‌ನಿಂದ 7,846, ಹೂಟಗಳ್ಳಿ ಕ್ಲಿನಿಕ್‌ನಿಂದ 12,309, ಬೋಗಾದಿ ನಮ್ಮ ಕ್ಲಿನಿಕ್‌ನಿಂದ 3,782, ಹೊಸಹುಂಡಿ ನಮ್ಮ ಕ್ಲಿನಿಕ್‌ನಿಂದ 1,493, ಪಿರಿಯಾಪಟ್ಟಣ ನಮ್ಮ ಕ್ಲಿನಿಕ್‌ನಿಂದ 839 ಮಂದಿ ವೈದ್ಯಕೀಯ ಸೇವೆ ಪಡೆದಿದ್ದಾರೆ ಎಂದು ಆರೋಗ್ಯ ಇಲಾಖೆ ಅಂಕಿ ಅಂಶ ತಿಳಿಸಿದೆ.

12 ವಿಧದ ಸೇವೆ ಲಭ್ಯ

ನಮ್ಮ ಕ್ಲಿನಿಕ್‌ನಲ್ಲಿ ಸಾರ್ವಜನಿಕರಿಗೆ 12 ರೀತಿಯ ವೈದ್ಯಕೀಯ ಲಭ್ಯ ಇರಲಿವೆ. ಅವುಗಳೆಂದರೆ, ಗರ್ಭಿಣಿ ಮತ್ತು ಜನನ ಸಮಯದ ಆರೈಕೆ, ನವಜಾತ ಶಿಶುವಿನ ಸಮಗ್ರ ಆರೈಕೆ, ಬಾಲ್ಯ ಮತ್ತು ಹದಿಹರೆಯದವರಿಗೆ ಅಗತ್ಯ ವೈದ್ಯಕೀಯ ಸೇವೆ, ಸಾರ್ವಜನಿಕ ಲಸಿಕಾಕರಣದ ಸೇವೆಗಳು, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ಸಾಮಾನ್ಯ ಮತ್ತು ಸಣ್ಣ ಕಾಯಿಲೆಗಳಿಗೆ ಚಿಕಿತ್ಸೆ, ಸಕ್ಕರೆ ಕಾಯಿಲೆ, ದೀರ್ಘಾವಧಿ ಕಾಯಿಲೆಗಳಿಗೆ ಚಿಕಿತ್ಸೆ, ಬಾಯಿ, ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್‌ಗೆ ಪ್ರಾಥಮಿಕ ಚಿಕಿತ್ಸೆ, ಬಾಯಿ ಮತ್ತು ಕಣ್ಣಿನ ತಪಾಸಣೆ ಹಾಗೂ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ವೈದ್ಯಕೀಯ ಸೇವೆಗಳು ದೊರೆಯಲಿವೆ.

ಹಾಸನ ಮಿತ್ರ

ಕಪ್ಪು ಪಟ್ಟಿ ಧರಿಸಿ ರಂಜಾನ್ ಪ್ರಾರ್ಥನೆ

ವಕ್ಫ್ ಕಾಯಿದೆ ತಿದ್ದುಪಡಿಗೆ ಶಾಸಕ ಹೆಚ್.ಪಿ.ಸ್ವರೂಪ್ ವಿರೋಧ



ಹಾಸನ, ಮಾ.31– ನಗರದ ಹೊಸ ಲೈನ್ ರಸ್ತೆ ಬಳಿ ಇರುವ ಹಳೆ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಸೋಮವಾರದಂದು ಮುಸ್ಲಿಂ ಬಾಂಧವರು ಕಪ್ಪು ಪಟ್ಟಿ ಧರಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಇದೇ ವೇಳೆ ಕ್ಷೇತ್ರದ ಶಾಸಕ ಹೆಚ್.ಪಿ.ಸ್ವರೂಪ್ ಮುಸ್ಲಿಂ ಬಾಂಧವರ ಹೋರಾಟಕ್ಕೆ ಸಾಥ್ ನೀಡಿದರು.


ಶಾಸಕ ಹೆಚ್.ಪಿ.ಸ್ವರೂಪ್ ಮಾತನಾಡಿ, ಕೇಂದ್ರ ಸರ್ಕಾರವು ವಕ್ಫ್ ಬಿಲ್‌ಗೆ ತಿದ್ದುಪಡಿ ತಂದಿದೆ. ನಾನು ಅದಕ್ಕೆ ವಿರೋಧ ವ್ಯಕ್ತಪಡಿಸುತ್ತೇನೆ. ಜೆಡಿಎಸ್ ಅಧ್ಯಕ್ಷರಾದ ಹೆಚ್.ಡಿ. ದೇವೇಗೌಡರು ಕೂಡ ಈ ಬಗ್ಗೆ ಗಮನಸೆಳೆಯಲು ಸಂಬಂಧಪಟ್ಟ ಕೇಂದ್ರ ಸಚಿವರ ಜೊತೆ ಮಾತುಕತೆ ಮಾಡಿ ಬಿಲ್ ವಾಪಸ್ ತೆಗೆದುಕೊಳ್ಳಲು ಹೋರಾಟ ಮಾಡುವುದಾಗಿ ಹೇಳಿದ್ದಾರೆ ಎಂದರು.

ಈದ್ಗಾ ಕಮಿಟಿ ಅಧ್ಯಕ್ಷ ಸಮೀರ್ ಖಾನ್ ಮಾತನಾಡಿ, ಸಮಸ್ತ ನಾಗರಿಕ ಬಂಧುಗಳಿಗೆ, ಅಣ್ಣ ತಮ್ಮಂದಿರಿಗೆ ಹಾಗೂ ಅಕ್ಕ ತಂಗಿಯರಿಗೆ ರಂಜಾನ್ ಮತ್ತು ಯುಗಾದಿ ಹಬ್ಬದ ಶುಭಾಶಯಗಳು. 30 ದಿನಗಳ ಕಾಲ ಉಪವಾಸ ಮಾಡಿ ಕೊನೆಯ ದಿವಸ ಸಾಮೂಹಿಕ ಪ್ರಾರ್ಥನೆಯೊಂದಿಗೆ ರಂಜಾನ್ ಉಪವಾಸ ಮುಕ್ತಾಯಗೊಳ್ಳಲಿದೆ. ಈ ದಿನ ವಿಶೇಷ ಪ್ರಾರ್ಥನೆಯೊಂದಿಗೆ ಈ ಜಗತ್ತಿನ ಎಲ್ಲಾ ಕೆಡುಕುಗಳಿಗೆ ಅಂತ್ಯವಾಗಲು ಬೇಡಿಕೊಳ್ಳುತ್ತೇವೆ ಎಂದರು.

ಥೈಲ್ಯಾಂಡ್, ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಅನಾಹುತಗಳು ತಪ್ಪಲಿ ಎಂದು ಈ ವೇಳೆ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದ್ದೇವೆ. ದ್ವೇಷ, ಅಸೂಯೆಯನ್ನು ದೂರವಿಟ್ಟು ನಾವು ಸಹೋದರರು. ನಾವೆಲ್ಲಾ ಒಂದೇ ದೇಶಪ್ರೇಮ ಭಾವನೆಯೊಂದಿಗೆ ಉಪವಾಸ ಆಚರಣೆ ಮಾಡಲಾಗುತ್ತದೆ. ಕಡು ಬಡವರ ಸೇವೆ ಮಾಡುವುದು, ಇದ್ದವರು ಇಲ್ಲದವರಿಗೆ ಕೊಡುವುದು ರಂಜಾನ್ ಹಬ್ಬದ ವಿಶೇಷತೆ ಎಂದು ಹೇಳಿದರು.

ಕೇಂದ್ರ ಸರಕಾರ ಜಾರಿಗೆ ತಂದಿರುವ ವಕ್ಫ್ ಮಸೂದೆ ವಿರೋಧಿಸಿ ನಾವುಗಳು ಕಪ್ಪುಪಟ್ಟಿ ಧರಿಸಿ ಶಾಂತಿಯುತವಾಗಿ ವಿರೋಧವನ್ನು ವ್ಯಕ್ತಪಡಿಸುತ್ತಿದ್ದೇವೆ ಎಂದರು. ಹಳೇ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಕಾಂಗ್ರೆಸ್ ಯುವ ಮುಖಂಡರಾದ ಚಂದ್ರಶೇಖರ್ ಆಗಮಿಸಿ ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿದರು.

ಹನಿಟ್ರ್ಯಾಪ್ ಬೀಸಿದವರು, ಸಿಲುಕಿದವರಿಬ್ಬರೂ ಒಳ್ಳೆಯವರಲ್ಲ



ಸಕಲೇಶಪುರ: ಸದನವು ದೊಡ್ಡ ದೇವಸ್ಥಾನದಂತೆ. ಅಲ್ಲಿ ಹನಿಟ್ರ್ಯಾಪ್‌ನಂತಹ ಘಟನೆಗಳ ಬಗ್ಗೆ ಚರ್ಚೆಯಾಗುವುದು ತಲೆತಗ್ಗಿಸುವ ವಿಷಯ. ಇದರಿಂದ ಯಾರಿಗೆ ಒಳ್ಳೆಯದಾಗುತ್ತದೆ. ಹನಿಟ್ರ್ಯಾಪ್ ಬೀಸಿದವನೂ ಒಳ್ಳೆಯವನಲ್ಲ; ಸಿಕ್ಕಿ ಹಾಕಿಕೊಂಡವನೂ ಒಳ್ಳೆಯವನಲ್ಲ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಮೌಲ್ಯವನ್ನು ಎಲ್ಲರೂ ಅರಿಯಬೇಕು. ಹಿಂದಿನ, ಈಗಿನ ರಾಜಕಾರಣಕ್ಕೆ ಬಹಳ ಅಂತರವಿದೆ. ದುಡ್ಡು ಕೊಟ್ಟು ಗೆದ್ದು ಬಂದು, ಬೆಂಗಳೂರಿನಲ್ಲಿ ಕುಳಿತು ದುಡ್ಡು ಮಾಡಿ, ಮತ್ತೆ ದುಡ್ಡು ಖರ್ಚು ಮಾಡಿ ಆಯ್ಕೆಯಾಗುವ ಪರಿಪಾಠವಿದೆ. ಎಲ್ಲಿಯವರೆಗೆ ದುಡ್ಡು ಕೊಟ್ಟು ಮತ ಹಾಕಿಸಿಕೊಳ್ಳುತ್ತಾರೆಯೋ, ಅಲ್ಲಿಯವರೆಗೆ ಪ್ರಜಾಪ್ರಭುತ್ವವನ್ನು ಕೇಳುವವರು ಇರುವುದಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಸದನಕ್ಕೆ ಕಾಲಿಟ್ಟರೆ ಎಲ್ಲರೂ ಶಾಸಕರೇ. ವಯಸ್ಸಿನ ಪ್ರಶ್ನೆ ಇಲ್ಲ. ಅನುಭವಿಗಳು ಹೇಳಿದ್ದನ್ನು ಕೇಳುವುದಿಲ್ಲ. ಯಾರಿಗೂ ಯಾರ ಹೆದರಿಕೆಯೂ ಇಲ್ಲ. ದುಡ್ಡು ಕೊಟ್ಟು ಆರಿಸಿ ಬರುತ್ತೇನೆ ಎಂಬ ಭಾವನೆ ಇದೆ. ಇನ್ನೊಂದೆಡೆ ಜಾತಿ ವ್ಯವಸ್ಥೆಯೂ ಇದೆ ಎಂದರು.

ವಿರೋಧ ಪಕ್ಷದ ನಾಯಕರು ಸಭಾಧ್ಯಕ್ಷರಿಗೆ ಗೌರವ ಕೊಡುವುದನ್ನು ಕಲಿಯಬೇಕು. ಮಕ್ಕಳಂತೆ ಶಾಸಕರಿಗೂ ತರಬೇತಿ ಕೊಡಬೇಕಾಗಿದೆ. ಸಭಾಪತಿ ಪೀಠದ ಮೇಲೆ ಕುಳಿತುಕೊಳ್ಳುವುದು, ಅಧ್ಯಕ್ಷರ ಮುಖದ ಮೇಲೆ ಕಾಗದದ ಚೂರುಗಳನ್ನು ಎಸೆಯುವುದು ಒಳ್ಳೆಯದಲ್ಲ. ಸಭಾಪತಿ ಸುಪ್ರೀಂಕೋರ್ಟ್ ನ್ಯಾಯಾಧೀಶರಂತೆ. ಅವರಿಗೆ ಗೌರವ ಕೊಡಬೇಕು ಎಂದು ಹೇಳಿದರು.

ಯುಗಾದಿ ಅಂಗವಾಗಿ ದೇವರ ಅಡ್ಡೆ ಉತ್ಸವ



ಹಾಸನ,ಮಾ.31–ಯುಗಾದಿ ಹಬ್ಬದ ಅಂಗವಾಗಿ ತಾಲೂಕಿನ ಅಗಿಲೆ ಗ್ರಾಮದಲ್ಲಿ ಶ್ರೀ ಕೆರೆಕೋಡಿಯಮ್ಮ ಮತ್ತು ಶ್ರೀ ಚನ್ನಕೇಶವ ದೇವರ ಅಡ್ಡೆ ಉತ್ಸವ ವಿಜೃಂಭಣೆಯಿಂದ ಜರುಗಿತು. ಇದೇ ವೇಳೆ ದೇವಸ್ಥಾನದ ಅರ್ಚಕರಾದ ಸುಬ್ರಹ್ಮಣ್ಯ ಮಾಧ್ಯಮದೊಂದಿಗೆ ಮಾತನಾಡಿ, ವರ್ಷದ ಯುಗಾದಿ ಹಬ್ಬದ ಮೂಲಕ ವರ್ಷ ಪ್ರಾರಂಭವಾಗುತ್ತದೆ. ಬೆಳಗಿನಿಂದಲೇ ವಿಶೇಷ ಪೂಜೆಗಳು ನೆರವೇರಿಸಲಾಗಿದೆ. ಯುಗಾದಿ ಹಬ್ಬದ ಅಂಗವಾಗಿ ಗ್ರಾಮದ ಜನರು ಹೊಸ ಬಟ್ಟೆಯನ್ನು ಧರಿಸಿ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಶ್ರೀ ಕೆರೆಕೋಡಿಯಮ್ಮ ಮತ್ತು ಶ್ರೀ ಚನ್ನಕೇಶವ ದೇವರ ಅಡ್ಡೆ ಅಗಿಲೆ ಗ್ರಾಮದೊಳಗೆ ಬಂದು ಮನೆ ಮುಂದೆ ತೆರಳಿದರು. ಇದೇ ವೇಳೆ ನೂರಾರು ಜನರು ಅಡ್ಡೆ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಆಲೂರು: ಅಕ್ರಮ ಮರಳು ವಶ



ಆಲೂರು: ತಾಲೂಕಿನ ಕಿತ್ತಗೆರೆ ವ್ಯಾಪ್ತಿ ಹೇಮಾವತಿ ನದಿಯಲ್ಲಿ ಅಕ್ರಮವಾಗಿ ತೆಗೆದಿದ್ದ ಮರಳು ಮತ್ತು ತೆಪ್ಪಗಳನ್ನು ಗ್ರೇಡ್–2 ತಹಸೀಲ್ದಾರ್ ಕೆ.ಆರ್. ಪೂರ್ಣಿಮಾ ನೇತೃತ್ವದಲ್ಲಿ ವಶಪಡಿಸಿಕೊಳ್ಳಲಾಗಿದೆ. ಆಲೂರು, ಸಕಲೇಶಪುರ ಮತ್ತು ಬೇಲೂರು ತಾಲೂಕು ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮರಳು ಗಣಿಗಾರಿಕೆ ನಡೆಯುತ್ತಿದೆ ಎಂಬ ಸುದ್ದಿ ತಿಳಿದು ಗಣಿಗಾರಿಕೆ ಅಧಿಕಾರಿಗಳು, ಪೊಲೀಸರು ಮತ್ತು ತಾಲೂಕಿನ ಮರಳು ಸಮಿತಿ ಸದಸ್ಯರೊಂದಿಗೆ ತಡರಾತ್ರಿ ದಾಳಿ ನಡೆಸಿದ್ದಾರೆ. ಮರಳನ್ನು ವಶಕ್ಕೆ ಪಡೆದ ನಂತರ ಸ್ಥಳಕ್ಕೆ ಟ್ರ್ಯಾಕ್ಟರ್, ಜೆಸಿಬಿ ತರಿಸಿಕೊಂಡು ಸ್ಥಳದಲ್ಲೇ ಸದರಿ ಮರಳನ್ನು, ಸರ್ಕಾರಿ ಕಾಮಗಾರಿಗೆ ಲೋಕೋಪಯೋಗಿ ಎಸ್.ಆರ್ ದರದಂತೆ ಸಂಬಂಧಿಸಿದ ಶುಲ್ಕ 63,300 ಸರ್ಕಾರಕ್ಕೆ ಪಾವತಿಸಿ ಮರಳನ್ನು ತಡರಾತ್ರಿ 3 ಗಂಟೆಗೆ ವಿಲೇವಾರಿ ಮಾಡಲಾಯಿತು. ವಶಕ್ಕೆ ಪಡೆದ ಎರಡು ತೆಪ್ಪಗಳು, ಆರು ಲಾರಿ ಲೋಡ್ ಮರಳನ್ನು ಆಲೂರು ಪೊಲೀಸ್ ಠಾಣೆಗೆ ನೀಡಲಾಗಿದೆ.

ಐಸ್ ಕ್ರೀಂ ತಯಾರಿಕಾ ಘಟಕಗಳ ಮೇಲೆ ದಾಳಿ



ಮೈಸೂರು ಜಿಲ್ಲೆಯ ವಿವಿಧೆಡೆ ಐಸ್ ಕ್ರೀಂ ತಯಾರಿಕಾ ಘಟಕಗಳ ಮೇಲೆ ಆಹಾರ ಸುರಕ್ಷತಾ ಅಧಿಕಾರಿಗಳು ದಾಳಿ ಮಾಡಿ ಪರಿಶೀಲನೆ ನಡೆಸಿದರು.

ಮೈಸೂರು, ಮಾ.31(ಬಿಎಲ್‌ಯು)– ಐಸ್ ಕ್ರೀಂ ತಯಾರಿಕಾ ಘಟಕಗಳ ಮೇಲೆ ಆಹಾರ ಸುರಕ್ಷತಾ ಅಧಿಕಾರಿಗಳು ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ. ಆಹಾರ ಸುರಕ್ಷತಾ ಅಧಿಕಾರಿ ಡಾ.ರವಿಕುಮಾರ್ ನೇತೃತ್ವದ ತಂಡ ಮೈಸೂರಿನ ಹೆಚ್.ಡಿ.ಕೋಟೆಯ ಹ್ಯಾಂಡ್‌ಪೋಸ್ಟ್ ಹಾಗೂ ಹಂಪಾಪುರದಲ್ಲಿರುವ ಐಸ್ ಕ್ರೀಂ ಘಟಕಗಳ ಮೇಲೆ ದಾಳಿ ಮಾಡಿದೆ.

ಐಸ್ ಕ್ರೀಂ ತಯಾರಿಕೆಗೆ ಶುದ್ಧ ನೀರು ಬಳಸಬೇಕು, ಯಾವುದೇ ರೀತಿಯ ಬಣ್ಣ ಹಾಕಬಾರದು, ಐಸ್ ಕ್ರೀಂ ತಯಾರಿಕೆಯ ಸ್ಥಳವನ್ನು ಸ್ವಚ್ಛತೆಯಿಂದ ಕಾಪಾಡಬೇಕು ಎಂದು ಸೂಚನೆ ನೀಡಿದರು. ದಾಳಿ ವೇಳೆ ಆರೋಗ್ಯ ನಿರೀಕ್ಷಕರಾದ ರವಿರಾಜ್, ನಾಗೇಶ್ ಮತ್ತು ಪ್ರತಾಪ್ ಇನ್ನಿತರರು ಹಾಜರಿದ್ದರು.

ಜನರಲ್ ತಿಮ್ಮಯ್ಯ ಅವರ ಜನ್ಮ ದಿನಾಚರಣೆ


ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ಆಶ್ರಯದಲ್ಲಿ ಮೈಸೂರಿನ ರಾಜೇಂದ್ರನಗರ ವೃತ್ತದಲ್ಲಿ ಜನರಲ್ ತಿಮ್ಮಯ್ಯ ಅವರ 119ನೇ ಜನ್ಮದಿನ ಅಂಗವಾಗಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಸಿಹಿ ವಿತರಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಕಾರ್ಯದರ್ಶಿ ಸರ್ದಾರ್ ಮಹೇಶ್, ಮಂಜುನಾಥ್, ವಕೀಲ ಶಶಿಕಿರಣ್, ಮೋಹನ್‌ಸಿಂಗ್, ರಂಗಪ್ಪಗೌಡ ಇನ್ನಿತರರಿದ್ದರು.

ಮಂಡ್ಯ ಹೊರತಾಗಿ ಮೈಸೂರು, ಕೊಡಗು, ಚಾ.ನಗರ ಜಿಲ್ಲೆಗಳಲ್ಲಿ ಹಗುರು ಮಳೆ ಸಾಧ್ಯತೆ



ಮೈಸೂರು, ಮಾ.31(ಪಿಎಂ)– ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮಂಡ್ಯ ಜಿಲ್ಲೆ ಹೊರತಾಗಿ ಮೈಸೂರು, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಏ.2ರವರೆಗಿನ ಅವಧಿಯಲ್ಲಿ ಹಗುರ ಮಳೆಯಾಗುವ ಸಂಭವವಿದೆ.

ಮೈಸೂರು ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 35ರಿಂದ 37 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 21ರಿಂದ 23 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.68ರಿಂದ 74ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.20ರಿಂದ25ವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 6ರಿಂದ 12 ಕಿಲೋ ಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಅದೇ ರೀತಿ ಕೊಡಗು ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಇರುವ ಮೂಲಕ ತುಂತುರು ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 32ರಿಂದ 33 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 20ರಿಂದ 21 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.86ರಿಂದ 93ರ ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.29ರಿಂದ 43ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 8ರಿಂದ 14 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಅಂತೆಯೇ ಚಾಮರಾಜನಗರ ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 35ರಿಂದ 37 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 21ರಿಂದ 23 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.68ರಿಂದ 74ರವರೆಗೆ ಮತ್ತು ಮಧ್ಯಾಹ್ನದ ತೇವಾಂತ ಶೇ.20ರಿಂದ 25ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 6ರಿಂದ 12 ಕಿಲೋ ಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಮಂಡ್ಯ ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಇದ್ದರೂ ಮಳೆ ಬರುವ ಸಂಭವವಿಲ್ಲ. ಗರಿಷ್ಠ ಉಷ್ಣಾಂಶ 35ರಿಂದ 36 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 22ರಿಂದ 23 ಡಿಗ್ರಿ ಸೆಲ್ಸಿಯಸ್ ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.80ರಿಂದ 83ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.19ರಿಂದ 25ರವರೆಗೆ ದಾಖಲಾಗುವ ಮತ್ತು ಗಾಳಿಯು ಗಂಟೆಗೆ 6ರಿಂದ 8 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಎಸ್.ಶ್ರೀಕಾಂತ್‌ಗೆ ಸನ್ಮಾನ...


ಮೈಸೂರು ತಾಲೂಕು ಜಯಪುರ ಗ್ರಾಮದ ಸಿದ್ದಪ್ಪಾಜಿ ಬಡಾವಣೆಯಲ್ಲಿ ಯುಗಾದಿ ಅಮಾವಾಸ್ಯೆ ಪ್ರಯುಕ್ತ ಶನಿವಾರ ನಡೆದ ಮಂಟೇಸ್ವಾಮಿ ದೇವರ ಕಂಡಾಯ ಉತ್ಸವಕ್ಕೆ ವೈಯಕ್ತಿಕವಾಗಿ 10 ಸಾವಿರ ರೂ.ಗಳ ದೇಣಿಗೆ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಜಯಪುರ ಗ್ರಾಪಂ ಅಧ್ಯಕ್ಷ ಎಂ.ಮಾದೇವಯ್ಯ, ಮುಖಂಡರಾದ ಜವರನಾಯಕ, ಬಿ.ರೇಣುಕಾ, ಬೈರೇಗೌಡ, ಅರ್ಚಕರಾದ ಸಿದ್ದರಾಜು, ಬಸವರಾಜು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಎಂ.ಲಕ್ಷ್ಮಿಕಾಂತ್ ಹೆಬ್ಬಾಳ ಠಾಣೆ ಇನ್ಸ್‌ಪೆಕ್ಟರ್




ಮೈಸೂರು,ಮಾ.31(ಎಂಕೆ)–ಹೆಬ್ಬಾಳ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಆಗಿ ಎಂ.ಲಕ್ಷ್ಮಿಕಾಂತ್ ಅವರನ್ನು ನಿಯೋಜಿಸಲಾಗಿದೆ. ಇಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಮಲ್ಲೇಶ್ ಬಡ್ತಿ ಹೊಂದಿ ವರ್ಗಾವಣೆಗೊಂಡಿದ್ದಾರೆ. ಇದೇ ವೇಳೆ 11 ಪೊಲೀಸ್ ಸಿಬ್ಬಂದಿಯನ್ನು ವಿವಿಧ ಸ್ಥಳಗಳಿಗೆ ನಿಯೋಜಿಸಲಾಗಿದ್ದು, ಐವರನ್ನು ವರ್ಗಾಯಿಸಲಾಗಿದೆ. ಜೊತೆಗೆ 15 ಡಿವೈಎಸ್‌ಪಿಗಳನ್ನು ಸಹ ವರ್ಗಾವಣೆ ಮಾಡಲಾಗಿದೆ. ಲಕ್ಷ್ಮಿಕಾಂತ್ ಅವರು ಬೇಗೂರು, ಸರಗೂರು ಇನ್ನಿತರೆ ಕಡೆ ಸೇವೆ ಸಲ್ಲಿಸಿದ್ದರು.

ಏ.28ರಿಂದ ದುಬೈನ ಶಾರ್ಜಾ ಮೈದಾನದಲ್ಲಿ ಕರ್ನಾಟಕ ಸೆಲಬ್ರಿಟಿ ಲೀಗ್ ಕ್ರಿಕೆಟ್ ಪಂದ್ಯಾವಳಿ

ದುಬೈನಲ್ಲಿರುವ ಅನಿವಾಸಿ ಕನ್ನಡಿಗರಿಗೆ ಸ್ಯಾಂಡಲ್‌ವುಡ್ ನಟ, ನಟಿಯರನ್ನು ಒಂದೇ ವೇದಿಕೆಯಲ್ಲಿ ನೋಡುವ ಅವಕಾಶ

● ಟೂರ್ನಿಯಲ್ಲಿ ಭಾಗವಹಿಸಲಿವೆ 10 ತಂಡಗಳು ● ಪ್ರತಿ ತಂಡಕ್ಕೆ 12 ಓವರ್‌ಗಳು

● ಲೂಸ್ ಮಾದ, ಡಾರ್ಲಿಂಗ್ ಕೃಷ್ಣ, ತರುಣ್ ಸುಧೀರ್ ಸೇರಿ ಹಲವರ ನಾಯಕತ್ವ



ಸುದ್ದಿಗೋಷ್ಠಿಯಲ್ಲಿ ಅನಿವಾಸಿ ಕನ್ನಡಿಗ ಶ್ರೀನಿಧಿ ಮಾತನಾಡಿದರು.

ಮೈಸೂರು, ಮಾ.31(ಜಿಎ)–ದುಬೈನಲ್ಲಿರುವ ಅನಿವಾಸಿ ಕನ್ನಡಿಗರು ಸ್ಯಾಂಡಲ್‌ವುಡ್ ನಟ, ನಟಿಯರನ್ನು ಒಂದೇ ವೇದಿಕೆಯಲ್ಲಿ ಕಂಡು ಸಂಭ್ರಮಿಸುವಂತೆ ಮಾಡುವ ಸಲುವಾಗಿ ಕರ್ನಾಟಕ ಸೆಲೆಬಿಟಿ ಲೀಗ್ ಆಯೋಜಿಸಲಾಗಿದೆ.


ಮೈಸೂರಿನ ಲಲಿತಮಹಲ್ ಪ್ಯಾಲೇಸ್‌ನಲ್ಲಿ ತಂಡದ ಆಟಗಾರರ ಹರಾಜು ಪ್ರಕ್ರಿಯೆಗೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಯೂರ್ ಮಾಸ್ಟರ್, ದುಬೈನಲ್ಲಿರುವ ಅನಿವಾಸಿ ಕನ್ನಡಿಗರು ಒಂದುಗೂಡಿ ಕರ್ನಾಟಕ ಸೆಲೆಬ್ರಿಟಿ ಲೀಗ್ ಆಯೋಜಿಸುತ್ತಿದ್ದು, ಏ.28ರಿಂದ ಮೇ 3ರವರೆಗೆ ದುಬೈನ ಶಾರ್ಜಾ ಮೈದಾನದಲ್ಲಿ ಪಂದ್ಯಗಳು ನಡೆಯಲಿವೆ. ಕನ್ನಡ ಚಿತ್ರರಂಗದ ಕಲಾವಿದರು, ತಂತ್ರಜ್ಞರು ಮಾತ್ರ ಭಾಗವಹಿಸಲಿದ್ದಾರೆ. ದುಬೈನಲ್ಲಿರುವ ಅನಿವಾಸಿ ಕನ್ನಡಿಗರನ್ನು ಒಂದುಗೂಡಿಸುವುದೇ ಇದರ ಉದ್ದೇಶ ಎಂದು ತಿಳಿಸಿದರು.

ಟೂರ್ನಿಯಲ್ಲಿ 10 ತಂಡಗಳು ಭಾಗವಹಿಸಲಿವೆ. 12 ಓವರ್‌ಗಳ ಪಂದ್ಯ ಇದಾಗಿದ್ದು, ಎರಡು ಗುಂಪಿನಲ್ಲಿ ತಲಾ 5 ತಂಡಗಳಿದ್ದು, ಪ್ರತಿ ತಂಡ 4 ಪಂದ್ಯಗಳನ್ನಾಡಲಿದೆ. ಪ್ರತೀ ಗುಂಪಿನ ಟಾಪ್ ಎರಡು ತಂಡಗಳು ನಾಕ್‌ಔಟ್ ಪಂದ್ಯ ಆಡಲಿವೆ. ಪಂದ್ಯದ ನೇರ ಪ್ರಸಾರವೂ ಇರಲಿದೆ ನಟರಾದ ಲೂಸ್ ಮಾದ ಯೋಗಿ, ಡಾರ್ಲಿಂಗ್ ಕೃಷ್ಣ, ತರುಣ್ ಸುಧೀರ್ ಸೇರಿದಂತೆ ಹಲವರು ತಂಡದ ನಾಯಕರಾಗಲಿದ್ದಾರೆ. ಇಂದು ತಂಡದ ಆಟಗಾರರ ಹರಾಜು ಪ್ರಕ್ರಿಯೆಯನ್ನು ಮೈಸೂರಿನಲ್ಲೇ ನಡೆಸಲಾಗುತ್ತಿದೆ ಎಂದರು.

ಅನಿವಾಸಿ ಕನ್ನಡಿಗ ಸಿರಾಜ್ ಮಾತನಾಡಿ, ಕೋವಿಡ್‌ಗೂ ಮುನ್ನ ದುಬೈನಲ್ಲಿ ನಮ್ಮ ಅನಿವಾಸಿ ಕನ್ನಡಿಗರ ಸಂಘ ಹುಟ್ಟಿಕೊಂಡಿತು. ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿ ಕನ್ನಡಿಗರನ್ನು ಒಂದೆಡೆ ಸೇರಿಸುವ ಉದ್ದೇಶ ನಮ್ಮದಾಗಿತ್ತು. ಕೋವಿಡ್ ಸಮಯದಲ್ಲಿ ಕನ್ನಡಿಗರು ಸಂಕಷ್ಟಕ್ಕೆ ಸಿಲುಕಿದಾಗ ಅವರಿಗೆ ವಿಮಾನ ಸೇವೆ ಸೇರಿದಂತೆ ಬೇರೆ ಬೇರೆ ರೀತಿಯಲ್ಲಿ ನಮ್ಮ ಸಂಘ ನೆರವಿಗೆ ನಿಂತಿದೆ ಎಂದರು.

ಜತೆಗೆ ಕೆಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಿದೆ. ಆದರೆ, ಒಂದು ದೊಡ್ಡ ಕಾರ್ಯಕ್ರಮ ಮಾಡಿ ಎಲ್ಲರನ್ನೂ ಒಂದೆಡೆ ಸೇರಿಸಲು ಸಾಧ್ಯವಾಗಿರಲಿಲ್ಲ. ಇಂದು ಕ್ರಿಕೆಟ್ ಹೆಚ್ಚು ಜನಪ್ರಿಯವಾಗಿರುವುದರಿಂದ ಕನ್ನಡದ ಸೆಲೆಬ್ರಿಟಿಗಳನ್ನು ದುಬೈಗೆ ಕರೆಸಲು ಈ ಟೂರ್ನಿ ಮಾಡುತ್ತಿದ್ದೇವೆ. ಇದರಿಂದ ಎಲ್ಲಾ ಕಲಾವಿದರನ್ನೂ ಒಂದೇ ವೇದಿಕೆಯಲ್ಲಿ ನೋಡುವ ಅವಕಾಶ ದುಬೈನಲ್ಲಿನ ಕನ್ನಡಿಗರಿಗೆ ಸಿಗಲಿದೆ. ದುಬೈನಲ್ಲಿ ಸುಮಾರು 10 ಸಾವಿರ ಕನ್ನಡಿಗರಿದ್ದಾರೆ ಎಲ್ಲರೂ ಒಂದೆಡೆ ಸೇರಿ ಸಂಭ್ರಮಿಸಬೇಕು. ಈ ಕ್ರಿಕೆಟ್ ಲೀಗ್ ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಬೇರೆ ಬೇರೆ ಕ್ರೀಡೆಗಳನ್ನು ಆಯೋಜಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಅನಿವಾಸಿ ಕನ್ನಡಿಗ ಶ್ರೀನಿಧಿ ಇತರರಿದ್ದರು.

ಇಂದು ಮೃಗಾಲಯಕ್ಕೆ ಪ್ರವೇಶಾವಕಾಶ



ಮೈಸೂರು,ಮಾ.31(ಎಂಟಿವೈ)– ಯುಗಾದಿ, ರಂಜಾನ್ ಹಬ್ಬದಿಂದಾಗಿ ಸಾಲು ಸಾಲು ಸಾರ್ವತ್ರಿಕ ರಜೆ ಹಿನ್ನೆಲೆಯಲ್ಲಿ ಮೈಸೂರು ಮೃಗಾಲಯ ಹಾಗೂ ಕಾರಂಜಿಕೆರೆಗೆ ಏ.1ರಂದು ಪ್ರವೇಶಾವಕಾಶವಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ರಂಗಸ್ವಾಮಿ ತಿಳಿಸಿದ್ದಾರೆ.

ಮೃಗಾಲಯಕ್ಕೆ ಪ್ರತಿ ಮಂಗಳವಾರ ರಜೆ ಇದ್ದು, ಆದರೆ ಸಾಲು ಸಾಲು ರಜೆ ಹಿನ್ನೆಲೆಯಲ್ಲಿ ಮೈಸೂರಿಗೆ ಭಾರಿ ಪ್ರಮಾಣದಲ್ಲಿ ಬರುವ ಪ್ರವಾಸಿಗರಿಗೆ ನಿರಾಸೆಯಾಗಬಾರದೆಂಬ ಉದ್ದೇಶದಿಂದ ಮೃಗಾಲಯಕ್ಕೆ ಈ ಮಂಗಳವಾರದ ರಜೆಯನ್ನು ರದ್ದು ಮಾಡಲಾಗಿದೆ. ಏ.1ರಂದು ಎಂದಿನಂತೆ ಮೈಸೂರು ಮೃಗಾಲಯ ಹಾಗೂ ಕಾರಂಜಿಕೆರೆಗೆ ಪ್ರವಾಸಿಗರು ಭೇಟಿ ನೀಡಬಹುದು.

ಮೇಲುಕೋಟೆಯಲ್ಲಿ ಸಂಭ್ರಮದ ತೆಪ್ಪೋತ್ಸವ



ಶ್ರೀಚೆಲುವನಾರಾಯಣಸ್ವಾಮಿ ಉತ್ಸವಮೂರ್ತಿ ಚಿತ್ರ: ಸಂತಾನಂ

ಮೇಲುಕೋಟೆ: ಭವ್ಯವಾಗಿ ಅಲಂಕೃತವಾದ ತೆಪ್ಪೋತ್ಸವ ಮಂಟಪದಲ್ಲಿ ಶ್ರೀಚೆಲುವನಾರಾಯಣಸ್ವಾಮಿಗೆ ಪ್ರಥಮ ತೆಪ್ಪೋತ್ಸವ ಸೋಮವಾರ ರಾತ್ರಿ ಸಂಭ್ರಮದಿಂದ ನೆರವೇರಿತು ಶ್ರೀವಿಶ್ವವಸು ಸಂವತ್ಸರದ ವೈರಮುಡಿ ಬ್ರಹ್ಮೋತ್ಸವಕ್ಕೆ ಪೂರ್ವಭಾವಿಯಾಗಿ ಕಲ್ಯಾಣಿಯಲ್ಲಿ ನಡೆದ ಚೆಲುವನ ಜಲವಿಹಾರದ ವೈಭವವನ್ನು ನೂರಾರು ಭಕ್ತರು ಕಣ್ತುಂಬಿಕೊಂಡರು

ಪಾಂಡವಪುರ ಖಜಾನೆಯಿಂದ ತಂದ ಅಮೂಲ್ಯ ಮುತ್ತುಮುಡಿ ಮುತ್ತುಗಳ ಹಾರಗಳೊಂದಿಗೆ ಚೆಲುವನಾರಾಯಣ ಸ್ವಾಮಿಯನ್ನು ಅಲಂಕರಿಸಿ ಸಂಜೆ ವೈಭವದ ಉತ್ಸವ ನೆರವೇರಿಸಲಾಯಿತು. ಮುಹೂರ್ತ ಪಠಣದ ನಂತರ ತೆಪ್ಪಮಂಟಪದಲ್ಲಿ ಚೆಲುವನಾರಾಯಣ ಸ್ವಾಮಿ ಮತ್ತು ರಾಮಾನುಜಾಚಾರ್ಯರನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ಕಲ್ಯಾಣಿಯಲ್ಲಿ ಮೂರು ಪ್ರದಕ್ಷಿಣೆಯೊಂದಿಗೆ ಪ್ರಥಮ ತೆಪ್ಪೋತ್ಸವ ರಾತ್ರಿ 8ಗಂಟೆಗೆ ಮುಕ್ತಾಯವಾಯಿತು

ಚೆಲುವನಾರಾಯಣಸ್ವಾಮಿ ವೈರಮುಡಿ ಜಾತ್ರಾ ಮಹೋತ್ಸವದ ಎಲ್ಲಾ ಉತ್ಸವ ಮತ್ತು ವಾಹನೋತ್ಸವಗಳಿಗೆ ವಿಶೇಷ ವಾದ್ಯ ತಂಡಗಳ ನಿಯೋಜನೆ ಮಾಡುವ ಸೇವೆಯ ಸಂಬಂಧ ಕನ್ನಡ ಸಂಸ್ಕೃತಿ ಇಲಾಖೆ ಪ್ರಾಯೋಜನೆಯೊಂದಿಗೆ ದಶಕಗಳ ಹಿಂದೆ ಆರಂಭ ಗೊಂಡ ವಿಶೇಷ ಮಂಗಳವಾದ್ಯ ಕೈಂಕರ್ಯ "ನಾದೋ ಪಾಸನಸೇವೆ" 10ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದು, ತೆಪ್ಪೋತ್ಸವದಂದು ವಿದ್ವಾನ್ ಆನಂದ್ ತಂಡ ನಾದಸ್ವರ ನುಡಿಸಿ ಉತ್ಸವಕ್ಕೆ ಮೆರುಗು ನೀಡಿದರು. ಏಪ್ರಿಲ್ 2 ರಿಂದ ಏ.14 ರವರೆಗೆ 14 ದಿನಗಳಕಾಲ ನಡೆಯುವ ವೈರಮುಡಿ ಜಾತ್ರಾ ಮಹೋತ್ಸವದ ವೈವಿಧ್ಯಮಯ ವಿಶೇಷ ಉತ್ಸವಗಳಲ್ಲಿ ನುರಿತ ನಾದಸ್ವರ ಕಲಾವಿದರು ಮಂಗಳವಾದ್ಯ ಸೇವೆ ಮಾಡಲಿದ್ದಾರೆ

ವಾದ್ಯ ತಂಡಗಳನ್ನು ಪ್ರಾಯೋಜಿಸಲು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರಿಗೆ ಪತ್ರಬರೆದು ಸೂಚಿಸಿದ್ದಾರೆ. ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಅಪರ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ ಮಾರ್ಗದರ್ಶನ ಹಾಗೂ ಕನ್ನಡಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಸಹಕಾರದಲ್ಲಿ ಅನೂ ಚಾನವಾದ ಸಾಂಸ್ಕೃತಿಕ ಸಂಪ್ರದಾಯ ನಾದೋಪಾ ಸನ ಸೇವೆಯನ್ನು ಪ್ರತಿ ವರ್ಷದಂತೆ ಹಮ್ಮಿಕೊಂಡಿದ್ದು ಕನ್ನಡ ಸಂಸ್ಕೃತಿ ಇಲಾಖೆ ಪ್ರಾಯೋಜಕತ್ವ ಹಾಗೂ ಎಸ್‌ಎನ್‌ಐ ಸಾಂಸ್ಕೃತಿಕ ವೇದಿಕೆ ಸಹ ಯೋಗದಲ್ಲಿ 2025ರ ವೈರಮುಡಿ ಬ್ರಹ್ಮೋತ್ಸವ ವೇಳೆಯೂ ಮುಂದುವರೆಯ ಲಿದೆ. ತೆಪ್ಪೋತ್ಸವದ ಅಂಗವಾಗಿ ಕಲ್ಯಾಣಿಯಲ್ಲಿ ಅಚ್ಚುಕಟ್ಟಾಗಿ ಶುಚಿತ್ವ ಕಾಪಾಡುವ ಜೊತೆಗೆ ಸರಳ ದೀಪಾಲಂಕಾರ ಮಾಡಿದ್ದು ಭಕ್ತರಿಗೆ ಮುದನೀಡಿತ್ತು

ಇಂದಿನಿಂದ ಉಚಿತ ಬೇಸಿಗೆ ತರಬೇತಿ ಶಿಬಿರ

ಮಂಡ್ಯ, ಮಾ.31– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ವಿವಿಧ ತಾಲೂಕು ಕ್ರೀಡಾಂಗಣಗಳಲ್ಲಿ ಏ.1 ರಿಂದ 30 ರವರೆಗೆ ಉಚಿತ ಬೇಸಿಗೆ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಆಸಕ್ತರು ಸಂಬಂಧಪಟ್ಟ ತರಬೇತುದಾರರಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಬಾಸ್ಕೆಟ್‌ಬಾಲ್ ಕ್ರೀಡಾ ಶಿಬಿರವನ್ನು ಸರ್.ಎಂ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದು, ಆಸಕ್ತರು ತರಬೇತುದಾರ ಭರತ್‌ರಾಜ್ ಸಿ.ಬಿ ಮೊ.9916644007, ಫುಟ್ಬಾಲ್ ಕ್ರೀಡಾ ಶಿಬಿರ ಸರ್.ಎಂ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದು ಆಸಕ್ತರು ತರಬೇತುದಾರ ಸಂಜಯ್ ಕುಮಾರ್ ಮೊ.9739972472, ಕುಡ್ಡಿ ಶಿಬಿರವನ್ನು ಶ್ರೀರಂಗಪಟ್ಟಣ ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ್ದು ಆಸಕ್ತರು ತರಬೇತುದಾರರಾದ ರೂಪಶ್ರೀ ಕೆ.ಜಿ ಮೊ.7353097540, ವಾಲಿಬಾಲ್ ಕ್ರೀಡಾ ಶಿಬಿರ ಮದ್ದೂರು ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದು, ಆಸಕ್ತರು ತರಬೇತುದಾರ ಸೋಮಶೇಖರ್.ಬಿ ಮೊ.9740896699 ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಿಕ್ಕೇರಿಯಲ್ಲಿ ಸಂಭ್ರಮದ ರಂಜಾನ್ ಆಚರಣೆ



ಸೋಮವಾರ ನಡೆದ ರಂಜಾನ್ ಹಬ್ಬದಲ್ಲಿ ಮುಸ್ಲಿಮರು ಸಾಮೂಹಿಕ ಪ್ರಾರ್ಥನಾ ಮೆರವಣಿಗೆ ಮಾಡಿದರು.

ಕಿಕ್ಕೇರಿ, ಮಾ.31– ಕಿಕ್ಕೇರಿ ಹೋಬಳಿಯ ವಿವಿಧೆಡೆ ಮುಸ್ಲಿಮರು ರಂಜಾನ್ ಹಬ್ಬವನ್ನು ಸಂಭ್ರಮದಿಂದ ಸೋಮವಾರ ಆಚರಿಸಿದರು.

ತಿಂಗಳಿನಿಂದ ಕಟ್ಟುನಿಟ್ಟಿನ ಉಪವಾಸ ವಿದ್ದು ಹಬ್ಬದಂದು ಉಪವಾಸವನ್ನು ಅಂತ್ಯಗೊಳಿಸಿದರು. ಪಟ್ಟಣದೊಳಗಿರುವ ಜಾಮೀಯಾ ಮಸೀದಿಗೆ ಸಾಗಿ ಒಂದೆಡೆ ಸೇರಿ ಅಲ್ಲನಿಗೆ ಮೊದಲ ಪ್ರಾರ್ಥನೆ ಸಲ್ಲಿಸಿದರು. ಧರ್ಮಗುರು ಫಕ್ರಿಯಾ ಅಲಂ ಆಣತಿಯಂತೆ ಸಾಂಪ್ರದಾಯಿಕವಾಗಿ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಸಾಗಿದರು. ರಥಬೀದಿ, ಮಂದಗೆರೆ ರಸ್ತೆ ಮೂಲಕ ಮೆರವಣಿಗೆ ಈದ್ಗಾ ಮೈದಾನ ತಲುಪಿತು.

ಈದ್ಗಾ ಮೈದಾನದಲ್ಲಿ ಶಿಸ್ತುಬದ್ಧವಾಗಿ ಕುಳಿತು ಧರ್ಮಗುರು ಫಕ್ರಿಯಾ ಅಲಂ ಬೋಧಿಸಿದ ಕುರಾನ್ ಗ್ರಂಥದ ಧಾರ್ಮಿಕ ಪಠಣವನ್ನು ಆಲಿಸಿದರು. ಪ್ರವಾದಿ ಮಹಮದ್ ಪೈಗಂಬರ್ ಬೋಧಿಸಿರುವಂತೆ ಶಾಂತಿಯಿಂದ ಸಹಬಾಳ್ವೆ ಬದುಕು ಸಾಗಿಸಿ. ಕೈಲಾದಷ್ಟು ದಾನ, ಧರ್ಮ ಮಾಡಿ ಎಂದು ಧರ್ಮಗುರು ಹೇಳಿದರು.

ಮಕ್ಕಳು, ಮುಖಂಡರು ತಮ್ಮ ಬಂಧುಗಳೊಂದಿಗೆ ಆಲಿಂಗನ ಮಾಡಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಸಮೀಪದ ಆನೆಗೊಳ, ಮಂದಗೆರೆ ಗ್ರಾಮದಲ್ಲಿಯೂ ಹಬ್ಬದ ಸಂಭ್ರಮವನ್ನು ಮುಸ್ಲಿಮರು ಆಚರಿಸಿದರು. ಹೊಸ ಉಡುಗೆ ತೊಟ್ಟು, ಉಪವಾಸವ್ರತ ಅಂತ್ಯಗೊಳಿಸಿ ಹಬ್ಬದೂಟವನ್ನು ಸವಿದರು. ಕಿಕ್ಕೇರಿ ಇನ್‌ಸ್ಪೆಕ್ಟರ್ ರೇವತಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ಹುಲ್ಲು ಕತ್ತರಿಸುವ ಯಂತ್ರಕ್ಕೆ ಸಿಲುಕಿ ತುಂಡಾದ ಕೈಬೆರಳು

ಕಿಕ್ಕೇರಿ: ಹೋಬಳಿಯ ಬೋಳಮಾರನಹಳ್ಳಿ ಗ್ರಾಮದ ರೈತ ದೇವನಾಥ್(55) ಅವರ ಹುಲ್ಲು ಕತ್ತರಿಸುವ ಯಂತ್ರಕ್ಕೆ ಸಿಲುಕಿ ಕೈಬೆರಳು ತುಂಡಾದ ಪ್ರಕರಣ ಶನಿವಾರ ಜರುಗಿದೆ.

ಎಂದಿನಂತೆ ರೈತ ದೇವನಾಥ್ ಶನಿವಾರ ರಾತ್ರಿ ತಾವು ಸಾಕಿದ ಜಾನುವಾರುಗಳಿಗೆ ಮೇವು ಉಣಿಸಲು ಜೋಳದ ಕಡ್ಡಿಯನ್ನು ಜಮೀನಿನಿಂದ ತಂದಿದ್ದರು. ಜೋಳದ ಕಡ್ಡಿಯನ್ನು ಕತ್ತರಿಸಲು ಯಂತ್ರಕ್ಕೆ ಹಾಕುತ್ತಿದ್ದರು. ಜೋಳದ ಕಡ್ಡಿಯನ್ನು ಯಂತ್ರಕ್ಕೆ ನೀಡುವಾಗ ಆಕಸ್ಮಿಕವಾಗಿ ಕೈ ಯಂತ್ರಕ್ಕೆ ಸಿಲುಕಿದೆ. ಕೈ ಹೊರತೆಗೆಯಲಾಗದೆ ಕೂಗಿಕೊಂಡಿದ್ದಾರೆ.

ಕೂಗಾಟಕ್ಕೆ ಮನೆಯವರು, ಅಕ್ಕಪಕ್ಕದವರು ಸ್ಥಳಕ್ಕೆ ಆಗಮಿಸಿ ಯಂತ್ರವನ್ನು ನಿಲುಗಡೆ ಮಾಡಿದ್ದಾರೆ. ಚೀರಾಡುತ್ತಿದ್ದ ರೈತನ ಕೈಯನ್ನು ಯಂತ್ರದಿಂದ ಹೊರತೆಗೆಯಲು ಹರಸಾಹಸಪಟ್ಟಿದ್ದಾರೆ. ಬಲು ತ್ರಾಸಪಟ್ಟು ರಕ್ತಸಿಕ್ತವಾದ ಕೈಯನ್ನು ಹೊರಗಡೆ ತೆಗೆದಿದ್ದಾರೆ. ಯಂತ್ರಕ್ಕೆ ಕೈ ಸಿಲುಕಿದ ಪರಿಣಾಮ ಕೈ ಬೆರಳು ಹಾಗೂ ಹಸ್ತ ನಜ್ಜುಗುಜ್ಜಾಗಿದೆ. ಹೆಚ್ಚಿನ ಚಿಕಿತ್ಸೆಗೆ ಹಾಸನದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಂಡ್ಯದ ವಿವಿಧೆಡೆ ಅಕ್ರಮ ಜೂಜಾಟದಲ್ಲಿ ತೊಡಗಿದ್ದ ಹಲವು ಮಂದಿ ಬಂಧನ

ಮಂಡ್ಯ, ಮಾ.31– ಯುಗಾದಿ ಹಬ್ಬದ ಹಿನ್ನಲೆಯಲ್ಲಿ ಜೂಜಾಟವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಷೇಧಿಸಿದ್ದರೂ ಅಕ್ರಮವಾಗಿ ಆಟದಲ್ಲಿ ತೊಡಗಿದ್ದ ಹಲವು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಪೂರ್ವ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ಭಾನುವಾರ ಮಧ್ಯಾಹ್ನ ಸಾಹುಕಾರ್ ಚನ್ನಯ್ಯ ಬಡಾವಣೆ ಬಳಿ ಜೂಜಾಟದಲ್ಲಿ ತೊಡಗಿದ್ದ ಐವರನ್ನು ಪೂರ್ವ ಠಾಣೆಯ ಪಿಎಸ್‌ಐ ಶೇಷಾದ್ರಿ ಕುಮಾರ್ ನೇತೃತ್ವದಲ್ಲಿ ಬಂಧಿಸಲಾಗಿದೆ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಜೂಜಾಟ ದಲ್ಲಿ ಪಣಕ್ಕಿಟ್ಟಿದ್ದ 3500 ರೂ.ಗಳನ್ನು ವಶಪಡಿಸಿಕೊಂಡು ಆರೋಪಿಗಳಾದ ಮೋಹನ್, ಪ್ರಕಾಶ್, ಚಂದನ್, ಧನುಷ್, ಹರ್ಷವರ್ಧನ್‌ನನ್ನು ಬಂಧಿಸಿದ್ದಾರೆ.

ಮಂಡ್ಯ ಗ್ರಾಮಾಂತರ ಠಾಣಾ ವ್ಯಾಪ್ತಿಯ ಹನಿಯಂಬಾಡಿ ರಸ್ತೆಯ ಸದ್ವಿದ್ಯಾ ಶಾಲೆಯ ಬಳಿ ಭಾನುವಾರ ಬೆಳಗಿನ ಸಮಯದಲ್ಲಿ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಠಾಣೆಯ ಇನ್‌ಸ್ಪೆಕ್ಟರ್ ಶಿವಪ್ರಸಾದ್ ರಾವ್, ಜೂಜಾಟದಲ್ಲಿ ತೊಡಗಿದ್ದ ಐವರನ್ನು ವಶಕ್ಕೆ ಪಡೆದು ಬಂಧಿತರಿಂದ 6550 ರೂ. ವಶಪಡಿಸಿಕೊಂಡಿದ್ದಾರೆ. ಕಿರಣ್, ರಕ್ಷಿತ್‌ಕುಮಾರ್, ಮಣಿ, ನಾಗೇಶ್, ಆದರ್ಶ ಬಂಧಿತ ಆರೋಪಿಗಳಾಗಿದ್ದಾರೆ.

ಮಂಡ್ಯ ಗ್ರಾಮಾಂತರ ಠಾಣಾ ವ್ಯಾಪ್ತಿಯ ಪುರ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನದ ವೇಳೆಯಲ್ಲಿ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಠಾಣೆಯ ಇನ್‌ಸ್ಪೆಕ್ಟರ್ ಶಿವಪ್ರಸಾದ್‌ರಾವ್ ಅಕ್ರಮವಾಗಿ ಜೂಜಾಟದಲ್ಲಿ ತೊಡಗಿದ್ದ ಎಂಟು ಮಂದಿಯನ್ನು ಬಂಧಿಸಿ, ಬಂಧಿತರಿಂದ 11250 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತರನ್ನು ವೆಂಕಟೇಶ್, ರಘು, ಬಸವರಾಜು, ಉಮೇಶ್, ಸಿದ್ದರಾಜು, ಕೆ.ಜೆ.ರಘು, ಅಭಿಷೇಕ್, ದೇಸಿಲಿಂಗು ಎಂದು ಗುರುತಿಸಲಾಗಿದೆ.

ಮಂಡ್ಯ ನಗರದ ಸೆಂಟ್ರಲ್ ಪೊಲೀಸ್ ಠಾಣಾ ವ್ಯಾಪ್ತಿಯ ವಿವೇಕಾನಂದ ನಗರದ ಬಳಿ ಭಾನುವಾರ ಸಂಜೆ ಪಿಎಸ್‌ಐ ಬಿ.ಸಿ.ಸುನೀಲ್‌ಕುಮಾರ್ ನೇತೃತ್ವದಲ್ಲಿ ದಾಳಿ ನಡೆಸಿದಾಗ ಅಕ್ರಮವಾಗಿ ಜೂಜಾಟದಲ್ಲಿ ತೊಡಗಿದ್ದ 12 ಮಂದಿಯನ್ನು ಬಂಧಿಸಿ ಅವರಿಂದ 12500 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತರನ್ನು ಮಧು, ಕೀರ್ತಿ, ಸತೀಶ್, ಅರಕೇಶ್, ಪೃಥ್ವಿರಾಜ್, ಶಿವಕುಮಾರ್, ಶಶಿಕಾಂತ್, ಯೋಗೇಶ್, ಅನಿಲ್, ನಿಖಿಲ್, ಯಶವಂತ್, ಹರೀಶ್ ಎಂದು ಗುರುತಿಸಲಾಗಿದೆ.

ಅಗ್ರಹಾರಬಾಚಹಳ್ಳಿಯಲ್ಲಿ ಹೊನ್ನಾರು ಕಟ್ಟಿ ಯುಗಾದಿ ಆಚರಣೆ



ಹೊನ್ನಾರು ಕಟ್ಟಿ ಈ ವರ್ಷದ ಕೃಷಿ ಚಟುವಟಿಕೆಗೆ ಚಾಲನೆ ನೀಡಲಾಯಿತು.

ಕೆ.ಆರ್.ಪೇಟೆ, ಮಾ.31– ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ವಿಶ್ವಾವಸು ನಾಮ ಸಂವತ್ಸರದ ಯುಗಾದಿ ಹಬ್ಬದ ದಿನ ರೈತರು ಮುಂಗಾರಿನ ಮೊಟ್ಟ ಮೊದಲ ಉಳುಮೆ ಎಂದು ಕರೆಯಲಾಗುವ ಹೊನ್ನಾರು ಕಟ್ಟಿ ಈ ವರ್ಷದ ಕೃಷಿ ಚಟುವಟಿಕೆಗೆ ಚಾಲನೆ ನೀಡಲಾಯಿತು.

ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿಅಮ್ಮನವರ ದೇವಸ್ಥಾನದಿಂದ ಆರಂಭವಾದ ಹೊನ್ನಾರಿಗೆ ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್, ಗ್ರಾಮದ ಯಜಮಾನ್ ಸಂತೋಷ್, ಲಾಳಿ ಬೋರೇಗೌಡ ಅವರು ಜಾನುವಾರುಗಳಿಗೆ, ನೇಗಿಲು ಮತ್ತು ನೊಗಕ್ಕೆ ವಿಶೇಷ ಪೂಜೆ ಸಲ್ಲಿಸಿ ಹೊನ್ನಾರಿಗೆ ಚಾಲನೆ ನೀಡಿದರು.

ಜಾನುವಾರುಗಳಿಗೆ ನೇಗಿಲು ಕಟ್ಟಿ ಹೊರಟ ಹೊನ್ನಾರು ಶ್ರೀ ಚನ್ನಕೇಶವ ದೇವಾಲಯದ ಹಿಂಭಾಗದ ಬೀದಿಯಲ್ಲಿ ಸಾಗಿ, ಶ್ರೀ ಅಮೃತೇಶ್ವರ, ಶ್ರೀ ಬೋರೇದೇವರ ದೇವಾಲಯದ ರಸ್ತೆಯ ಸಾಗಿ, ಬ್ರಾಹ್ಮಣರ ಬೀದಿ, ಕೆರೆಬೀದಿ, ಸಿಂಗಮ್ಮನ ಗುಡಿ ಬೀದಿಗಳ ಮೂಲಕ ಮೆರವಣಿಗೆ ಹೊರಟ ಹೊನ್ನಾರು ಮತ್ತು ರೈತರು ಜಮೀನುಗಳಲ್ಲಿ ಉಳುಮೆ ಮಾಡಿ ನಂತರ ಪುನಃ ಶ್ರೀಲಕ್ಷ್ಮೀದೇವಿ ದೇವಸ್ಥಾನದ ಬಳಿ ಬಂದು ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ಅರ್ಚಕ ಎ.ಡಿ.ರವಿ, ಪುಟ್ಟಸ್ವಾಮಿ, ರಂಗನಾಯಕ, ಮಂಜೇಗೌಡ, ಶಿವಕುಮಾರ್ ಸೇರಿದಂತೆ ಹಲವು ಗ್ರಾಮಸ್ಥರು, ಮುಖಂಡರು ಉಪಸ್ಥಿತರಿದ್ದರು.

ಹೊನ್ನಾರಿಗೆ ಚಾಲನೆ ನೀಡಿ ಮಾತನಾಡಿದ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎ.ಬಿ. ಕುಮಾರ್, ಹೊನ್ನಾರು ಜನಪದ ಸಂಸ್ಕೃತಿಯ ಪ್ರತೀಕವಾಗಿದೆ. ನಮ್ಮ ರೈತರು ಹೊಸ ವರ್ಷ ಯುಗಾದಿಯಂದು ಗ್ರಾಮದ ಸುತ್ತ ತಮ್ಮ ಹೊಲಗಳಲ್ಲಿ ನೇಗಿಲನ್ನು ಭೂಮಿಗೆ ಹೂಡಿ ಪೂಜೆ ಪುನಸ್ಕಾರಗಳನ್ನು ಮಾಡುವ ಮುನ್ನ ದೇವಾಲಯದಲ್ಲಿ ಪೂಜೆ ನೆರವೇರಿಸಿ ಹೊನ್ನಾರು ಕಟ್ಟುವ ಸಂಪ್ರದಾಯ ಗ್ರಾಮೀಣ ಭಾಗದ ಆಚರಣೆಯಲ್ಲಿದೆ ಎಂದರು.

ಈ ಹಿಂದೆ ಯುಗಾದಿಗೆ ಮುಂಚೆ ಎಷ್ಟೇ ಮಳೆ ಬಿದ್ದರೂ ಸಹ ಹೊನ್ನಾರು ಕಟ್ಟುವ ತನಕ ಭೂಮಿಯನ್ನು ಉಳುವುದನ್ನು ನಿರ್ಬಂಧಿಸಲಾಗಿತ್ತು ಯಾಂತ್ರೀಕರಣ ಬಂದ ಮೇಲೆ ಈ ಸಂಪ್ರದಾಯ ಬದಲಾಗಿದೆ. ಆದರೂ ಯುಗಾದಿ ಹಬ್ಬದಂದು ರೈತನಿಗೆ ಶುಭದಿನ ಈ ಪವಿತ್ರ ದಿನದಂದು ಭೂಮಿಯನ್ನು ಉಳುಮೆ ಮಾಡುವ ಕಾರ್ಯಕ್ಕೆ ಹೊನ್ನಾರಿನ ಮೂಲಕ ಚಾಲನೆ ನೀಡಲಾಗುತ್ತದೆ ಎಂದು ಎ.ಬಿ.ಕುಮಾರ್ ತಿಳಿಸಿದರು.

ಸಿಗರೇಟ್ ಸೇದುತ್ತಾ ಬೈಕಿಗೆ ಪೆಟ್ರೋಲ್ ಹಾಕುವಾಗ ಅವಘಡ: ಯುವಕ ಸಾವು

ಕಿಕ್ಕೇರಿ: ಹೋಬಳಿಯ ಅಣೆಚಾಕನಹಳ್ಳಿ ಗ್ರಾಮದ ಯುವಕನೋರ್ವ ಬೈಕ್‌ಗೆ ಪೆಟ್ರೋಲ್ ಹಾಕುವಾಗ ಬೆಂಕಿ ತಗುಲಿ ಮೃತನಾದ ಘಟನೆ ಭಾನುವಾರ ಸಂಭವಿಸಿದೆ.

ಗ್ರಾಮದ ಪುಟ್ಟಸ್ವಾಮಿ ಪುತ್ರ ರಾಕೇಶ್ (25) ಮೃತ ಯುವಕ. ಈತ ಕಳೆದ ಬುಧವಾರ (26 ರಂದು) ಸಂಜೆ ತನ್ನ ಬೈಕ್‌ನಲ್ಲಿ ಪೆಟ್ರೋಲ್ ಇಂಧನ ಮುಗಿದಿರುವುದನ್ನು ಕಂಡು ಪ್ಲಾಸ್ಟಿಕ್ ಬಾಟಲ್‌ನಿಂದ ಹೊರಗಡೆಯಿಂದ ಪೆಟ್ರೋಲ್ ತಂದಿದ್ದಾನೆ. ಬೈಕ್‌ಗೆ ಪೆಟ್ರೋಲ್ ಹಾಕುವಾಗ ಸಿಗರೇಟು ಸೇದಲು ಬೆಂಕಿ ಹಚ್ಚಿಕೊಂಡಿದ್ದಾನೆ. ಸಿಗರೇಟು ಸೇದುತ್ತ ಪೆಟ್ರೋಲ್ ಹಾಕಲು ಮುಂದಾದಾಗ ಬೆಂಕಿ ಹೊತ್ತಿಕೊಂಡಿದೆ.

ಕ್ಷಣಮಾತ್ರದಲ್ಲಿ ಪೆಟ್ರೋಲ್‌ಗೆ ಬೆಂಕಿ ಹೊತ್ತಿಕೊಂಡು ವಾಹನ ಹಾಗೂ ಯುವಕನಿಗೆ ಬೆಂಕಿ ಆವರಿಸಿಕೊಂಡಿದೆ. ಬೆಂಕಿ ಸುಟ್ಟು ಗಂಭೀರ ಗಾಯಾಳುವಾಗಿದ್ದ ಯುವಕ ರಾಕೇಶ್‌ನನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತನಾಗಿದ್ದಾನೆ.

ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತದೇಹವನ್ನು ಪಂಚಾನಾಮೆ ನಡೆಸಿ ಮೃತರಿಗೆ ಹಸ್ತಾಂತರಿಸಲಾಯಿತು.

ಒಂದನೇ ಪುಟದಿಂದ

ಸಚಿವ ರಾಜಣ್ಣ 'ಮಂತ್ರಿಗಿರಿ'ಗೆ ಸಂಚಕಾರ

ವೇದಿಕೆಯಲ್ಲಿ, ಇಲ್ಲವೇ ಹೈಕಮಾಂಡ್ ಗಮನಕ್ಕೆ ತರಬೇಕಿತ್ತು. ಇದನ್ನು ಬಿಟ್ಟು ಏಕಾಏಕಿ ಸದನದಲ್ಲೇ ವಿಷಯ ಪ್ರಸ್ತಾಪಿಸಿ ಪಕ್ಷ ಮತ್ತು ಕಾಂಗ್ರೆಸ್ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಿದ್ದಾರೆ. ಸದನದಲ್ಲಿ ನೀಡಿದ ಹೇಳಿಕೆಯಂತೆ ಹನಿಟ್ರ್ಯಾಪ್ ಪ್ರಕರಣದ ದಾಖಲೆಗಳು ಮತ್ತು ಸಮರ್ಪಕ ದೂರನ್ನು ಇದುವರೆಗೂ ನೀಡಲು ಸಾಧ್ಯವಾಗಿಲ್ಲ. ಸೂಕ್ತ ದಾಖಲೆಗಳಿಲ್ಲದೆ, ವಿಷಯ ಪ್ರಸ್ತಾಪಿಸಿದ್ದಾದರೂ ಏತಕ್ಕೆ, ಇದರ ಹಿಂದಿನ ಉದ್ದೇಶವೇನು. ಸಚಿವರ ಇಂತಹ ಹೇಳಿಕೆ ಸಂಸತ್‌ನ ಉಭಯ ಸದನಗಳಲ್ಲೂ ಚರ್ಚೆಗೆ ಗ್ರಾಸ ಮಾಡಿ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಸಂಸತ್‌ನಲ್ಲಷ್ಟೇ ಅಲ್ಲದೆ, ವಿಷಯ ಸುಪ್ರೀಂ ಕೋರ್ಟ್ ಮೆಟ್ಟಿಲೂ ಹತ್ತುವಂತಾಯಿತು, ಇದಕ್ಕೆಲ್ಲಾ ರಾಜಣ್ಣ ಅವರ ಹಠಾತ್ ನಿರ್ಧಾರಗಳೇ ಕಾರಣ. ಈ ಹಿಂದೆಲ್ಲಾ, ಎರಡು–ಮೂರು ಬಾರಿ ರಾಜಣ್ಣ ಸೇರಿದಂತೆ ಕೆಲವು ಸಚಿವರಿಗೆ ಪಕ್ಷದ ವರಿಷ್ಠರು ಎಚ್ಚರಿಕೆ ನೀಡಿದ್ದರೂ, ಮುಜುಗರಕ್ಕೀಡಾಗುವಂತಹ ಹೇಳಿಕೆಗಳನ್ನು ನೀಡುತ್ತಲೇ ಇದ್ದರು. ಇದೇ ರೀತಿ ಮುಂದುವರೆದರೆ ಪಕ್ಷದಲ್ಲಿ ಶಿಸ್ತು ಎಂಬುದೇ ಇರುವುದಿಲ್ಲ, ಒಂದಿಬ್ಬರ ಮೇಲೆ ಕ್ರಮ ಜರುಗಿಸಿದರೆ, ಉಳಿದವರಿಗೆ ಎಚ್ಚರಿಕೆ ಗಂಟೆಯಾಗುತ್ತದೆ ಎಂದಿದ್ದಾರೆ.

ರಹಸ್ಯ ಭೇದಿಸಲು ಪೊಲೀಸರ ಸಿದ್ಧತೆ

ರಾಜಣ್ಣ ದೂರು ನೀಡಲು ತಮ್ಮದೇ ಆದ ಸಮಯ ತೆಗೆದುಕೊಂಡರು, ಮತ್ತು ಅಂತಿಮವಾಗಿ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರನ್ನು ಭೇಟಿಯಾಗಿ ರಾಜಣ್ಣ ಚರ್ಚಿಸಿದರು ನಂತರ ಸಿಐಡಿ ತನಿಖೆಗೆ ಪ್ರಕರಣವನ್ನು ವಹಿಸಲಾಗಿದೆ.

ಶುಕ್ರವಾರ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ನಲ್ಲಿ, ರಾಜೇಂದ್ರ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಆಪ್ತರಾಗಿರುವುದರಿಂದ ಪ್ರಭಾವಿ ರಾಜಕಾರಣಿಗಳು ತಮ್ಮ ತಂದೆ ರಾಜಣ್ಣ ಅವರನ್ನು ರಾಜಕೀಯವಾಗಿ ಮುಗಿಸಲು ಸಂಚು ರೂಪಿಸಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿರುವ "ಪ್ರಬಲ ವ್ಯಕ್ತಿಗಳು" ಅವರನ್ನು ಕೊಲ್ಲಲು ಸಂಚು ರೂಪಿಸಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಆದರೆ ಅವರು ನಾಯಕರ ಹೆಸರುಗಳನ್ನು ಉಲ್ಲೇಖಿಸಲಿಲ್ಲ, ಆದರೆ ಎಫ್‌ಐಆರ್ ದಾಖಲಾಗಿರುವ ಐದು ಆರೋಪಿಗಳನ್ನು ವಿಚಾರಣೆ ಮಾಡುವ ಮೂಲಕ ರಹಸ್ಯ ಬಯಲು ಮಾಡುವ ಜವಾಬ್ದಾರಿಯನ್ನು ಪೊಲೀಸರಿಗೆ ಬಿಟ್ಟಿದ್ದಾರೆ. ಲೋಕೋಪಯೋಗಿ ಸಚಿವ ಮತ್ತು ಮುಖ್ಯಮಂತ್ರಿಯವರ ಆಪ್ತ ಸಹಾಯಕ ಸತೀಶ್ ಜಾರಕಿಹೊಳಿ, ಶನಿವಾರ ಬೆಂಗಳೂರಿನಲ್ಲಿ ವರದಿಗಾರರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಯಾವ ಪ್ರಭಾವಿ ನಾಯಕ ಪಿತೂರಿ ನಡೆಸಿದ್ದಾರೆ ಎಂಬುದನ್ನು ಪೊಲೀಸರು ಕಂಡುಹಿಡಿಯಬೇಕು ಎಂದು ಒತ್ತಾಯಿಸಿದರು.

ನಾನು ತನಿಖಾ ಸಂಸ್ಥೆಯಲ್ಲ, ಆ ಪ್ರಭಾವಿ ನಾಯಕ ಯಾರು ಎಂದು ಪೊಲೀಸರು ಕಂಡುಹಿಡಿಯಲಿ, ದೇಶಾದ್ಯಂತ ರಾಜಕೀಯ ಪಿತೂರಿಗಳ ಅನೇಕ ನಿದರ್ಶನಗಳು ವರದಿಯಾಗಿವೆ' ಎಂದು ಅವರು ಹೇಳಿದರು. ತುಮಕೂರು ಎಸ್ಪಿ ಅಶೋಕ್ ಕೆವಿ ಅವರು ಮಧುಗಿರಿ ಡಿವೈಎಸ್ಪಿ ಮಂಜುನಾಥ್ ಜಿ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಿದ್ದಾರೆ, ಅವರು ಎರಡು ತಿಂಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸಲಿದ್ದಾರೆ. ನ್ಯಾಯಾಲಯದ ಮುಂದೆ ಆರೋಪಪಟ್ಟಿ ಸಲ್ಲಿಸಲು ಪೊಲೀಸರಿಗೆ 60 ದಿನಗಳ ಕಾಲಾವಕಾಶವಿರುವುದರಿಂದ ಪ್ರಕರಣವನ್ನು ಶೀಘ್ರದಲ್ಲೇ ಭೇದಿಸಬೇಕು.

ಸತ್ತವರ ಸಂಖ್ಯೆ 2074ಕ್ಕೆ ಏರಿಕೆ

ವಿರೋಧ ಪಕ್ಷಗಳು ಎರಡು ವಾರಗಳ ಕಾಲ ದಾಳಿಗಳನ್ನು ನಿಲ್ಲಿಸಿದವು. ಮ್ಯಾನ್ಮಾರ್‌ನ ರಾಷ್ಟ್ರೀಯ ಏಕತಾ ಸರ್ಕಾರ, ಇದು ಪ್ರಜಾಪ್ರಭುತ್ವ ಸರ್ಕಾರದ ನಾಯಕರಿಂದ ಕೂಡಿದೆ, 2021 ರಲ್ಲಿ ಅಧಿಕಾರದಿಂದ ತೆಗೆದು ಹಾಕಲ್ಪಟ್ಟಿತು. ತಮ್ಮ ನಿಯಂತ್ರಣದಲ್ಲಿರುವ ಸಶಸ್ತ್ರ ಮಿಲಿಟಿಯಾ ಎರಡು ವಾರಗಳವರೆಗೆ ಯಾವುದೇ ದಾಳಿಗಳನ್ನು ನಡೆಸುವುದಿಲ್ಲ ಎಂದು ಅವರು ಘೋಷಿಸಿದರು. ಆದರೆ, ಕ್ರೈಸಿಸ್ ಗ್ರೂಪ್ ಸಲಹೆಗಾರ ರಿಚರ್ಡ್ ಹಾರ್ಸಿ ಹೇಳುವಂತೆ, ಸರ್ಕಾರಿ ವಿರೋಧಿ ಪಡೆಗಳು ದಾಳಿಗಳನ್ನು ನಿಲ್ಲಿಸಿದ್ದರೂ, ಸೇನೆಯು ಇನ್ನೂ ವಾಯುದಾಳಿಗಳನ್ನು ಮುಂದುವರೆಸಿದೆ. ರಿಚರ್ಡ್ ಹಾರ್ಸಿ ಪ್ರಕಾರ, ಸ್ಥಳೀಯ ಅಗ್ನಿಶಾಮಕ ದಳ, ಆಂಬ್ಯುಲೆನ್ಸ್, ಮತ್ತು ಸಮುದಾಯ ಗುಂಪುಗಳು ಪರಿಹಾರ ಕಾರ್ಯಗಳಲ್ಲಿ ತೊಡಗಿವೆ. ಆದರೆ, ಮ್ಯಾನ್ಮಾರ್ ಸೇನೆ ಎಲ್ಲಿಯೂ ಕಾಣಿಸುತ್ತಿಲ್ಲ. ಸಾಮಾನ್ಯವಾಗಿ ಇಂತಹ ವಿಪತ್ತುಗಳ ಸಂದರ್ಭದಲ್ಲಿ ಸೇನೆಯು ಪರಿಹಾರ ಕಾರ್ಯಗಳಲ್ಲಿ ಸಹಾಯ ಮಾಡುತ್ತದೆ. ಆದರೆ ಈ ಬಾರಿ, ಸೇನೆ ದಾಳಿಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸಿದೆ. 2021 ರ ದಂಗೆಯ ನಂತರ ಮ್ಯಾನ್ಮಾರ್ ಈಗಾಗಲೇ ಅಂತರ್ಯುದ್ಧದ ಸ್ಥಿತಿಯಲ್ಲಿದೆ. ಈಗ ಈ ಭೂಕಂಪ ಮತ್ತು ಸೇನಾ ದಾಳಿಗಳು ಸಾಮಾನ್ಯ ಜನರ ಸಂಕಷ್ಟಗಳನ್ನು ಹಲವು ಪಟ್ಟು ಹೆಚ್ಚಿಸಿವೆ.

ಫಾಸ್ಪರಿಕ್ ಆಮ್ಲ

ನಿರ್ಣಯಿಸುವ ಪ್ರಯತ್ನಗಳ ಭಾಗವಾಗಿ, ಇಲಾಖೆಯು ಎರಡು ದಿನಗಳಲ್ಲಿ ತಪಾಸಣೆ ನಡೆಸಿತು. ಐಸ್ ಕ್ರೀಮ್‌ಗಳು ಮತ್ತು ತಂಪು ಪಾನೀಯಗಳನ್ನು ಉತ್ಪಾದಿಸುವಲ್ಲಿ ತೊಡಗಿರುವ ಎಲ್ಲಾ ಸ್ಥಳೀಯ ಉತ್ಪಾದನಾ ಘಟಕಗಳನ್ನು ಅಧಿಕಾರಿಗಳು ಪರಿಶೀಲಿಸಿದರು.

ತಪಾಸಣೆಯ ಸಮಯದಲ್ಲಿ, ಕೆಲವು ಸ್ಥಳಗಳಲ್ಲಿ ನೈರ್ಮಲ್ಯವಿಲ್ಲದ ಮತ್ತು ಕಳಪೆ ನಿರ್ವಹಣೆಯ ಶೇಖರಣೆ ಮಾಡಿರುವುದನ್ನು ಕಂಡು ಹಿಡಿದಿದ್ದಾರೆ. ಹಲವಾರು ಸಂದರ್ಭಗಳಲ್ಲಿ, ತಯಾರಕರು ವೆಚ್ಚವನ್ನು ಕಡಿಮೆ ಮಾಡಲು ಡಿಟರ್ಜೆಂಟ್, ಯೂರಿಯಾ ಅಥವಾ ಪಿಷ್ಟದಿಂದ ತಯಾರಿಸಿದ ಸಂಶ್ಲೇಷಿತ ಹಾಲನ್ನು ಬಳಸುತ್ತಿದ್ದರು. ನೈಸರ್ಗಿಕ ಸಕ್ಕರೆಯ ಬದಲಿಗೆ, ರುಚಿ ಮತ್ತು ಬಣ್ಣವನ್ನು ಹೆಚ್ಚಿಸಲು ಸ್ಯಾಕ್ರರಿನ್ ಮತ್ತು ಅನುಮತಿಸದ ಬಣ್ಣಗಳಂತಹ ಹಾನಿಕಾರಕ ವಸ್ತುಗಳನ್ನು ಸೇರಿಸುತ್ತಿದ್ದರು ಎಂದು ತಿಳಿದು ಬಂದಿದೆ.

ಐಸ್ ಕ್ಯಾಂಡಿಗಳು ಮತ್ತು ಕೂಲ್ ಡ್ರಿಂಕ್‌ಗಳಲ್ಲಿ ಕಲುಷಿತ ಅಥವಾ ಕುಡಿಯಲು ಯೋಗ್ಯವಲ್ಲದ ನೀರನ್ನು ಬಳಸುತ್ತಿವೆ ಅಥವಾ ಅನುಮತಿಸಲಾದ ಮಿತಿಗಳನ್ನು ಮೀರಿದ ಪ್ರಮಾಣದಲ್ಲಿ ಸುವಾಸನೆ ನೀಡುವ ವಸ್ತುಗಳನ್ನು ಸೇರಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಉತ್ಪನ್ನಗಳಲ್ಲಿ ಬಳಸಲಾಗುವ ಫ್ಲೇವರ್‌ಗಳು, ಎಸೆನ್ಸ್‌ಗಳು ಮತ್ತು ಬಣ್ಣಗಳನ್ನು ಹೆಚ್ಚಾಗಿ ಮಾನ್ಯತೆ ಪಡೆದ ಅಥವಾ ಅನುಮೋದಿತ ಪೂರೈಕೆದಾರರಿಂದ ಪಡೆಯಲಾಗುವುದಿಲ್ಲ ಎಂದು ಇಲಾಖೆಯ ಅಧಿಕಾರಿಗಳು ವಿವರಿಸಿದ್ದಾರೆ.

ರೆಸ್ಟೋರೆಂಟ್‌ಗಳು, ಮೆಸ್‌ಗಳು ಮತ್ತು ಹೋಟೆಲ್‌ಗಳು ಸೇರಿದಂತೆ 590 ಘಟಕಗಳಲ್ಲಿ ತಪಾಸಣೆಯನ್ನು ಇಲಾಖೆ ಪೂರ್ಣಗೊಳಿಸಿದೆ. 214 ಹೋಟೆಲ್‌ಗಳು ಸರಿಯಾದ ಕೀಟ ನಿಯಂತ್ರಣ ಕ್ರಮಗಳನ್ನು ಹೊಂದಿಲ್ಲ ಎಂದು ಅಧಿಕಾರಿಗಳ ಗಮನಕ್ಕೆ ಬಂದ ಪರಿಣಾಮವಾಗಿ, 1,15,000 ರೂ. ದಂಡ ವಿಧಿಸಲಾಯಿತು.

ರಂಜಾನ್ ಆಚರಣೆ

ಸೇರಿದಂತೆ ಹಲವು ಸಾಮೂಹಿಕ ರಂಜಾನ್ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಈ ಬಾರೀ ಅತೀ ಹೆಚ್ಚು ಮಂದಿ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ಕಾರಣ ಹಳೇ ಈದ್ಗಾ ಮೈದಾನ ದಲ್ಲಿ ಭರ್ತಿಯಾಗಿ, ಸುತ್ತಮುತ್ತ ರಸ್ತೆಗಳಲ್ಲೂ ಮುಸ್ಲಿಂ ಬಾಂಧವರು ಜಮಾಯಿಸಿ ಪ್ರಾರ್ಥನೆ ಸಲ್ಲಿಸಿದರು. ಕಾನೂನು–ಸುವ್ಯವಸ್ಥೆ ಡಿಸಿಪಿ ಎಂ.ಮುತ್ತುರಾಜ್, ಎನ್.ಆರ್. ಉಪ ವಿಭಾಗದ ಎಸಿಪಿ ಅಶ್ವಥ್ ನಾರಾಯಣ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿ ಭಾರಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

2019ರಿಂದ ಲೋಕಸಭೆಯಲ್ಲಿ ಉಪಸಭಾಧ್ಯಕ್ಷರ ಹುದ್ದೆ ಖಾಲಿ

ಬೀದರ್: ಕೇಂದ್ರ ಸರ್ಕಾರವು ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ. 2019 ರಿಂದ ಲೋಕಸಭೆಯ ಉಪಸಭಾಧ್ಯಕ್ಷರ ಹುದ್ದೆ ತುಂಬಿಲ್ಲ. ಸಂವಿಧಾನದ 93ನೇ ವಿಧಿ ಉಲ್ಲಂಘಿಸಲಾಗಿದೆ ಎಂದು ಸಂಸದ ಸಾಗರ್ ಖಂಡ್ರೆ ಅವರು ಕೇಂದ್ರದ ವಿರುದ್ಧ ಹರಿಹಾಯ್ದಿದ್ದಾರೆ.

ಸಂಸತ್ತಿನ ಕೆಳಮನೆ ಸಾಂವಿಧಾನಿಕವಾಗಿ, ಪ್ರಜಾಪ್ರಭುತ್ವದ ತತ್ವದಲ್ಲಿ ನಡೆಯಬೇಕು. ಆದರೆ, ಕೇಂದ್ರ ಸರ್ಕಾರ ಸರ್ವಾಧಿಕಾರಿ ಧೋರಣೆ ತಾಳಿದೆ. ಸಂಸತ್ತು ಪ್ರಜಾಸತ್ತಾತ್ಮಕವಾಗಿ ನಡೆಯಬೇಕಾದರೆ, ಎಲ್ಲ ಜನಪ್ರತಿನಿಧಿಗಳಿಗೂ ಪಕ್ಷಭೇದವಿಲ್ಲದೆ ಸಮಾನ ಅವಕಾಶ ದೊರಕಬೇಕು. ಸದಸ್ಯರು ಸಾಂವಿಧಾನಿಕ ಕರ್ತವ್ಯ ನಿಭಾಯಿಸುವಂತಹ ವಾತಾವರಣ ಇರಬೇಕು. ಆದರೆ, ಇತ್ತೀಚಿನ ಕೆಲವು ಪ್ರವೃತ್ತಿಗಳು ಈ ವ್ಯವಸ್ಥೆಯ ಪಾವಿತ್ರ್ಯತೆಗೆ ಧಕ್ಕೆ ತಂದಿವೆ. ಪ್ರಜಾಪ್ರಭುತ್ವದ ಮೂಲ ತತ್ವಗಳನ್ನೇ ಅಪಹಾಸ್ಯ ಮಾಡುತ್ತಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸದನದಲ್ಲಿ ಪ್ರತಿಪಕ್ಷದ ಸದಸ್ಯರಿಗೆ ಮಾತನಾಡಲು ಸೂಕ್ತ ಅವಕಾಶ ಕಲ್ಪಿಸದೆ, ಅವರ ಹಕ್ಕನ್ನೇ ಮೊಟಕುಗೊಳಿಸಲಾಗುತ್ತಿದೆ. ಇದು ಸಂಸದೀಯ ಕಲಾಪದ ಚರ್ಚೆಯ ಸ್ವರೂಪವನ್ನು ದುರ್ಬಲಗೊಳಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರತಿಪಕ್ಷಗಳ ಸಂಸದರು ಪ್ರಮುಖ ವಿಚಾರಗಳನ್ನು ಪ್ರಸ್ತಾಪಿಸಿದಾಗ, ಅವರ ಮಾತುಗಳು ಕೇಳದ ರೀತಿಯಲ್ಲಿ ಮೈಕ್ರೊಫೋನ್ ಆಫ್ ಮಾಡಲಾಗುತ್ತಿದೆ. ಪ್ರತಿಪಕ್ಷ ಸದಸ್ಯರ ಧ್ವನಿಯನ್ನೇ ದಮನ ಮಾಡುವ ಅಪಾಯಕಾರಿ ಪ್ರವೃತ್ತಿ ಬೆಳೆಯುತ್ತಿದೆ. ಆದರೆ, ಆಡಳಿತ ಪಕ್ಷದ ಸದಸ್ಯರಿಗೆ ಮುಕ್ತ ಅವಕಾಶ ನೀಡಲಾಗುತ್ತಿದೆ. ಈ ತಾರತಮ್ಯ ಪ್ರವೃತ್ತಿ ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ತಿಳಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಕೆಲವು ಪ್ರಮುಖ ಸಚಿವಾಲಯಗಳನ್ನು ಹೊರಗಿಡಲಾಗುತ್ತಿದೆ. ಇದರಿಂದ ಹಣಕಾಸು ಮೇಲ್ವಿಚಾರಣೆ ಮತ್ತು ಪಾರದರ್ಶಕತೆ ತೀವ್ರವಾಗಿ ಕುಗ್ಗುತ್ತಿದೆ. ತುರ್ತು ಮತ್ತು ಜನರಿಗೆ ಉಪಯುಕ್ತವಾದ ವಿಷಯಗಳ ಬಗ್ಗೆ ಚರ್ಚಿಸಲು ಇರುವ ನಿಯಮ 193ನ್ನು ಸಮರ್ಪಕವಾಗಿ ಬಳಸಲು ಅವಕಾಶ ನೀಡುತ್ತಿಲ್ಲ. ಸರ್ಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ. ಸಂಸದೀಯ ಸ್ಥಾಯಿ ಸಮಿತಿಗಳ ಸ್ವಾಯತ್ತತೆಯನ್ನು ಸಹ ಕಸಿದುಕೊಳ್ಳಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಸ್ಪೀಕರ್ ಕಚೇರಿಯಿಂದಲೇ ವರದಿಗಳ ತಿದ್ದುಪಡಿಯ ಸೂಚನೆ ನೀಡಲಾಗುತ್ತಿದೆ. ಶೂನ್ಯ ವೇಳೆಯಲ್ಲಿ ತುರ್ತು ವಿಷಯಗಳನ್ನು ಪ್ರಸ್ತಾಪಿಸಲು ಸಂಸದರಿಗೆ ನೀಡಲಾಗುತ್ತಿದ್ದ ಅವಕಾಶವನ್ನು ನಿರ್ಬಂಧಿಸಲಾಗುತ್ತಿದೆ. ಇದು ಸರ್ಕಾರದ ದಮನಕಾರಿ ಪ್ರವೃತ್ತಿ ಎಂದು ಸಾಗರ್ ಖಂಡ್ರೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಖಾಸಗಿ ಸದಸ್ಯರ ಮಸೂದೆಗಳು ಮತ್ತು ನಿರ್ಣಯಗಳಿಗೆ ಗಣನೀಯ ಹಿನ್ನಡೆಯಾಗುತ್ತಿದೆ. ಚರ್ಚೆಗೆ ಬೇಕಾದಷ್ಟು ಸಮಯ ಲಭಿಸುತ್ತಿಲ್ಲ. ಸಂಸತ್ ಟಿವಿಯಲ್ಲಿ ಪ್ರತಿಪಕ್ಷ ನಾಯಕರು ಮತ್ತು ಸದಸ್ಯರು ಮಾತನಾಡುವಾಗ ಅವರತ್ತ ಕ್ಯಾಮೆರಾ ಇರುತ್ತಿಲ್ಲ. ಸಭಾಧ್ಯಕ್ಷರು ಮತ್ತು ಸದನದ ಇತರ ದೃಶ್ಯಗಳನ್ನು ತೋರಿಸಲಾಗುತ್ತದೆ. ಇದು ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ ಎಂದು ಹೇಳಿದ್ದಾರೆ.

ಎಲ್ಲದರ ಬೆಲೆ ಏರಿಕೆ

ವಿರೋಧ. 4% ಮೀಸಲಾತಿ ಕಾನೂನು, ಸಂವಿಧಾನ ವಿರೋಧಿ. ಮುಸ್ಲಿಂ ಹೆಣ್ಣು ಮಕ್ಕಳಿಗೆ ಧನ ಸಹಾಯ ಮಾಡುತ್ತಿದ್ದಾರೆ. ಮುಸ್ಲಿಂ ಹೆಣ್ಣುಮಕ್ಕಳಿಗೆ ಆತ್ಮ ರಕ್ಷಣೆಗೆ ಹಣ ಖರ್ಚು ಮಾಡುತ್ತಿದ್ದಾರೆ. ಇಮಾಮ್‌ಗಳಿಗೆ ಸಂಬಳ ಜಾಸ್ತಿ ಮಾಡಿದ್ದಾರೆ. ಬಿಜೆಪಿ ಮುಸ್ಲಿಂಮರ ವಿರೋಧಿಗಳಲ್ಲ. ಯಾಕೆ ಬರೀ ಮುಸ್ಲಿಂಮರಿಗೆ ಅನುಕೂಲ ಮಾಡಿ ಕೊಡುತ್ತಿದ್ದೀರಾ. ಪ್ರಧಾನಿ ಮೋದಿ ಅವರು ಎಲ್ಲಾ ಜಾತಿ–ಧರ್ಮಗಳಿಗೆ ಯೋಜನೆಗಳನ್ನು ಕೊಟ್ಟಿದ್ದಾರೆ. ಯಡಿಯೂರಪ್ಪ ಅವರು ಭಾಗ್ಯಲಕ್ಷ್ಮಿ ಯೋಜನೆ ಎಲ್ಲಾ ಜಾತಿ–ಧರ್ಮಗಳಿಗೆ ಕೊಟ್ಟಿದ್ದಾರೆ. ಮುಸ್ಲಿಂಮರಿಗೆ ಪ್ರತ್ಯೇಕ ಬಜೆಟ್ ಮಂಡನೆ ಮಾಡಿಲ್ಲ ಅನ್ನೋದು ಬಿಟ್ಟರೆ ಇನ್ನೆಲ್ಲ ಮಾಡಿದೆ. ಹಿಂದೂಗಳಿಗೆ ಮಾಡಿರೋ ಅಪಮಾನ ಬಿಜೆಪಿ ಖಂಡಿಸುತ್ತದೆ ಎಂದು ಹರಿಹಾಯ್ದರು.

ಹಾಲುಮತ ಸಮುದಾಯ, ನೇಕಾರ, ಕುಂಬಾರ, ಸವಿತಾ ಸಮಾಜ, ಈಡಿಗರು, ಗಾಣಿಗರು, ಎಲ್ಲಾ ಸಮುದಾಯಗಳನ್ನ ನಿರ್ಲಕ್ಷ್ಯ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ಕಾಯಕ ಸಮುದಾಯಗಳನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಅಹಿಂದ ಹೆಸರು ಹೇಳಿ ಅಧಿಕಾರಕ್ಕೆ ಬಂದು ಹಿಂದುಳಿದ ಸಮುದಾಯ ಮರೆತಿದ್ದಾರೆ. ಅಲ್ಪಸಂಖ್ಯಾತ ಹಿಂದೆ ಸಿಎಂ ಹೊರಟಿದ್ದಾರೆ. ಇದನ್ನು ಬಿಜೆಪಿ ವಿರೋಧಿಸುತ್ತದೆ. ಎಸ್‌ಸಿ ಎಸ್‌ಪಿ –ಟಿಎಸ್‌ಪಿ ಹಣ ವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಗ್ಯಾರಂಟಿಗೆ ಎಸ್‌ಸಿ ಎಸ್‌ಪಿ–ಟಿಎಸ್‌ಪಿ ಹಣ ಬಳಕೆ ಮಾಡಿ ಕೊಳ್ಳುತ್ತಿದ್ದಾರೆ. ಎಸ್‌ಸಿ–ಎಸ್ಟಿ ಜನರಿಗೆ ಮೀಸಲು ಇಟ್ಟ ಸುಮಾರು 38 ಸಾವಿರ ಕೋಟಿ ಹಣವನ್ನ ಬೇರೆ ಕಡೆ ವರ್ಗಾವಣೆ ಮಾಡಿಕೊಂಡಿದ್ದಾರೆ. ದುರುಪಯೋಗ ಮಾಡಿದ್ದಾರೆ. ಅಂಬೇಡ್ಕರ್ ಹೆಸರನ್ನ ಪದೇ ಪದೇ ಉಲ್ಲೇಖ ಮಾಡು ತ್ತಾರೆ, ದುರುಪಯೋಗ ಮಾಡಿಕೊಳ್ಳುತ್ತಾರೆ. ಕಾಂಗ್ರೆಸ್ ಅವರು ಎಸ್‌ಸಿ–ಎಸ್ಟಿ ಜನರನ್ನ ವೋಟ್ ಬ್ಯಾಂಕ್ ಮಾಡಿಕೊಂಡು ಅನ್ಯಾಯ ಮಾಡುತ್ತಿದ್ದಾರೆ. ಇದರ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ವಿಕ್ಟೋರಿಯಾದಲ್ಲಿ ಶೀಘ್ರ 'ಅಂಗಾಂಗ ಮರು ಪಡೆಯುವ ಕೇಂದ್ರ'

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಕ್ಷಿಣ ಭಾರತದ ಅತಿ ದೊಡ್ಡ 'ಅಂಗಾಂಗ ಮರು ಪಡೆಯುವ ಕೇಂದ್ರ' ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.


ನಾಲ್ಕರಿಂದ ಆರು ತಿಂಗಳಲ್ಲಿ ಈ ಕೇಂದ್ರ ಕಾರ್ಯಾರಂಭ ಮಾಡಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ತಿಳಿಸಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯು ವಿಕ್ಟೋರಿಯಾದಲ್ಲಿ ಈ ಕೇಂದ್ರ ಸ್ಥಾಪಿಸಲು ಮತ್ತು ಅಸ್ತಿತ್ವದಲ್ಲಿರುವ ಸೌಲಭ್ಯಗಳನ್ನು ನವೀಕರಿಸಲು 1 ಕೋಟಿ ಅನುದಾನ ಮಂಜೂರು ಮಾಡಿದೆ. ವಿಕ್ಟೋರಿಯಾ ಆಸ್ಪತ್ರೆಯು 125ನೇ ವರ್ಷಾಚರಣೆ ಸಂದರ್ಭದಲ್ಲಿ ಈ ಮಹತ್ವದ ಕೇಂದ್ರ ಆರಂಭವಾಗಲಿದೆ.

ಕಸಿಗೆ ಅಂಗಾಂಗಗಳ ಖರೀದಿಯನ್ನು ಸುಗಮಗೊಳಿಸುವ ಮೂಲಕ ಅಂಗಾಂಗ ಮರು ಪಡೆಯುವಿಕೆ ಕೇಂದ್ರ ಆಸ್ಪತ್ರೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಇಲ್ಲಿ ತೀವ್ರ ನಿಗಾ ಘಟಕ, ಶಸ್ತ್ರಚಿಕಿತ್ಸಾ ಕೊಠಡಿ, ಪ್ರಯೋಗಾಲಯ ಸೌಲಭ್ಯಗಳು ಮತ್ತು ವಿವಿಧ ಹಂತದ ತನಿಖಾ ಸಾಮರ್ಥ್ಯಗಳನ್ನು ಹೊಂದಿರುವ ಸಮಗ್ರ ಸೇವೆ ಲಭ್ಯವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಸಂಭಾವ್ಯ ದಾನಿಗಳ ಗುರುತಿಸುವಿಕೆ ಮತ್ತು ಸುರಕ್ಷಿತ ಅಂಗಾಂಗ ದಾನ ಪ್ರಕ್ರಿಯೆಗೆ ಕುಟುಂಬ ಸಮಾಲೋಚನೆ, ಉನ್ನತ ಮಟ್ಟದ ಐಸಿಯು ಆರೈಕೆ ಮತ್ತು ಕಾನೂನು ಕ್ರಮಗಳು ಅಗತ್ಯವಿದೆ. ಈ ನಿಟ್ಟಿನಲ್ಲಿ ಸಮಗ್ರ ಅಭಿವೃದ್ಧಿಗೆ ಅನುದಾನ ಒದಗಿಸಲಾಗಿದೆ. ಅಂಗಾಂಗ ಸಾಗಣೆಗೆ ಅನುಕೂಲ ಆಗಲೆಂದು ಆಸ್ಪತ್ರೆಯಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಕೂಡಾ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯಿಂದ ಬಡ ರೋಗಿಗಳಿಗೆ ಅನುಕೂಲ ಆಗಲಿದೆ ಎಂದಿದ್ದಾರೆ.

ಸಮಗ್ರ ಅಂಗಾಂಗ ಮರು ಪಡೆಯುವಿಕೆ ಕೇಂದ್ರ ಆರಂಭಿಸುವುದರಿಂದ ಅಂಗಾಂಗ ದಾನ ಕಾರ್ಯಕ್ರಮವನ್ನು ಹೆಚ್ಚಿಸಲು ನಮಗೆ ಅವಕಾಶ ಸಿಗಲಿದೆ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ದೀಪಕ್ ಹೇಳಿದ್ದಾರೆ.

ನಾಳೆ ದೇವರ ದಾಸಿಮಯ್ಯ ಜಯಂತಿ



ಮೈಸೂರು,ಮಾ.31(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಏ.2ರಂದು ಬೆಳಗ್ಗೆ 10.30ಕ್ಕೆ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಗೌರವಾಧ್ಯಕ್ಷ ಆರ್.ಮೂರ್ತಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಅಂಗವಾಗಿ ಏ.2ರಂದು ಬೆಳಗ್ಗೆ 9.30ಕ್ಕೆ ಅರಮನೆ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ವಿವಿಧ ಕಲಾತಂಡಗಳೊಂದಿಗೆ ದೇವರ ದಾಸಿಮಯ್ಯ ಅವರ ಭಾವಚಿತ್ರದ ಮೆರವಣಿಗೆ ಏರ್ಪಡಿಸಲಾಗಿದೆ. ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರದ ಆವರಣ ತಲುಪಲಿದೆ. ಈ ಮೆರವಣಿಗೆಯಲ್ಲಿ ಮೈಸೂರು ಜಿಲ್ಲೆಯ ವಿವಿಧೆಡೆಯಿಂದ ನೇಕಾರ ಸಮುದಾಯ ಜನ ಹಾಗೂ ದೇವರ ದಾಸಿಮಯ್ಯ ಅವರ ಆದರ್ಶ ಅಳವಡಿಸಿಕೊಂಡಿರುವ ಜನ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಅಂದು ಬೆಳಗ್ಗೆ 10ಗಂಟೆಗೆ ಕಲಾಮಂದಿರದಲ್ಲಿ ಶಾಂತಲ ಲಕ್ಷ್ಮಿ ಶ್ರೀ ಶಂಕರಿ ಸುಗಮ ಸಂಗೀತ ತಂಡದಿಂದ ಗೀತ ಗಾಯನ ಕಾರ್ಯಕ್ರಮ ಜರುಗಲಿದೆ. ಬಳಿಕ ಬೆಳಗ್ಗೆ 11.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ರಾಮಕೃಷ್ಣ ಆಶ್ರಮದ ಸ್ವಾಮಿ ಅಘಹರನಂದಾಜೀ ಮಹಾರಾಜ್ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಅನಿಲ್ ಚಿಕ್ಕಮಾದು, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಉಪಸ್ಥಿತರಿರಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಜಿಲ್ಲೆಯ ವಿವಿಧ ಶಾಸಕರು, ವಿಧಾನಪರಿಷತ್ ಸದಸ್ಯರ ಭಾಗವಹಿಸಲಿದ್ದಾರೆ. ಪ್ರಾಧ್ಯಾಪಕ ಡಾ.ಕೆ.ಎಸ್.ಲಕ್ಷ್ಮಿನಾರಾಯಣ ದೇವರ ದಾಸಿಮಯ್ಯ ಅವರ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಪದಾಧಿಕಾರಿಗಳಾದ ನಗರಪಾಲಿಕೆ ಮಾಜಿ ಸದಸ್ಯ ಸುನೀಲ್, ವೀರಭದ್ರ, ಹೇಮಣ್ಣ, ಹೆಚ್.ಮಂಜುನಾಥ್, ಸುಬ್ರಹ್ಮಣ್ಯ ಇದ್ದರು.

ಜಲ ಸಂರಕ್ಷಣೆ ಕುರಿತು ಕಾರ್ಯಾಗಾರ




ವಿಶ್ವ ಜಲ ದಿನ ಅಂಗವಾಗಿ ಮೈಸೂರಿನ ಮಹಾವೀರನಗರದ ಸ್ಥಾನಿಕವಾಸಿ ಜೈನ್ ಭವನದಲ್ಲಿ 'ಅಂಜುಲಿ' ಹೆಸರಿನಡಿ ಜಲ ಸಂರಕ್ಷಣೆ ಕಾರ್ಯಾಗಾರ ನಡೆಯಿತು.

ಮೈಸೂರು, ಮಾ. 31 – ಮೈಸೂರಿನ ಭಾರತೀಯ ಜೈನ್ ಸಂಘಟನಾ ಮಹಿಳಾ ಘಟಕ, ಮೈಸೂರು ಚಾಪ್ಟರ್ ಮತ್ತು ರಾಜುಲ್ ಬಾಹು ಮಂಡಲ್ ಸಂಯುಕ್ತ ಆಶ್ರಯದಲ್ಲಿ ವಿಶ್ವ ಜಲ ದಿನ ಅಂಗವಾಗಿ ಮಹಾವೀರನಗರದ ಸ್ಥಾನಿಕವಾಸಿ ಜೈನ್ ಭವನದಲ್ಲಿ 'ಅಂಜುಲಿ' ಹೆಸರಿನಡಿ ಜಲ ಸಂರಕ್ಷಣೆ ಕಾರ್ಯಾಗಾರ ಆಯೋಜಿಸಲಾಗಿತ್ತು. ಪರಿಸರವಾದಿ ಯು.ಎನ್.ರವಿಕುಮಾರ್, ರಾಜೇಶ್ ಸಂಚೇತಿ ಮತ್ತು ಶರ್ಮಿಲಾ ಧೋಕಾ ಅವರು ಮಳೆ ನೀರು ಸಂರಕ್ಷಣೆ ಕುರಿತು ಮಾಹಿತಿ ನೀಡಿದರು.

ಭಾರತೀಯ ಜೈನ್ ಸಂಘಟನೆ, ಮೈಸೂರು ಚಾಪ್ಟರ್ ಅಧ್ಯಕ್ಷ ರಾಜನ್ ಬಾಗ್‌ಮಾರ್ ಅಧ್ಯಕ್ಷತೆ ವಹಿಸಿದ್ದರು. ರಾಜುಲ್ ಬಾಹು ಮಂಡಲ್ ಅಧ್ಯಕ್ಷ ಮತ್ತು ಸದಸ್ಯರು ನವಕಾರ್ ಮಹಾಮಂತ್ರ ಪಠಿಸಿದರು. ಉಪಾಧ್ಯಕ್ಷ ನೇಮಿಚಂದ್ ಬಡೋಲಾ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಬಿ.ಕೆ.ದೀಪಕ್‌ಕುಮಾರ್ ಜೈನ್ ಅತಿಥಿಗಳನ್ನು ಪರಿಚಯಿಸಿದರು. ರಾಜುಲ್ ಬಾಹುಮಂಡಲ್ ಅಧ್ಯಕ್ಷೆ ಉಷಾ ಗಾಂಧಿ, ಕಾರ್ಯದರ್ಶಿ ಅನಿತಾಬಾಯಿ ಲುಂಕಾರ್ ವಂದಿಸಿದರು. ಐಪಿಪಿ ಪ್ರವೀಣ್ ಲುಂಕಾಡ್, ಬಿಜೆಎಸ್ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಗುಲೇಚಾ, ಪ್ರಾದೇಶಿಕ ಅಧ್ಯಕ್ಷ ಸುಖ್‌ರಾಜ್ ವಿನಾಯಕಿಯಾ, ಖಜಾಂಚಿ ಮನೋಹರ್ ಶಂಕ್ಲಾ, ಕಾರ್ಯದರ್ಶಿ ನವರತನ್ ಪಿಟಾಲಿಯಾ ಮತ್ತು ಸುನೀಲ್ ಪಟ್ವಾ, ಪ್ರಕಾಶ್ ಗಾಂಧಿ, ಚಂದನ್ ಮಹಿಳಾ ಮಂಡಲ್ ಅಧ್ಯಕ್ಷೆ ಪ್ರೇಮಾ ಬಾಯಿ ಮಕಾನಾ, ರಾಹುಲ್ ಬಾಹು ಮಂಡಲ್ ಉಪಾಧ್ಯಕ್ಷೆ ಕವಿತಾ ಡಿ.ಬೋಹ್ರಾ, ಖಜಾಂಚಿ ಕವಿತಾ ಬಾಯಿ ಲುನಾವತ್, ಜಂಟಿ ಕಾರ್ಯದರ್ಶಿ ಸುಮನ್ ಸಲೇಚಾ, ತೇರಾಪಂಥ್ ಮಹಿಳಾ ಮಂಡಲ್ ಅಧ್ಯಕ್ಷೆ ಲಕ್ಷ್ಮೀ ಭಟೇವಾರ, ಕಾರ್ಯದರ್ಶಿ ರೇಖಾ ಪಿಟಾಲಿಯಾ ಮತ್ತು ಸದಸ್ಯರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ರಂಜಾನ್ ಶುಭಾಶಯ



ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯುಬ್‌ಖಾನ್ ಅವರಿಗೆ ರಂಜಾನ್ ಶುಭಾಶಯ ಕೋರಲಾಯಿತು. ಈ ಸಂದರ್ಭದಲ್ಲಿ ಒಂಟಿಕೊಪ್ಪಲ್ ಗುರುರಾಜ್, ರಂಗಸ್ವಾಮಿ (ಪಾಪು), ರಘುರಾಜ್ ಅರಸ್, ಕಾಗಿನೆಲೆ ಮಹೇಂದ್ರ, ಜಯಲಕ್ಷ್ಮಿ ಮತ್ತು ಸ್ನೇಹಿತರು ಉಪಸ್ಥಿತರಿದ್ದರು.

ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ

ಮೈಸೂರು, ಮಾ.31–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏಪ್ರಿಲ್ 1ರಿಂದ ಬೆಳಗ್ಗೆ 9ರಿಂದ 4.30ರವರೆಗೆ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9844136277, 9886485005 ಸಂಪರ್ಕಿಸಬಹುದು.

ಮೈಸೂರಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದನೆ

ಶೀಘ್ರವೇ ತಲೆಎತ್ತಲಿದೆ 66 ಕೋಟಿ ವೆಚ್ಚದ ಆಧುನಿಕ ಬಯೋಗ್ಯಾಸ್ ಘಟಕ

ಸೀವೇಜ್ ಫಾರಂನ 10 ಎಕರೆ ಪ್ರದೇಶದಲ್ಲಿ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ವತಿಯಿಂದ ಘಟಕ ಸ್ಥಾಪನೆಗೆ ಸರ್ವ ಸಿದ್ಧತೆ; ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಕೆ

●ಎಸ್.ಟಿ.ರವಿಕುಮಾರ್

ಮೈಸೂರು, ಮಾ.31– ಮೈಸೂರಿನ ಸುಸ್ಥಿರ ಅಭಿವೃದ್ಧಿಯತ್ತ ದಾಪುಗಾಲಿಟ್ಟಿರುವ ಮೈಸೂರು ಮಹಾನಗರಪಾಲಿಕೆಯು ಕಸದಿಂದ ರಸ ತೆಗೆಯುವ ಯೋಜನೆಗೆ ಸಿದ್ಧತೆ ಮಾಡಿಕೊಂಡಿದೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸೀವೇಜ್ ಫಾರಂನ 10 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಬಯೋಗ್ಯಾಸ್ ಘಟಕ ನಿರ್ಮಿಸಲು ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. (ಬಿಪಿಸಿಎಲ್) ಆಸಕ್ತಿ ತೋರಿದ್ದು, ಅದಕ್ಕಾಗಿ 66 ಕೋಟಿ ರೂ.ಗಳನ್ನು ವೆಚ್ಚ ಮಾಡಲು ನಿರ್ಧರಿಸಿದೆ. ಮೈಸೂರು ನಗರದಲ್ಲಿ ಉತ್ಪತ್ತಿಯಾಗುವ ಹಸಿ ಕಸದಿಂದ ಬಯೋಗ್ಯಾಸ್ ಉತ್ಪತ್ತಿ ಮಾಡುವ ಮೂಲಕ ವಿದ್ಯಾರಣ್ಯಪುರಂನಲ್ಲಿರುವ ಸೀವೇಜ್ ಫಾರಂನಲ್ಲಿ ಬೆಟ್ಟದಂತೆ ಶೇಖರಣೆಯಾಗುವ ತ್ಯಾಜ್ಯಕ್ಕೆ ಮುಕ್ತಿ ಕಾಣಿಸಲು ಬಿಪಿಸಿಎಲ್ ಮುಂದಾಗಿದೆ.

ಮೈಸೂರಿನಲ್ಲಿ ಪ್ರತಿದಿನ ಉತ್ಪತ್ತಿಯಾಗುವ 200 ಟನ್ ಆರ್ಗಾನಿಕ್ ವೇಸ್ಟ್ (ಹಸಿ ಕಸ) ಅನ್ನು ಬಯೋಗ್ಯಾಸ್ ಆಗಿ ಪರಿವರ್ತಿಸಿ ವಿದ್ಯುತ್ ತಯಾರಿಸಲು ಸಿದ್ಧತೆ ನಡೆಸಿರುವ ಬಿಪಿಸಿಎಲ್ ಅಧಿಕಾರಿಗಳು ಈ ಯೋಜನೆಗಾಗಿ ಮೈಸೂರು ಮಹಾನಗರಪಾಲಿಕೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಅದನ್ನು ಪಾಲಿಕೆ ಆಡಳಿತಾಧಿಕಾರಿಗಳೂ ಆದ ಪ್ರಭಾರ ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್ ಸಮ್ಮತಿಸಿದ್ದಾರೆ. ಈಗ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ರವಾನಿಸಲಾಗಿದ್ದು, ಅನುಮೋದನೆಗಾಗಿ ನಿರೀಕ್ಷಿಸಲಾಗುತ್ತಿದೆ.

ವಿದ್ಯಾರಣ್ಯಪುರಂ ಸೀವೇಜ್ ಫಾರಂನ 10 ಎಕರೆ ಪ್ರದೇಶವನ್ನು ಬಯೋಗ್ಯಾಸ್ ಪ್ಲಾಂಟ್ ನಿರ್ಮಿಸಲು ಗುರುತಿಸಲಾಗಿದ್ದು, ಅಲ್ಲಿಗೆ ನಿತ್ಯ ಬರುವ ಹಸಿ ಕಸವನ್ನು ಅತ್ಯಾಧುನಿಕ ತಂತ್ರಜ್ಞಾನದಿಂದ ಬಯೋಗ್ಯಾಸ್ ಆಗಿ ಪರಿವರ್ತಿಸಿ ಮಾರಾಟ ಮಾಡಲು ಬಿಪಿಸಿಎಲ್ ಆಸಕ್ತಿ ತೋರಿದೆ.



ತ್ಯಾಜ್ಯದಿಂದ ನವೀಕರಿಸಬಹುದಾದ ಇಂಧನ

ಬಿಪಿಸಿಎಲ್‌ನ ಜೈವಿಕ ಅನಿಲ ಸೌಲಭ್ಯವು ಅತ್ಯಾಧುನಿಕ ಘಟಕವಾಗಿದ್ದು, ಸಾವಯವ ತ್ಯಾಜ್ಯವನ್ನು ವಿವಿಧ ಹಂತಗಳಲ್ಲಿ ಜೈವಿಕ ಅನಿಲವಾಗಿ ಪರಿವರ್ತಿಸಲಾಗುತ್ತದೆ.

- **ಪೂರ್ವ ಸಂಸ್ಕರಣೆ:** ಕೃಷಿ ಮತ್ತು ಉಳಿಕೆ ಆಹಾರದಂತಹ ಸಾವಯವ ತ್ಯಾಜ್ಯವನ್ನು ವಿಂಗಡಿಸಲಾಗುತ್ತದೆ ಮತ್ತು ಅನಿಲೇತರ ಅಥವಾ ಅನಿಲ ಕಲ್ಮಶಗಳಿಂದ ಸ್ವಚ್ಛಗೊಳಿಸಲಾಗುತ್ತದೆ.
- **ಆಮ್ಲಜನಕರಹಿತ ಜೀರ್ಣಕ್ರಿಯೆ:** ತ್ಯಾಜ್ಯವನ್ನು ಆಮ್ಲಜನಕ–ಮುಕ್ತ ಜೀರ್ಣಕಾರಿಗಳಾಗಿ ನೀಡಲಾಗುತ್ತದೆ. ಅಲ್ಲಿ ಸೂಕ್ಷ್ಮಜೀವಿಗಳು ವಾರಗಳವರೆಗೆ ಅದನ್ನು ಒಡೆದು, ಜೈವಿಕ ಅನಿಲವನ್ನು ಉತ್ಪಾದಿಸುತ್ತವೆ ಮತ್ತು ಜೀರ್ಣಿಸಿಕೊಳ್ಳುತ್ತವೆ.
- **ಜೈವಿಕ ಅನಿಲ ಶುದ್ಧೀಕರಣ:** ಕಾರ್ಬನ್ ಡೈ ಆಕ್ಸೈಡ್, ಹೈಡ್ರೋಜನ್ ಸಲ್ಫೈಡ್ ಮತ್ತು ತೇವಾಂಶದಂತಹ ಕಲ್ಮಶಗಳನ್ನು ತೆಗೆದು ಹಾಕಲು ಕಚ್ಚಾ ಜೈವಿಕ ಅನಿಲವು ಸ್ಕ್ರಬ್ಬಿಂಗ್, ಶೋಧನೆಗೊಳಗಾಗುತ್ತದೆ. ಇದು ಹೆಚ್ಚಿನ ಶುದ್ಧತೆಯ ಮೀಥೇನ್ ನೀಡುತ್ತದೆ.
- **ಸಂಗ್ರಹಣೆ:** ಶುದ್ಧೀಕರಿಸಿದ ಜೈವಿಕ ಅನಿಲವನ್ನು ಸಿಬಿಜಿಗೆ ಕಂಪ್ರೆಸ್‌ಗೊಳಿಸುವುದಲ್ಲದೆ, ವಿತರಣೆಗಾಗಿ ಹೆಚ್ಚಿನ ಒತ್ತಡದ ಸಿಲಿಂಡರ್‌ಗಳು ಅಥವಾ ಟ್ಯಾಂಕ್‌ಗಳಲ್ಲಿ ಸಂಗ್ರಹಿಸಲಾಗುತ್ತದೆ.
- **ವಿತರಣೆ ಮತ್ತು ಬಳಕೆ:** ಸಿಬಿಜಿಯನ್ನು ವಾಹನಗಳು, ಕೈಗಾರಿಕಾ ಪ್ರಕ್ರಿಯೆಗಳು ಮತ್ತು ವಿದ್ಯುತ್ ಉತ್ಪಾದನೆಗೆ ನವೀಕರಿಸಬಹುದಾದ ಇಂಧನವಾಗಿ ಬಳಸಬಹುದು.

"ಸರ್ಕಾರದಿಂದ ಅನುಮೋದನೆ ಸಿಕ್ಕಿದಲ್ಲಿ ವರ್ಷದೊಳಗಾಗಿ ಘಟಕ ಸ್ಥಾಪಿಸಿ, ಕಾರ್ಯಾಚರಣೆ ಆರಂಭಿಸಲಾಗುವುದು. ಸರ್ಕಾರದಿಂದ ಅನುಮೋದನೆ ದೊರೆತ ಕೂಡಲೇ ಪಾಲಿಕೆ ಮತ್ತು ಬಿಪಿಸಿಎಲ್ ನಡುವೆ ಒಪ್ಪಂದ ಮಾಡಿಕೊಂಡು ಕಾರ್ಯಾಚರಿಸಲು ಅನುಮತಿ ನೀಡಲಾಗುವುದು. ಇದರಿಂದಾಗಿ ಹಸಿ ತ್ಯಾಜ್ಯ ಶೇಖರಣೆಯಾಗಿ ಸುತ್ತಲಿನ ವಾತಾವರಣ ಹಾಳಾಗುವುದು ತಪ್ಪಲಿದೆ. ಕಸ ವಿಲೇವಾರಿಗೂ ಅನುಕೂಲವಾಗಲಿದೆ. ಇದರಿಂದ ಪಾಲಿಕೆಗೂ ನಿರ್ವಹಣೆ ವೆಚ್ಚ ಭಾರಿ ಪ್ರಮಾಣದಲ್ಲಿ ಕಡಿಮೆಯಾಗುವುದರಿಂದ ಆರ್ಥಿಕ ವಾಗಿಯೂ ಅನುಕೂಲಕಾರಿ.



–ಶೇಖ್ ತನ್ವೀರ್ ಆಸೀಫ್, ನಗರಪಾಲಿಕೆ ಆಯುಕ್ತರು

ಸರ್ಕಾರದ ಹಂತದಲ್ಲಿ ಸ್ವಚ್ಛ ಭಾರತ್ ಮಿಷನ್ (ನಗರ)ನ ಕರ್ನಾಟಕ ಮಿಷನ್ ಡೈರೆಕ್ಟರ್ ಡಾ.ಆರ್.ಸೆಲ್ವಮಣಿ ಸಹ ಬಯೋಗ್ಯಾಸ್ ಪ್ಲಾಂಟ್ ಯೋಜನೆಗೆ ಸಮ್ಮತಿ ನೀಡಿದ್ದು, ಅಲ್ಲಿಂದ ಹಣಕಾಸು ಅನುಮೋದನೆಗಾಗಿ ಸರ್ಕಾರದ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಲಾಭರಹಿತ ಯೋಜನೆ ಇದಾಗಿದ್ದು, ಇದರಿಂದ ಇಂಧನ ಉತ್ಪತ್ತಿ ಜೊತೆಗೆ ಮೈಸೂರಿನಲ್ಲಿ ಉತ್ಪತ್ತಿಯಾಗುವ ಕಸವನ್ನು ಪುನರ್ ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಯೋಜನೆ ಅನುಷ್ಠಾನಗೊಳಿಸಲು ಆಸಕ್ತಿ ತೋರಿದೆ. ಸೀವೇಜ್ ಫಾರಂನಲ್ಲಿ 10 ಎಕರೆ ಜಾಗ, ರಸ್ತೆ ಮತ್ತು ವಿದ್ಯುತ್, ನೀರು ಮುಂತಾದ ಮೂಲ ಸೌಲಭ್ಯಗಳನ್ನು ನೀಡುತ್ತಿರುವುದರಿಂದ ಅಲ್ಲಿ ಉತ್ಪತ್ತಿಯಾಗುವ ಬಯೋಗ್ಯಾಸ್ ಅನ್ನು ಮೈಸೂರು ಪಾಲಿಕೆ ಬಳಸಲು ಉದ್ದೇಶಿಸಿರುವ ಬಯೋಗ್ಯಾಸ್ ವಾಹನಗಳಿಗೆ ಉಚಿತವಾಗಿ ಇಂಧನ ಪೂರೈಸುವಂತೆ ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರು ಬಿಪಿಸಿಎಲ್ ಅಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ಮುಂದಿನ ದಿನಗಳಲ್ಲಿ ಮೈಸೂರು ಮಹಾನಗರಪಾಲಿಕೆಯು ನ್ಯಾಚುರಲ್ ಬಯೋಗ್ಯಾಸ್‌ನಿಂದ ಚಾಲನೆಯಾಗುವ ವಾಹನಗಳನ್ನು ಖರೀದಿಸುವ ಉದ್ದೇಶವಿರುವುದರಿಂದ ಒಂದು ವೇಳೆ ಈ ಯೋಜನೆ ಯಶಸ್ವಿಯಾದಲ್ಲಿ ಉಚಿತವಾಗಿ ತಮ್ಮ ವಾಹನಗಳಿಗೆ ಇಂಧನ ಪೂರೈಕೆಯಾಗಬಹುದೆಂದು ಅಂದಾಜಿಸಲಾಗಿದೆ. ಈಗಾಗಲೇ ಸೀವೇಜ್ ಫಾರಂನಲ್ಲಿ ಸಂಗ್ರಹವಾಗಿರುವ 7 ಲಕ್ಷ ಟನ್ ತ್ಯಾಜ್ಯದ ಪೈಕಿ ಶೇ.40ರಷ್ಟು ತ್ಯಾಜ್ಯವನ್ನು ವಿಲೇವಾರಿ ಮಾಡಲಾಗಿದೆ. ಇದೀಗ ಬಯೋಗ್ಯಾಸ್ ಪ್ಲಾಂಟ್ ನಿರ್ಮಾಣವಾಗುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಬೆಟ್ಟದಾಕಾರವಾಗಿ ಬೆಳೆಯುವ ತ್ಯಾಜ್ಯಕ್ಕೆ ಮುಕ್ತಿ ದೊರೆಯಲಿದೆ.

ರೈತರಿಗೆ ಸರ್ಕಾರದಿಂದ ಕೃಷಿ ಭಾಗ್ಯದ ಬಂಪರ್ ಸಬ್ಸಿಡಿ

ಕೃಷಿ ಹೊಂಡದ ಮೂಲಕ ಕೃಷಿಗೆ ಮೈಸೂರು ಭಾಗದ ರೈತರಲ್ಲಿ ನಿರಾಸಕ್ತಿ



ಮೈಸೂರು,ಮಾ.31(ಬಿಎಲ್‌ಯು) –ಮಳೆಯಾಶ್ರಿತ ಪ್ರದೇಶದಲ್ಲಿ ಕೃಷಿಗಾಗಿ ಸರ್ಕಾರ ಕೃಷಿ ಭಾಗ್ಯ ಯೋಜನೆ ಜಾರಿಗೊಳಿಸಿದ್ದು, ಪರಿಕರಗಳ ಖರೀದಿಗೆ ಸಬ್ಸಿಡಿ ಕೂಡ ನೀಡುತ್ತಿದೆ. ಆದರೆ ಮೈಸೂರು ಭಾಗದ ರೈತರು ಈ ಯೋಜನೆಗೆ ನಿರಾಸಕ್ತಿ ತೋರಿದ್ದಾರೆ.

ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿ ಆ ನೀರಿನಿಂದ ಹಣ್ಣು, ತರಕಾರಿ, ದ್ವಿದಳ ಧಾನ್ಯ ಸೇರಿದಂತೆ ಹಲವು ಬೆಳೆ ಬೆಳೆಯಬಹುದಾಗಿದೆ. ಕೃಷಿ ಹೊಂಡ ನಿರ್ಮಾಣಕ್ಕೆ ಪಾಲಿಥಿನ್ ಹೊದಿಕೆ, ಪಂಪ್‌ಸೆಟ್ ಸೇರಿದಂತೆ ಇತರೆ ವಸ್ತುಗಳ ಖರೀದಿಗೆ ಸರ್ಕಾರ ಶೇಕಡ 70 ರಿಂದ 90 ರಷ್ಟು ಸಬ್ಸಿಡಿ ನೀಡುತ್ತಿದೆ.

ಮಳೆಯಾಶ್ರಿತ ಪ್ರದೇಶದ ರೈತರು ಮಳೆಗಾಗಿ ಆಕಾಶ ನೋಡುವುದರ ಬದಲು ಸಬ್ಸಿಡಿಯಲ್ಲಿ ಪರಿಕರಗಳನ್ನು ಖರೀದಿ ಮಾಡಿ ಕೃಷಿ ಹೊಂಡ ನಿರ್ಮಾಣ ಮಾಡಬಹುದು. ಈ ಮೂಲಕ ಸಮೃದ್ಧ ಬೆಳೆ ಬೆಳೆದು ಸ್ವಾವಲಂಬಿಗಳಾಗಬಹುದು.

ಹೊಲದಲ್ಲಿ 12x12, 15x15, 18x18, 21x21 ಅಳತೆಯ ಕೃಷಿ ಹೊಂಡ ನಿರ್ಮಾಣಕ್ಕೆ ಸರ್ಕಾರದ ಸಬ್ಸಿಡಿ ಸೀಮಿತವಾಗಿದೆ. ಕೃಷಿ ಹೊಂಡದಲ್ಲಿ ಸಂಗ್ರಹವಾಗುವ ನೀರು ಇಂಗಿ ಹೋಗದಂತೆ ಪಾಲಿಥಿನ್ ಹೊದಿಕೆಗಾಗಿ ಶೇಕಡ 80ರಷ್ಟು ಸಬ್ಸಿಡಿ ನೀಡಿದರೆ, ಸಂಗ್ರಹಣೆಗೊಂಡ ನೀರು ಪೋಲಾಗದಂತೆ ಬದು ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತದೆ. ಕೃಷಿ ಹೊಂಡದ ಬಳಿ ಜನ, ಜಾನುವಾರು ಕಾಲು ಜಾರಿ ಬಿದ್ದು ಅನಾಹುತ ಆಗದಂತೆ ತಡೆಯಲು ಸುತ್ತ ತಂತಿ ಬೇಲಿ ನಿರ್ಮಾಣಕ್ಕೆ ಶೇಕಡ 40ರಷ್ಟು ಸಬ್ಸಿಡಿ ನೀಡಲಾಗುವುದು.

ಕೃಷಿ ಹೊಂಡದಿಂದ ನೀರನ್ನು ಮೇಲೆತ್ತಲು ಡೀಸೆಲ್ ಪಂಪ್‌ಸೆಟ್ ಖರೀದಿಗೆ ಶೇಕಡ 80ರಷ್ಟು ಸಬ್ಸಿಡಿ, ಕೃಷಿ ಹೊಂಡದಿಂದ ನೀರನ್ನು ಬೆಳೆಗಳಿಗೆ ಹಾಯಿಸಲು ಲಘು ನೀರಾವರಿ ಘಟಕ ಅಥವಾ ಸ್ಪ್ರಿಂಕ್ಲರ್ ಖರೀದಿಗೆ ಶೇಕಡ 90ರಷ್ಟು ಸಬ್ಸಿಡಿ ನೀಡಲಾಗುತ್ತದೆ.

ಬೋರ್‌ವೆಲ್ ನೀರು, ಮಳೆ ನೀರು ಹಾಗೂ ಕಾಲುವೆಯ ನೀರನ್ನು ಕೃಷಿ ಹೊಂಡಕ್ಕೆ ಹರಿಸಿ ಅಗತ್ಯ ಬಿದ್ದಾಗ ಅದನ್ನು ಬಳಸಿಕೊಳ್ಳಬಹುದು. ಕಳೆದ ವರ್ಷ ಕೆ.ಆರ್.ನಗರ ತಾಲೂಕಿನ ಹೆಚ್ಚಿನ ರೈತರು ಈ ಯೋಜನೆ ಸದುಪಯೋಗಪಡಿಸಿಕೊಂಡಿದ್ದರು.

ಈಗಲೂ ಕೃಷಿ ಭಾಗ್ಯ ಯೋಜನೆಯಲ್ಲಿ ಸರ್ಕಾರ ಸಬ್ಸಿಡಿ ನೀಡಲು ಮುಕ್ತವಾಗಿದೆ. ರೈತರು ಸೂಕ್ತ ದಾಖಲಾತಿ ನೀಡಿ ಯೋಜನೆ ಸದುಪಯೋಗಪಡಿಸಿಕೊಳ್ಳಬೇಕು.

ಆಧಾರ್ ಕಾರ್ಡ್ ಪ್ರತಿ, ಭಾವಚಿತ್ರ, ಪಹಣಿ ಅಥವಾ ಆರ್‌ಟಿಸಿ, ಬ್ಯಾಂಕ್ ಪಾಸ್ ಪುಸ್ತಕ, ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಕೃಷಿ ಇಲಾಖೆಗೆ ನೀಡಿದರೆ ಕೃಷಿ ಹೊಂಡ ನಿರ್ಮಾಣಕ್ಕೆ ಸಹಾಯಧನ ನೀಡುತ್ತಾರೆ. ಒಟ್ಟಾರೆ ಒಂದು ಕೃಷಿ ಹೊಂಡ ನಿರ್ಮಾಣಕ್ಕೆ ಎಲ್ಲಾ ಪರಿಕರಗಳ ಖರೀದಿಗೆ ಸರ್ಕಾರ ಒಂದೂವರೆ ಲಕ್ಷ ರೂಪಾಯಿ ತನಕ ಸಬ್ಸಿಡಿ ನೀಡುತ್ತದೆ.

ಕಚೇರಿಯಲ್ಲಿ ಕ್ಯಾಮರಾ ಇಟ್ಟು ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡುವ ತಂಡ ರಾಜ್ಯದಲ್ಲಿ ಆಕ್ಟಿವ್

ರಾಜ್ಯ ಅಹಿಂದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಆರೋಪ



ಕೆ.ಎಸ್.ಶಿವರಾಮ್

ಮೈಸೂರು, ಮಾ.31(ಜಿಎ)– ಸರ್ಕಾರಿ ಕಚೇರಿಯ ಅಧಿಕಾರಿಗಳ ಕೊಠಡಿಯಲ್ಲಿ ಕ್ಯಾಮರಾ ಅಳವಡಿಸಿ ಅಧಿಕಾರಿಗಳನ್ನು ಟ್ರ್ಯಾಪ್ ಮಾಡಿ ಬ್ಲಾಕ್‌ಮೇಲ್ ಮಾಡುತ್ತಿರುವ ತಂಡವೊಂದು ರಾಜ್ಯದಲ್ಲಿ ಆಕ್ಟಿವ್ ಆಗಿದೆ. ಈ ಬಗ್ಗೆ ಪೊಲೀಸ್ ಇಲಾಖೆ ಎಚ್ಚರಿಕೆ ವಹಿಸಬೇಕು ಎಂದು ಕರ್ನಾಟಕ ರಾಜ್ಯ ಅಹಿಂದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಸರ್ಕಾರಿ ಕಚೇರಿಗಳಲ್ಲಿರುವ ಅಧಿಕಾರಿಗಳ ಬಳಿ ವಿವಿಧ ಸಂಘಟನೆಗಳ ಹೆಸರು ಹೇಳಿಕೊಂಡು ಈ ರೀತಿ ಕ್ಯಾಮರಾ ಅಳವಡಿಸಿ ಬ್ಲಾಕ್‌ಮೇಲ್ ಮಾಡಲಾಗುತ್ತಿದೆ. ಅಧಿಕಾರಿಗಳು ಹೆದರಿಕೊಂಡು ಹೇಳಿಕೊಳ್ಳುತ್ತಿಲ್ಲ ಎಂದರು.

ಮೊದಲು ಅಧಿಕಾರಿ ಕೊಠಡಿಯಲ್ಲಿ ಇಲ್ಲದಿರುವುದನ್ನು ನೋಡಿಕೊಂಡು ಕೊಠಡಿಯಲ್ಲಿ ಗೌಪ್ಯವಾಗಿ ಕ್ಯಾಮರಾ ಅಳವಡಿಸಿ, ಅಧಿಕಾರಿಯ ಸಭೆ, ಖಾಸಗಿ ಮಾತುಕತೆ, ರಹಸ್ಯ ಮಾತುಕತೆ ಸೇರಿದಂತೆ ವಿವಿಧ ಚಲನವಲನಗಳನ್ನು ಎರಡು ಮೂರು ದಿನ ರೆಕಾರ್ಡ್ ಮಾಡಿಕೊಂಡು ನಂತರ ಅಧಿಕಾರಿಗಳನ್ನು ಬೆದರಿಸಿ ಲಕ್ಷಾಂತರ ರೂ. ಹಣ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಈ ಬಗ್ಗೆ ಸಮಗ್ರ ಮಾಹಿತಿಯನ್ನು ಕಲೆ ಹಾಕಿದ್ದು, ಪೊಲೀಸ್ ಆಯುಕ್ತರಿಗೆ ಈ ಕುರಿತು ಸೂಕ್ತ ದಾಖಲೆಗಳೊಂದಿಗೆ ದೂರು ಸಲ್ಲಿಸಲಾಗುತ್ತದೆ. ಅಧಿಕಾರಿಗಳು ಈ ರೀತಿಯಾದಾಗ ಹೆದರಿಕೊಳ್ಳಬಾರದು. ಅಧಿಕಾರಿಗಳ ಹಿತದೃಷ್ಟಿಯಿಂದ ಅವರ ಹೆಸರು ಇಲಾಖೆಯನ್ನು ಬಹಿರಂಗಪಡಿಸುತ್ತಿಲ್ಲ. ಪೊಲೀಸ್ ಆಯುಕ್ತರಿಗೆ ನೀಡುವ ದೂರಿನಲ್ಲಿ ಒದಗಿಸಲಾಗುತ್ತದೆ ಎಂದು ಕೆ.ಎಸ್. ಶಿವರಾಮ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಯೋಗೇಶ್ ಉಪ್ಪಾರ್, ಲೋಕೇಶ್ ಮಾದಾಪುರ, ರವಿನಂದನ್, ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಬೋಗಾದಿ ಪಪಂನಲ್ಲಿ 17.71 ಲಕ್ಷ ಉಳಿತಾಯ ಬಜೆಟ್

ಉದ್ಯಾನವನ, ಸ್ಮಶಾನ ಅಭಿವೃದ್ಧಿ, ಸರ್ಕಾರಿ ಶಾಲೆ, ಅಂಗನವಾಡಿಗಳಿಗೆ ಮೂಲಸೌಕರ್ಯಕ್ಕೆ ಆದ್ಯತೆ



ಬೋಗಾದಿ ಪಟ್ಟಣ ಪಂಚಾಯಿತಿಯ 2025–26ನೇ ಸಾಲಿನ ಉಳಿತಾಯ ಬಜೆಟ್ ಅನ್ನು ಪಂಚಾಯಿತಿ ಆಡಳಿತಾಧಿಕಾರಿ ಮಹೇಶ್‌ಕುಮಾರ್ ಮಂಡಿಸಿದರು.

ಮೈಸೂರು, ಮಾ.31(ಜಿಎ)–ಮೈಸೂರಿನ ಬೋಗಾದಿ ಪಟ್ಟಣ ಪಂಚಾಯಿತಿಯ 2025–26ನೇ ಸಾಲಿನ ಉಳಿತಾಯ ಬಜೆಟ್ ಅನ್ನು ಪಂಚಾಯಿತಿಯ ಆಡಳಿತಾಧಿಕಾರಿ ಕೆ.ಎಂ.ಮಹೇಶ್ ಕುಮಾರ್ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಶನಿವಾರ ಮಂಡಿಸಿದರು.

2025–26ನೇ ಸಾಲಿನಲ್ಲಿ ಒಟ್ಟು 22.66 ಕೋಟಿ ರೂ. ಬಜೆಟ್‌ನಲ್ಲಿ 17.71 ಲಕ್ಷ ರೂ. ಉಳಿತಾಯ ಮಂಡಿಸಲಾಗಿದೆ. ಬಜೆಟ್‌ನಲ್ಲಿ ಪ್ರಮುಖವಾಗಿ ಉದ್ಯಾನವನ ಅಭಿವೃದ್ಧಿ, ಸ್ಮಶಾನಗಳನ್ನು ಹೈಟೆಕ್ ಮಾದರಿ ನವೀಕರಿಸುವುದು, ಸರ್ಕಾರಿ ಶಾಲೆ ಮತ್ತು ಅಂಗನವಾಡಿಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸುವುದು ಸೇರಿದಂತೆ ಹೊಸ ಯೋಜನೆಗಳಿಗೆ ಅನುದಾನ ಮೀಸಲಿಡಲಾಗಿದೆ ಎಂದರು.

ರಸ್ತೆಬದಿಯ ಚರಂಡಿಗಳಿಗಾಗಿ 46.26 ಲಕ್ಷ ರೂ., ಬೀದಿದೀಪಗಳಿಗೆ 19.10 ಲಕ್ಷ ರೂ., ಮಳೆ ನೀರಿನ ಚರಂಡಿ, ಸಣ್ಣ ಮತ್ತು ಮಾರ್ಗಗಳ ಅಭಿ ವೃದ್ಧಿಗೆ 18.60 ಲಕ್ಷ ರೂ., ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ 35.60 ಲಕ್ಷ ರೂ., ಶವ ಸಾಗಿಸುವ ವಾಹನ ಖರೀದಿಗೆ 10 ಲಕ್ಷ ರೂ., ನೆಲ ಭರ್ತಿ ಜಾಗ ಅಭಿವೃದ್ಧಿಗೆ 28 ಲಕ್ಷ ರೂ., ನೀರು ಸರಬರಾಜು ಕಾಮಗಾರಿಗಳಾದ ಪೈಪ್‌ಲೈನ್ ಬೋರ್‌ವೆಲ್ ಯಂತ್ರೋಪಕರಣ ಆರ್‌ಓ ಪ್ಲಾಂಟ್ ಇತರೆ ಕಾಮಗಾರಿಗಳಿಗೆ 1.08 ಕೋಟಿ ರೂ., ಸಿಎಸ್‌ಆರ್ ಮಾದರಿಯಲ್ಲಿ ಕೆರೆಗಳ ಅಭಿವೃದ್ಧಿಗೆ 25 ಲಕ್ಷ ರೂ., ಒಳಚರಂಡಿ ಕಾಮಗಾರಿಗಾಗಿ 31.80 ಲಕ್ಷ ರೂ., ಪಾರ್ಕ್ ಅಭಿವೃದ್ಧಿಗಾಗಿ 25ಲಕ್ಷ ರೂ., ಹಾಗೂ ನಲ್ಮ್ ಯೋಜನೆಗಾಗಿ 5 ಲಕ್ಷ ರೂ. ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದರು. ಬಜೆಟ್ ಸಭೆಯಲ್ಲಿ ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಎಂ.ಬಸವರಾಜು, ಆರ್‌ಐ ವಿಜಯಕುಮಾರ್, ಪುನೀತ್, ಸೌಮ್ಯ, ಕಾಮರಾಜು, ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಒಪ್ಪಂದಕ್ಕೆ ಸಹಿ ಹಾಕದಿದ್ದರೆ ಬಾಂಬ್: ಇರಾನ್‌ಗೆ ಟ್ರಂಪ್ ಎಚ್ಚರಿಕೆ



ವಾಷಿಂಗ್ಟನ್: ಪರಮಾಣು ಬಾಂಬ್ ತಯಾರಿಕಾ ಯೋಜನೆಯಲ್ಲಿ ನಿರತವಾಗಿರುವ ಇರಾನ್ ಸರ್ಕಾರ ತನ್ನ ಒಪ್ಪಂದಕ್ಕೆ ಸಹಿ ಹಾಕದಿದ್ದರೆ ಆ ದೇಶದ ಮೇಲೆ ಬಾಂಬ್‌ಗಳ ಸುರಿಮಳೆ ಸುರಿಸುತ್ತೇನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಎನ್‌ಬಿಸಿ ನ್ಯೂಸ್‌ಗೆ ನೀಡಿದ ದೂರವಾಣಿ ಸಂದರ್ಶನದಲ್ಲಿ ಮಾತನಾಡಿದ ಟ್ರಂಪ್, ಅಮೆರಿಕ ಮತ್ತು ಇರಾನಿನ ಅಧಿಕಾರಿಗಳು ಮಾತನಾಡುತ್ತಿದ್ದಾರೆ. ಇರಾನ್ ತನ್ನ ಪರಮಾಣು ಯೋಜನೆಗಳನ್ನು ಮುಂದುವರೆಸಬಾರದು. ಕೂಡಲೇ ಅವುಗಳನ್ನು ನಿಲ್ಲಿಸಬೇಕು ಎಂಬುದು ನಮ್ಮ ನಿಲುವಾಗಿದೆ ಎಂದು ಹೇಳಿದ್ದಾರೆ. ಇದೇ ವೇಳೆ ಇರಾನ್ ತನ್ನ ಜೊತೆ ಒಪ್ಪಂದ ಮಾಡಿಕೊಳ್ಳದಿದ್ದರೆ ಬಾಂಬ್ ದಾಳಿ ನಡೆಯಲಿದೆ ಎಂದ ಟ್ರಂಪ್, ನಾನು 4 ವರ್ಷಗಳ ಹಿಂದೆ ಮಾಡಿದಂತೆ ಅವರ ವಿರುದ್ಧ ದ್ವಿತೀಯ ಸುಂಕ ವಿಧಿಸುವ ಅವಕಾಶವಿದೆ ಎಂದಿದ್ದಾರೆ. 2017–21ರ ತಮ್ಮ ಮೊದಲ ಅವಧಿಯಲ್ಲಿ ಟ್ರಂಪ್ ಇರಾನ್ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರು. ಅಮೆರಿಕ ಹೇರಿದ್ದ ನಿರ್ಬಂಧಗಳ ಪರಿಹಾರಕ್ಕಾಗಿ ಇರಾನ್‌ನ ವಿವಾದಿತ ಪರಮಾಣು ಚಟುವಟಿಕೆಗಳ ಮೇಲೆ ಕಟ್ಟುನಿಟ್ಟಾದ ಮಿತಿಗಳನ್ನು ವಿಧಿಸಲಾಗಿತ್ತು.

ಹಿಮಾಚಲ ಪ್ರದೇಶದಲ್ಲಿ ಭೂಕುಸಿತ: 6 ಮಂದಿ ಸಾವು



ಕುಲ್ಲು: ಹಿಮಾಚಲ ಪ್ರದೇಶದ ಕುಲ್ಲುವಿನ ಗುರುದ್ವಾರ ಮಣಿಕರಣ್ ಸಾಹಿಬ್ ಎದುರಿನ ಪಿಡಬ್ಲ್ಯೂಡಿ ರಸ್ತೆಯ ಬಳಿ ಭಾನುವಾರ ಸಂಭವಿಸಿದ ಭೂಕುಸಿತದಲ್ಲಿ 6 ಮಂದಿ ಸಾವನ್ನಪ್ಪಿದ್ದು, ಈ ಪೈಕಿ ಮೂವರು ಮಹಿಳೆಯರು ಇದ್ದಾರೆ. ಘಟನೆಯಲ್ಲಿ ಹಲವರು ಗಾಯಗೊಂಡಿದ್ದಾರೆ.

ಸಂಜೆ 5 ಗಂಟೆ ಸುಮಾರಿಗೆ ರಸ್ತೆಯ ಅಂಚಿನಲ್ಲಿ ಕುಳಿತಿದ್ದ ಜನರು ದೊಡ್ಡ ಮರವೊಂದು ಉರುಳಿ ಬಿದ್ದ ಪರಿಣಾಮ ನಲುಗಿ ಸಾವನ್ನಪ್ಪಿದರು. ಗಾಯಾಳುಗಳನ್ನು ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ ಜಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕುಲ್ಲುವಿನ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಶ್ವನಿಕುಮಾರ್, ಅಪಘಾತದಲ್ಲಿ 6 ಮಂದಿ ಸಾವನ್ನಪ್ಪಿ ಮತ್ತು ಹಲವರು ಗಾಯಗೊಂಡಿದ್ದಾರೆ. ಎಸ್‌ಎಚ್‌ಓ ಮಣಿಕರಣ್ ನೇತೃತ್ವದ ಪೊಲೀಸ್ ತಂಡ ಸ್ಥಳದಲ್ಲಿದ್ದು, ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ನಡೆಸುತ್ತಿದೆ. ಕ್ಷೇತ್ರ ಕಂದಾಯ ಇಲಾಖೆಯೂ ಸ್ಥಳದಲ್ಲಿದ್ದು, ಪರಿಸ್ಥಿತಿ ನಿರ್ಣಯಿಸುತ್ತಿದೆ ಮತ್ತು ತುರ್ತು ಕ್ರಮಗಳಿಗೆ ಸಹಾಯ ಮಾಡುತ್ತಿದೆ. ಅಗ್ನಿಶಾಮಕ ದಳದ ತಂಡವೂ ಅಪಘಾತದ ಸ್ಥಳಕ್ಕೆ ತೆರಳಿದೆ. ಮೃತರ ಗುರುತುಗಳನ್ನು ಪೊಲೀಸರು ಇನ್ನೂ ಖಚಿತಪಡಿಸಿಲ್ಲ

ಉಡಾವಣೆಯಾದ ಕೇವಲ 40 ಸೆಕೆಂಡ್‌ನಲ್ಲೇ ಜರ್ಮನಿ ಬಾಹ್ಯಾಕಾಶ ರಾಕೆಟ್ ಸ್ಫೋಟ



ಜರ್ಮನಿ: ಬಾಹ್ಯಾಕಾಶ ಯೋಜನೆ ಆರಂಭಿಸುವ ಯುರೋಪ್ ಕನಸಿಗೆ ಆರಂಭದಲ್ಲೇ ಪೆಟ್ಟು ಬಿದ್ದಿದ್ದು, ಪರೀಕ್ಷಾರ್ಥ ಉಡಾವಣಾ ರಾಕೆಟ್ ಉಡಾವಣೆಗೊಂಡ ಕೇವಲ 40 ಸೆಕೆಂಡ್‌ನಲ್ಲೇ ಸ್ಫೋಟಗೊಂಡಿದೆ. ಭಾನುವಾರ ನಾರ್ವೇಜಿಯನ್ ಬಾಹ್ಯಾಕಾಶ ಬಂದರಿನಿಂದ ಉಡಾವಣೆಯಾದ ಪರೀಕ್ಷಾರ್ಥ ರಾಕೆಟ್ ಕೇವಲ 40 ಸೆಕೆಂಡುಗಳ ನಂತರ ನೆಲಕ್ಕೆ ಬಿದ್ದು ಸ್ಫೋಟಗೊಂಡಿದೆ. ಈ ಪರೀಕ್ಷಾರ್ಥ ರಾಕೆಟ್ ಅನ್ನು ಜರ್ಮನ್ ಸ್ಟಾರ್ಟ್‌ಅಪ್ ಇಸಾರ್ ಏರೋಸ್ಪೇಸ್ ತಯಾರಿಸಿತ್ತು ಮತ್ತು ಇದನ್ನು ಸಂಸ್ಥೆ ಆರಂಭಿಕ ಪರೀಕ್ಷೆ ಎಂದು ವಿವರಿಸಿತ್ತು.

ಇನ್ನು ರಾಕೆಟ್ ವೈಫಲ್ಯವನ್ನು ಒಪ್ಪಿಗೊಂಡ ಇಸಾರ್ ಏರೋಸ್ಪೇಸ್ ಸಂಸ್ಥೆ ಆರಂಭಿಕ ಉಡಾವಣೆಯು ಅಕಾಲಿಕವಾಗಿ ಕೊನೆಗೊಳ್ಳಬಹುದು ಎಂದು ಎಚ್ಚರಿಸಿತ್ತು. ಅಲ್ಲದೆ ಈ ಪರೀಕ್ಷೆಯು ತನ್ನ ತಂಡವು ಕಲಿಯಬಹುದಾದ ವ್ಯಾಪಕ ಡೇಟಾವನ್ನು ಉತ್ಪಾದಿಸಿದೆ ಎಂದು ಹೇಳಿದೆ.

ನಾರ್ವೆಯ ಆರ್ಕ್ಟಿಕ್ ಆಂಡೋಯಾ ಸ್ಪೇಸ್‌ಪೋರ್ಟ್‌ನಿಂದ ಉಡಾವಣೆಗೊಂಡ ಸ್ಪೆಕ್ಟ್ರಮ್ ಅನ್ನು ಒಂದು ಮೆಟ್ರಿಕ್ ಟನ್ ತೂಕದ ಸಣ್ಣ ಮತ್ತು ಮಧ್ಯಮ ಗಾತ್ರದ ಉಪಗ್ರಹಗಳಿಗಾಗಿ ವಿನ್ಯಾಸಗೊಳಿಸಲಾಗಿತ್ತು.

ಇಂಡಿಗೋಗೆ 944 ಕೋಟಿ ದಂಡ ವಿಧಿಸಿದ ಐಟಿ ಇಲಾಖೆ



ನವದೆಹಲಿ: ಆದಾಯ ತೆರಿಗೆ ಇಲಾಖೆ ಇಂಡಿಗೋಗೆ 944.20 ಕೋಟಿ ರೂ.ಗಳ ದಂಡವನ್ನು ವಿಧಿಸಿದೆ. ಈ ಆದೇಶವನ್ನು ದೇಶದ ಅತಿದೊಡ್ಡ ವಿಮಾನಯಾನ ಸಂಸ್ಥೆ ಇಂಡಿಗೋದ ಮಾತೃ ಸಂಸ್ಥೆ ಇಂಟರ್‌ಗ್ಲೋಬ್ ಏವಿಯೇಷನ್ ಸ್ವೀಕರಿಸಿದೆ. 2021–22 ಸಾಲಿಗಾಗಿ ಐಟಿ ಇಲಾಖೆ ರೂ. 944.20 ಕೋಟಿ ದಂಡ ವಿಧಿಸುವ ಆದೇಶ ನೀಡಿದೆ ಎಂದು ವಿಮಾನಯಾನ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ. ಸೆಕ್ಷನ್ 143(3) ಅಡಿ ಮೌಲ್ಯಮಾಪನ ಆದೇಶದ ವಿರುದ್ಧ ಆದಾಯ ತೆರಿಗೆ ಕಮಿಷನರ್ ಮುಂದೆ ಕಂಪನಿಯು ಸಲ್ಲಿಸಿದ ಮೇಲ್ಮನವಿ ವಜಾಗೊಳಿಸಲಾಗಿದೆ ಎಂಬ ತಪ್ಪಾದ ತಿಳುವಳಿಕೆಯ ಆಧಾರದ ಮೇಲೆ ಆದೇಶ ನೀಡಲಾಗಿದೆ. ಆದಾಯ ತೆರಿಗೆ ಪ್ರಾಧಿಕಾ ಜಾರಿಗೊಳಿಸಿದ ಆದೇಶವು ಕಾನೂನಿಗೆ ಅನುಸಾರವಾಗಿಲ್ಲ ಮತ್ತು ತಪ್ಪಾಗಿದೆ ಎಂದು ನಂಬಿರುವುದಾಗಿ ಕಂಪನಿ ತಿಳಿಸಿದೆ. ಕಂಪನಿಯು ಅದೇ ರೀತಿ ಸ್ಪರ್ಧಿಸಲಿದ್ದು, ಐಟಿ ಇಲಾಖೆ ಆದೇಶದ ವಿರುದ್ಧ ಸೂಕ್ತ ಕಾನೂನು ಹೋರಾಟ ನಡೆಸಲಿದೆ. ಅಲ್ಲದೇ, ಈ ಆದೇಶವು ಕಂಪನಿಯ ಹಣಕಾಸು, ಕಾರ್ಯಾಚರಣೆಗಳು ಅಥವಾ ಇತರ ಚಟುವಟಿಕೆಗಳ ಮೇಲೆ ಯಾವುದೇ ಮಹತ್ವದ ಪರಿಣಾಮ ಬೀರುವುದಿಲ್ಲ ಎಂದು ಇಂಡಿಗೋ ಹೇಳಿದೆ

ಮನೆಗೆ ಅಪ್ಪಳಿಸಿದ ವಿಮಾನ; ಎಲ್ಲಾ ಪ್ರಯಾಣಿಕರು ಸಾವು



ವಾಷಿಂಗ್ಟನ್: ಅಮೆರಿಕದಲ್ಲಿ ಮತ್ತೊಂದು ವಿಮಾನ ಅಪಘಾತ ಸಂಭವಿಸಿದ್ದು, ಪ್ರಯಾಣಿಕರ ಹೊತ್ತು ಸಾಗಿದ್ದ ಪ್ರಯಾಣಿಕರ ವಿಮಾನವೊಂದು ಜನವಸತಿ ಕಟ್ಟಡಕ್ಕೆ ಅಪ್ಪಳಿಸಿದ ಪರಿಣಾಮ ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರೂ ಸಾವನ್ನಪ್ಪಿದ್ದಾರೆ. ಅಮೆರಿಕದ ಅಯೋವಾದಿಂದ ಮಿನ್ನೇಸೋಟಕ್ಕೆ ತೆರಳುತ್ತಿದ್ದ ಸಣ್ಣ ವಿಮಾನವೊಂದು ಶನಿವಾರ ಮಿನ್ನಿಯಾ ಪೊಲೀಸ್ ಉಪನಗರದಲ್ಲಿರುವ ಮನೆಯೊಂದಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ. ವಿಮಾನವು ಡಿಕ್ಕಿ ಹೊಡೆದ ನಂತರ ಮನೆಗೆ ಬೆಂಕಿ ಹೊತ್ತಿಕೊಂಡು ಕಟ್ಟಡ ಕೂಡ ನಾಶವಾಗಿದೆ. ಆದರೆ ಅದೃಷ್ಟವಶಾತ್ ಮನೆಯಲ್ಲಿದ್ದ ನಿವಾಸಿಗಳಿಗೆ ಯಾವುದೇ ಹಾನಿಯಾಗಿಲ್ಲ. ಸಿಂಗಲ್ ಎಂಜಿನ್ ಹೊಂದಿರುವ SOCATA TBM7 ವಿಮಾನದಲ್ಲಿ ಎಷ್ಟು ಜನರಿದ್ದರು ಎಂಬುದು ಇನ್ನೂ ತಿಳಿದಿಲ್ಲ. ಆದರೆ ವಿಮಾನದಲ್ಲಿದ್ದ ಪ್ರಯಾಣಿಕರಲ್ಲಿ ಯಾರೂ ಬದುಕುಳಿದಿಲ್ಲ ಎಂದು ವರದಿಯಾಗಿದೆ.

ಜನರಲ್ ತಿಮ್ಮಯ್ಯ ಜೀವನ ಆದರ್ಶಪ್ರಾಯ: ನರ್ವಾಡೆ



ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿ ಸೋಮವಾರ ತಿಮ್ಮಯ್ಯರ 119ನೇ ಜನ್ಮ ಜಯಂತಿ ಸಭೆಯಲ್ಲಿ ವಿನಾಯಕ ನರ್ವಾಡೆ, ಮಹೇಶ್ ನಾಚಯ್ಯ ಭಾಗವಹಿಸಿದ್ದರು.

ಮಡಿಕೇರಿ,ಮಾ.31: ಜನರಲ್ ತಿಮ್ಮಯ್ಯ ಅವರ ಜೀವನಾದರ್ಶ ಪ್ರತಿಯೊಬ್ಬರಿಗೂ ಸದಾ ಆದರ್ಶ ಪ್ರಾಯವಾಗಿದೆ. ನಾಯಕರು ಅನೇಕರು ಇದ್ದರಾದರೂ ಕೆಲವರು ಮಾತ್ರ ಸದಾ ನಮ್ಮ ಮನಸ್ಸಿನಲ್ಲಿ ಇರಲು ಸಾಧ್ಯ. ಜನರಲ್ ತಿಮ್ಮಯ್ಯ ಅವರು ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು ಎಂದು ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ ಹೇಳಿದ್ದಾರೆ.


ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಡಿಕೇರಿಯ ಜನರಲ್ ತಿಮ್ಮಯ್ಯ ಜನ್ಮ ನಿವಾಸ ಸನ್ನಿಸೈಡ್‌ನಲ್ಲಿರುವ ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿ ನಡೆದ 119ನೇ ಜನ್ಮ ಜಯಂತಿ ಸಭೆಯಲ್ಲಿ ಮಾತನಾಡಿದ ಅವರು, ವಿನಾಯಕ ನರ್ವಾಡೆ, ಜನರಲ್ ತಿಮ್ಮಯ್ಯ ಅವರ ಜೀವನ ಪ್ರತಿಯೋರ್ವರಿಗೂ ಆದರ್ಶಪ್ರಾಯ. ಸೇನೆಯೇ ಅವರ ಆತ್ಮವಾಗಿತ್ತು ಹಾಗೇ ಆತ್ಮದಲ್ಲಿಯೇ ಸೇನಾ ಪ್ರೇಮ ಹುದುಗಿತ್ತು ಎಂದು ಸ್ಮರಿಸಿದರು.

ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ ಅಧ್ಯಕ್ಷ ಮಹೇಶ್ ನಾಚಯ್ಯ ಮಾತನಾಡಿ, ಇಂದಿನ ವಿದ್ಯಾರ್ಥಿಗಳಲ್ಲಿ ಜನರಲ್ ತಿಮ್ಮಯ್ಯ ಅವರ ಕಷ್ಟಕರ ಜೀವನ ಮತ್ತು ಸೇನೆಯಲ್ಲಿ ಅವರು ತೋರಿದ ಅಪ್ರತಿಮ ಪೌರುಷದ ಬಗ್ಗೆ ತಿಳುವಳಿಕೆ ನೀಡುವಂತಹ ಪ್ರಯತ್ನವಾಗಬೇಕೆಂದು ಹೇಳಿದರು.

ಸುಂಟಿಕೊಪ್ಪದ ಸರ್ಕಾರಿ ಪ್ರಾಥಮಿಕ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಎ.ಎಸ್.ಶ್ರೇಷ ತಿಮ್ಮಯ್ಯ ಅವರ ಸೇನಾ ಸಾಧನೆಯ ಬಗ್ಗೆ ಮಾತನಾಡಿ, ಸಭಿಕರ ಮೆಚ್ಚುಗೆ ಗಳಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್‌ನ ಅರಮೇರಿ ಶಾಲಾ ವಿದ್ಯಾರ್ಥಿಗಳಾದ ಮಾನ್ವಿ ಮುತ್ತಪ್ಪ ಪ್ಯಾರಿಸ ಅವರಿಂದ ನಾಡಗೀತೆ, ವಿದ್ಯಾರ್ಥಿನಿಯರಾದ ಅನುಷ್ಕ ರವಿಶಂಕರ್, ಶ್ರೇಯ, ಕ್ಯಾತಿ ಪ್ರಶಾಂತ್, ಶಾರ್ವರಿ ರೈ, ತಿಮ್ಮಯ್ಯ ಸ್ಮಾರಕ ಭವನದ ಸಿಬ್ಬಂದಿ ಪೊನ್ನುಕಂಡ ರಮ್ಯ ಮಾಚಯ್ಯ ಅವರು ದೇಶಭಕ್ತಿಗೀತೆಯನ್ನು ಹಾಡಿದರು.

ಇಲಾಖೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ್, ಅಧಿಕಾರಿ ಮಣಜೂರು ಮಂಜುನಾಥ್, ತಹಶೀಲ್ದಾರ್ ಪ್ರವೀಣ್ ಕುಮಾರ್, ಪೊಲೀಸ್ ಗುಪ್ತ ದಳದ ವೃತ್ತ ನಿರೀಕ್ಷಕ ಮೇದಪ್ಪ, ಕೊಡವ ಸಮಾಜದ ನಿರ್ದೇಶಕ ಸಂಜು, ಜಿಲ್ಲಾ ಗೌಡ್ಸ್ ಸಂಸ್ಥೆಯ ತರಬೇತಿ ವಿಭಾಗದ ಆಯುಕ್ತೆ ಹೆಚ್.ಮೈಥಿಲಿ ರಾವ್, ವಿದ್ಯಾಲಯದ ಸಂಗೀತ ಶಿಕ್ಷಕಿ ಪ್ರತಿಭಾ ಮಧುಕರ್, ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ, ಪ್ರೆಸ್ ಕ್ಲಬ್ ಅಧ್ಯಕ್ಷ ಬೊಳ್ಳಜೀರ ಅಯ್ಯಪ್ಪ, ನಿವೃತ್ತ ಸುಬೇದಾರ್ ಮೇಜರ್ ಗೌಡಂಡ ತಿಮ್ಮಯ್ಯ, ಸಾಹಿತಿ ಜಿ.ಟಿ. ರಾಘವೇಂದ್ರ ಮತ್ತಿತರರು ವೀರ ಯೋಧ ಜನರಲ್ ತಿಮ್ಮಯ್ಯ ಅವರಿಗೆ ಗೌರವ ನಮನ ಸಲ್ಲಿಸಿದರು.

ಹೋಟೆಲ್‌ಗೆ ನುಗ್ಗಿದ ಕಾರು : ಮೂವರಿಗೆ ಗಾಯ



ನಿಯಂತ್ರಣ ಕಳೆದುಕೊಂಡ ಕಾರು ಹೋಟೆಲ್‌ಗೆ ಡಿಕ್ಕಿ ಹೊಡೆದಿರುವುದು.

ಸುಂಟಿಕೊಪ್ಪ,ಮಾ.31– ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಹೊಟೇಲ್‌ಗೆ ಅಪ್ಪಳಿಸಿರುವ ಘಟನೆ ಮುಂಜಾನೆ 4 ಗಂಟೆಯಲ್ಲಿ ನಡೆದಿದೆ. ಕುಶಾಲನಗರದಿಂದ ಕೊಡಗರ ಹಳ್ಳಿ ಮಾರ್ಗವಾಗಿ ಪುತ್ತೂರು ಕಡೆಗೆ ತೆರಳುತ್ತಿದ್ದ ಕಾರು ಚಾಲಕನ ನಿಯಂತ್ರಣ ಕಳೆದುಕೊಂಡ ಹಿನ್ನೆಲೆಯಲ್ಲಿ ಅಪಘಾತ ಸಂಭವಿಸಿದೆ.

ಕಾರನ್ನು ಮೈಸೂರಿನ ರಾಜೇಶ್ ಎಂಬವರು ಚಲಾಯಿಸುತ್ತಿದ್ದು, ತಮ್ಮ ಮಾಲೀಕರು ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಅವರ ಮೃತದೇಹವನ್ನು ತುರ್ತು ವಾಹನದಲ್ಲಿ ಪುತ್ತೂರು ಕಡೆಗೆ ಸ್ಥಳಾಂತರಿಸಲಾಗುತ್ತಿತ್ತು. ಈ ವಾಹನವನ್ನು ಹಿಂಬಾಲಿಸುತ್ತಿದ್ದ ರಾಜೇಶ್‌ಗೆ ದಟ್ಟ ಮಂಜು ಮುಸುಕಿದ ವಾತಾವರಣವಿದ್ದ ಕಾರಣ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಅಪಘಾತದಲ್ಲಿ ಕೊಡಗರಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಹೊಟೇಲ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕಟ್ಟಡದ ಗೋಡೆ, ರೋಲಿಂಗ್ ಶೆಟರ್ ಸಹಿತ ಪೀಠೋಪಕರಣಗಳಿಗೆ ಹಾನಿಯಾಗಿದೆ. ಕಾರಿನ ಮುಂಭಾಗ ಜಖಂಗೊಂಡಿದ್ದು, ಕಾರು ಚಾಲಕ ರಾಜೇಶ್ ಸೇರಿ ಒಟ್ಟು ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ. ಸಸುಂಟಿಕೊಪ್ಪ ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿರಾಜಪೇಟೆಯಲ್ಲಿ ಸಂಭ್ರಮ–ಸಡಗರದ ಈದುಲ್ ಫಿತ್ರ್ ಆಚರಣೆ

ವಿರಾಜಪೇಟೆ,ಮಾ.31– ರಂಜಾನ್ ಉಪವಾಸ ವ್ರತದ ಪರಿಸಮಾಪ್ತಿಯೆಂಬಂತೆ ಮುಸಲ್ಮಾನ್ ಬಾಂಧವರು ಈದುಲ್ ಫಿತ್ರ್ ಹಬ್ಬವನ್ನು ಸಂಭ್ರಮ ಮತ್ತು ಸಡಗರದಿಂದ ಆಚರಿಸಿದರು. ನಗರದ ವಿವಿಧ ಮಸೀದಿ ಮತ್ತು ಈದ್ಗಾಗಳಲ್ಲಿ ನಮಾಝ್ ಹಾಗೂ ಪ್ರವಚನ ಆಲಿಸಲು ಹೆಚ್ಚಿನ ಸಂಖ್ಯೆಯ ಸೇರಿದ್ದರು.

ನಗರದ ಮುಖ್ಯ ರಸ್ತೆಯ ಶಾಫಿ ಜುಮಾ ಮಸೀದಿಯಲ್ಲಿ ಮೌ॥ಹ್ಯಾರಿಸ್ ಬಾಖವಿ, ಖಾಸಗಿ ಬಸ್ ನಿಲ್ದಾಣದ ಶಾದುಲಿ ಜುಮಾ ಮಸೀದಿಯಲ್ಲಿ ಮೌ॥ ಶುಹೈಬ್ ಫೈಝಿ, ಗಡಿಯಾರ ಕಂಬ ಸಮೀಪದ ಮುರುಡೇಶ್ವರ್ ನವಾಯತ್ ಬಾದ್‌ಷಾ ಮಸೀದಿಯಲ್ಲಿ ಮೌ॥ಮಖ್ಸೂದ್ ಅಹಮದ್, ಕಲ್ಲುಬಾಣೆಯ ಬದ್ರಿಯಾ ಜುಮಾ ಮಸೀದಿಯಲ್ಲಿ ಮೌ॥ಮುತಲಿಬ್ ಅನ್ವರಿ, ಅಪ್ಪಯ್ಯಸ್ವಾಮಿ ರಸ್ತೆಯ ಜಾಮಿಯಾ ಮಸೀದಿಯಲ್ಲಿ ಮೌ॥.ಗುಲ್‌ಷದ್ ಅಹಮದ್, ಬಂಗಾಳಿ ಬೀದಿಯ ಮಸ್ಜಿದ್–ಎ–ಅಝಂನಲ್ಲಿ ಮೌ॥.ಹಸೀಬ್ ಶರೀಫ್, ಹುಂಡಿ ಮಸ್ಜಿದ್ ರಹ್ಮಾದಲ್ಲಿ ಅಬೂಬಕರ್ ಕಾರಕುನ್ನ್, ಪ್ರವಚನ ಹಾಗೂ ನಮಾಝ್‌ಗೆ ನೇತೃತ್ವ ನೀಡಿದರು.

ಈದ್‌ಗಾ ನಮಾಜ್: ವಿರಾಜಪೇಟೆ ಗೋಣಿಕೊಪ್ಪ ರಸ್ತೆ ವಿದ್ಯಾನಗರ ಬ್ರೈಟ್ ಕ್ಯಾಂಪಸ್ ಈದ್ಗಾದಲ್ಲಿ ಮೌ॥.ಅಬ್ದುಲ್ ಜಲೀಲ್ ಹಿಶಾಮಿ, ಮಲಬಾರ್ ರಸ್ತೆಯ ಸಲಫಿ ಈದ್ಗಾದಲ್ಲಿ ನಜಾತಿ ಅಲ್ ಹಿಕಮಿ, ಸುಣ್ಣದಬೀದಿಯ ಮದೀನಾ ಈದ್‌ಗಾಹ್‌ನಲ್ಲಿ ಮೌ॥.ಮುಝಮ್ಮಿಲ್, ಗೋಣಿಕೊಪ್ಪ ಪೊನ್ನಂಪೇಟೆ ರಸ್ತೆಯ ಮಸ್ಜಿದ್–ಎ–ಹಿದಾಯ ಈದ್ಗಾದಲ್ಲಿ ಮೌ॥.ಮುಹಮ್ಮದ್ ಸಗೀರ್ ಅಝ್‌ಹರಿ, ಸಿದ್ದಾಪುರದ ಮಾರ್ಕೆಟ್ ರಸ್ತೆಯ ಹಿರಾ ಈದ್ಗಾನಲ್ಲಿ ಮೌ॥.ಅಮೀನ್ ಕೌಸರಿಯವರ ನೇತೃತ್ವದಲ್ಲಿ ನಮಾಝ್ ಹಾಗೂ ವಿಶೇಷ ಈದ್ ಪ್ರವಚನ ನಡೆಯಿತು.

ಭಾನುವಾರದಂದು ಶವ್ವಾಲ್ ತಿಂಗಳಿನ ಚಂದ್ರ ದರ್ಶನವಾದ ಹಿನ್ನಲೆಯಲ್ಲಿ ಮುಸಲ್ಮಾನರು ಈದುಲ್ ಫಿತ್ರ್ ಹಬ್ಬವನ್ನು ಆಚರಿಸಿದರು. ಶಾಫಿ ಹಾಗೂ ಹನಫಿ ವಿಭಾಗದವರು ಒಂದೇ ದಿನ ಹಬ್ಬ ಆಚರಿಸಿದುದರಿಂದ ಹಬ್ಬದ ಉತ್ಸಾಹಕ್ಕೆ ಹೆಚ್ಚು ಕಳೆ ನೀಡಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಹೊರ ರಾಜ್ಯದ ಮುಸ್ಲಿಮ್ ಕಾರ್ಮಿಕರು ಕುಟುಂಬ ಸಮೇತ ಸ್ಥಳೀಯರೊಂದಿಗೆ ಹಬ್ಬದಲ್ಲಿ ಪಾಲ್ಗೊಂಡಿದುದು ವಿಶೇಷವಾಗಿತ್ತು. ಈದ್ಗಾಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ವಿರಾಜಪೇಟೆಯ ಗೋಣಿಕೊಪ್ಪ ರಸ್ತೆ ವಿದ್ಯಾನಗರ ಬ್ರೈಟ್ ಕ್ಯಾಂಪಸ್ ಈದ್ಗಾದಲ್ಲಿ ನಮಾಝ್‌ನಲ್ಲಿ ನಿರತರಾಗಿರುವ ಮುಸ್ಲಿಮ್ ಮಹಿಳೆಯರು.

ಸಡಗರದಿಂದ ಆಚರಿಸಿದ ಹೊನ್ನಾರು ಉತ್ಸವ



ಕುಶಾಲನಗರ: ಗ್ರಾಮೀಣ ಜನಪದ ಸಂಸ್ಕೃತಿಯ ಪ್ರತೀಕವಾದ ಹೊನ್ನಾರು ಉತ್ಸವ (ಚಿನ್ನದ ಉಳುಮೆ) ವನ್ನು ಸಮೀಪದ ತೊರೆನೂರು, ಶಿರಂಗಾಲ, ಹೆಬ್ಬಾಲೆ ಗ್ರಾಮಗಳಲ್ಲಿ ಯುಗಾದಿ ಅಂಗವಾಗಿ ರೈತರು ಸಂಭ್ರಮ ಸಡಗರದಿಂದ ಆಚರಿಸಿದರು.

ಮುಂಜಾನೆ ರೈತರು ತಮಗೆ ಸೇರಿದ ಎತ್ತು ಹಾಗೂ ದನಕರುಗಳಿಗೆ ನದಿಯ ನೀರಿನಿಂದ ತೊಳೆದು ಅವುಗಳ ಗವುಸು ಹಾಗೂ ಕೊಂಬಿಗೆ ಹಣಸು ವಸ್ತ್ರಾಲಂಕಾರದಿಂದ ಸಿಂಗರಿಸಿ ವಿಶೇಷ ಪೂಜೆ ಸಲ್ಲಿಸಿ, ಬಳಿಕ ರೈತರು ಹೊಸ ಉಡುಗೆ–ತೊಡಿಗೆ ತೊಟ್ಟು ತಮ್ಮ ಕೃಷಿ ಪರಿಕರಗಳಾದ ನೇಗಿಲು, ನೊಗ, ಎತ್ತಿನ ಗಾಡಿಯೊಂದಿಗೆ ಹತ್ಯಾರುಗಳನ್ನು ಒಪ್ಪವಾಗಿ ಜೋಡಿಸಿ ಪೂಜೆ ಸಲ್ಲಿಸಿದರು.

ಹೊನ್ನಾರು ಉಳುಮೆ : ತೊರೆನೂರು ಗ್ರಾಮದ ಬಸವೇಶ್ವರ ದೇವಸ್ಥಾನ ಸಮಿತಿ ಹಾಗೂ ಗ್ರಾಮಸ್ಥರೆಲ್ಲ ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿ ಸೇರಿ, ಜಾನುವಾರುಗಳಿಗೆ ಸಾಮೂಹಿಕ ಪೂಜೆ ಸಲ್ಲಿಸುವ ಮೂಲಕ ಈಡುಗಾಯಿ ಹಾಕಿ ಹೊನ್ನಾರು ಉಳುಮೆಗೆ ಸಿದ್ಧತೆ ನಡೆಸಿದರು. ದೇವಸ್ಥಾನದ ಅರ್ಚಕ ಟಿ.ಎಲ್. ಸೋಮಶೇಖರ್ ಭೂಮಿ ಪೂಜೆ ನಡೆಸಿದರು.

ಸಾಹಿತಿ ಡಾ.ಜೆಸೋಮಣ್ಣ ಮಾತನಾಡಿ, ಎತ್ತುಗಳ ಬದಲಿಗೆ ಯಂತ್ರವನ್ನು ಬಳಸುವ ಇಂದಿನ ಆಧುನಿಕ ಯುಗದಲ್ಲಿಯೂ ರೈತರು ಹಬ್ಬವನ್ನು ಆಚರಿಸುವ ಮೂಲಕ ನಮ್ಮ ಸಂಸ್ಕೃತಿ ಸಂಪ್ರದಾಯದ ಉಳಿವಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಜಿ.ಪ್ರೇಮಕುಮಾರ್ ಮಾತನಾಡಿದರು. ಸಂದರ್ಭ ದೇವಾಲಯ ಸಮಿತಿ ಅಧ್ಯಕ್ಷ ಟಿ.ಬಿ. ಜಗದೀಶ್, ಗೌರವಾಧ್ಯಕ್ಷ ಟಿ.ಡಿ.ಈಶ್ವರ್, ಉಪಾಧ್ಯಕ್ಷ ಟಿ.ಬಿ.ಚಿದಾನಂದ, ಕಾರ್ಯದರ್ಶಿ ಟಿ.ಎಲ್. ಮಹೇಶ್ ಕುಮಾರ್, ಗ್ರಾ.ಪಂ.ಸದಸ್ಯ ಟಿ.ಸಿ.ಶಿವಕುಮಾರ್, ಜನಪದ ಕಲಾವಿದ ಭರಮಣ್ಣ ಬೆಟಗೇರಿ ಪಾಲ್ಗೊಂಡಿದ್ದರು.

ಶಿರಂಗಾಲ: ಶ್ರೀ ಮಂಟಿಗಮ್ಮ ದೇವಾಲಯ ಮತ್ತು ಉಮಾಮಹೇಶ್ವರ ದೇವಾಲಯ ಸಮಿತಿಯ ವತಿಯಿಂದ ರೈತರು ಹೊನ್ನಾರು ಉತ್ಸವ ಆಚರಿಸಿದರು.

ಸಂಪ್ರದಾಯದಂತೆ ಗ್ರಾಮದಲ್ಲಿ ಹೊಸ ಪಂಚಾಂಗದ ಪ್ರಕಾರ ರೈತರು ಪೂಜೆ ಸಲ್ಲಿಸಿ ಭೂಮಿ ಉಳುಮೆಗೆ ಚಾಲನೆ ನೀಡಿದರು. ಎತ್ತುಗಳನ್ನು ಸಿಂಗಾರ ಮಾಡಿ ಮೆರವಣಿಗೆ ನಡೆಸಿದರು.

ದೇವಾಲಯ ಸಮಿತಿ ಅಧ್ಯಕ್ಷ ಎಸ್. ಎಸ್. ಚಂದ್ರಶೇಖರ್, ಉಪಾಧ್ಯಕ್ಷ ಎಸ್ ಜೆ. ಉಮೇಶ್, ಕಾರ್ಯದರ್ಶಿ ವೆಂ.ಎಸ್. ಗಣೇಶ್, ಕಟ್ಟಡ ಸಮಿತಿ ಗೌರವ ಅಧ್ಯಕ್ಷ ಎಸ್.ಆರ್. ಕಾಳಿಂಗಪ್ಪ, ಅಧ್ಯಕ್ಷ ಎಸ್. ಕೆ. ಪ್ರಸನ್ನ, ಕಾರ್ಯದರ್ಶಿ ಬಿ.ಎಸ್. ಬಸವಣ್ಣಯ್ಯ, ಮತ್ತು ಸಮಿತಿಯ ನಿರ್ದೇಶಕರು ಸದಸ್ಯರು ಪಾಲ್ಗೊಂಡಿದ್ದರು.

ಏ.3ರಿಂದ ನಾಪೋಕ್ಲು ಮುತ್ತಪ್ಪ ದೇವರ ವಾರ್ಷಿಕ ಉತ್ಸವ



ನಾಪೋಕ್ಲು,ಮಾ.31– ಎರಡನೇ ಪರಶಿನಿ ಎಂದೇ ಪ್ರಖ್ಯಾತವಾಗಿರುವ ನಾಪೋಕ್ಲುವಿನ ಶ್ರೀ ಪೊನ್ನು ಮುತ್ತಪ್ಪ ದೇವರ ವಾರ್ಷಿಕ ಉತ್ಸವವನ್ನು ಏ.3ರಿಂದ ಐದರವರೆಗೆ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಆಡಳಿತ ಮಂಡಳಿ ಅಧ್ಯಕ್ಷ ಎ.ಕೆ.ಚಂದ್ರನ್ ಹೇಳಿದರು.

ಉತ್ಸವದ ಅಂಗವಾಗಿ ಏಪ್ರಿಲ್ ಮೂರರ ಗುರುವಾರ ಬೆಳಿಗ್ಗೆ 6 ಗಂಟೆಗೆ ಗಣಪತಿ ಹೋಮ ಮತ್ತು ಶುದ್ಧ ಕಳಸವನ್ನು ಕೇರಳ ನೀಲೇಶ್ವರದ ಮುರಳಿ ಕೃಷ್ಣ ತಂತ್ರಿ ಅವರಿಂದ ನಡೆಸಲಾಗುವುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ರಾತ್ರಿ 8.30 ಗಂಟೆಗೆ ಗುರು ಪೂಜೆ ಹಾಗೂ ಶ್ರೀದೇವಿ ಪೂಜೆ ನಡೆಯಲಿದೆ. ನಾಲ್ಕರಂದು ಮಧ್ಯಾಹ್ನ ಪೈಂಗುತ್ತಿ ಹಾಗೂ ಸಂಜೆ ಶ್ರೀ ಮುತ್ತಪ್ಪ ದೇವರ ಕಳಸ ನಡೆಯಲಿದೆ ಎಂದರು.

ಪವಿತ್ರ ಕಾವೇರಿ ನದಿಯಲ್ಲಿ ಸ್ನಾನದ ನಂತರ ಪ್ರಖ್ಯಾತ ಕೇರಳ ಚಂಡೆಗಳೊಂದಿಗೆ ಪೇಟೆಯ ಮುಖ್ಯ ಬೀದಿಯಲ್ಲಿ ಮೆರವಣಿಗೆ ಮೂಲಕ ಸನ್ನಿಧಾನಕ್ಕೆ ಆಗಮನವಾಗಲಿದೆ. ರಾತ್ರಿ ವೆಳ್ಳಾಟಂ ಬಳಿಕ ಕುಟ್ಟಿಚಾತ ಮತ್ತು ಗುಳಿಗ ದೇವರ ವೆಳ್ಳಾಟಂ ನಡೆಯಲಿದೆ ಎಂದರು. ಏ.5 (ಶನಿವಾರ) ಗುಳಿಗ ಕೋಲ, ಕುಟ್ಟಿಚಾತ ಕೋಲ ಹಾಗೂ ತಿರುವಪ್ಪನ್ ಮತ್ತು ಮುತ್ತಪ್ಪ ತೆರೆ ಜರುಗಲಿದೆ. ಉತ್ಸವದ ಅಂಗವಾಗಿ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ಎಂ.ಕೆ ತಂಗ, ಚಿನ್ನ, ಕಾರ್ಯದರ್ಶಿ ರಾಜೀವನ್, ಉಪ ಕಾರ್ಯದರ್ಶಿ ಮನೋಹರ್, ಖಜಾಂಚಿ ಕಿಶೋರ್ ಪಿ.ಸಿ, ದೇವಾಲಯದ ಪೂಜಾರಿ ಹರಿದಾಸ್ ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.


ಮಾನವೀಯತೆ ತೋರಿದ ಆಶಾ ಕಾರ್ಯಕರ್ತೆ



ಆಶಾ ಕಾರ್ಯಕರ್ತೆ ಜ್ಯೋತಿ ಭಾಸ್ಕರ್ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಜೀವನ್‌ಗೆ ಸಹಾಯಹಸ್ತ ನೀಡುವ ಮೂಲಕ ಮಾನವೀಯತೆ ತೋರಿದರು.

ಸುಂಟಿಕೊಪ್ಪ,ಮಾ.31– ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಆಶಾ ಕಾರ್ಯಕರ್ತೆ ಜ್ಯೋತಿ ಭಾಸ್ಕರ್ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ರೋಗಿಗೆ ನೆರವಿನ ಹಸ್ತ ನೀಡುವ ಮೂಲಕ ಮಾನವೀಯತೆ ತೋರಿದರು. ಟಿಸಿಎಲ್ ತೋಟದ ಕಾರ್ಮಿಕ ಸುಜಾತರ ಪುತ್ರ ಜೀವನ್ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದರು. ಜ್ಯೋತಿ ಭಾಸ್ಕರ್ ಮೊಟ್ಟೆ ಸೇರಿದಂತೆ ಪೌಷ್ಠಿಕ ಆಹಾರ, ಮಧುಮೇಹ ಪರೀಕ್ಷೆ ಯಂತ್ರವನ್ನು ನೀಡಿ ಕುಟುಂಬಸ್ಥರಿಗೆ ಧೈರ್ಯ ತುಂಬಿ ಪ್ರತಿ ತಿಂಗಳು ಆರೈಕೆಗೆ ಸಹಾಯಹಸ್ತ ನೀಡುವುದಾಗಿಯೂ ಆಶ್ವಾಸನೆ ನೀಡಿದರು.

ಚಾ.ನಗರ ಜಿಲ್ಲೆಯಲ್ಲಿ ರಂಜಾನ್ ಆಚರಣೆ



ಮುಸ್ಲಿಂ ಬಾಂಧವರು ಚಾಮರಾಜನಗರದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಚಾಮರಾಜನಗರ,ಮಾ31– ಜಿಲ್ಲಾದ್ಯಂತ ಮುಸ್ಲಿಂ ಸಮುದಾಯದವರು ಸೋಮವಾರ ಈದ್ ಉಲ್ ಫಿತ್ರ್ (ರಂಜಾನ್) ಅನ್ನು ಶ್ರದ್ಧೆ, ಭಕ್ತಿ, ಸಂಭ್ರಮದಿಂದ ಆಚರಿಸಿ ತ್ಯಾಗ, ಶಾಂತಿಯ ಸಂಕೇತದ ಹಬ್ಬವನ್ನು ತಿಂಗಳ ಉಪವಾಸ ವ್ರತ ಅಂತ್ಯಗೊಳಿಸುವ ಮೂಲಕ ಭಕ್ತಿಯಿಂದ ಆಚರಿಸಿದರು.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಗ್ರಾಮೀಣ ಭಾಗದಲ್ಲಿ ಮುಸ್ಲಿಂ ಬಾಂಧವರು ಬೆಳಗ್ಗೆ ತಮ್ಮಲ್ಲಿನ ಈದ್ಗಾ ಮೈದಾನಗಳಲ್ಲಿ ಸಮಾವೇಶಗೊಂಡು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಹೊಸ ಧಿರಿಸಿನೊಂದಿಗೆ ಹಬ್ಬ ಸ್ವಾಗತಿಸಿದ ಮಂದಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಹರ್ಷ ವ್ಯಕ್ತಪಡಿಸಿದರು. ನಗರ ಸೇರಿದಂತೆ ಕೆಲವೆಡೆ ಸಾಮೂಹಿಕ ಪ್ರಾರ್ಥನೆ ನಂತರ ಸಮುದಾಯದವರೆಲ್ಲರೂ ಮೆರವಣಿಗೆ ನಡೆಸಿದರು. ಬಡ ಮಂದಿಗೆ ಕೈಲಾದಷ್ಟು ದಾನ ಮಾಡಿ ಹಿರಿಯರಿಂದ ಆಶೀರ್ವಾದ ಪಡೆದರು.

ಜಿಲ್ಲಾ ಕೇಂದ್ರದಲ್ಲಿನ ಸೋಮವಾರಪೇಟೆ ಬಳಿಯಲ್ಲಿರುವ ಈದ್ಗಾ ಮೈದಾನ ಹಾಗೂ ಪಾಲಿಟೆಕ್ನಿಕ್ ಕಾಲೇಜಿನ ಹಿಂಭಾಗದಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆಯನ್ನು ಶ್ರದ್ಧಾ, ಭಕ್ತಿಯಿಂದ ಸಲ್ಲಿಸಿದರು.

ಎರಡು ದಿನಗಳ ಹಿಂದೆಯೇ ಈದ್ಗಾವನ್ನು ಶುಚಿಗೊಳಿಸಲಾಗಿತ್ತು. ಈದ್ಗಾ ಮೈದಾನಕ್ಕೆ ತೆರಳಲಾಗದವರು ಮಸೀದಿಯಲ್ಲೇ ಪ್ರಾರ್ಥನೆ ಸಲ್ಲಿಸುವ ಮೂಲಕ ಹಬ್ಬ ಆಚರಿಸಿದರು. ಮುಸ್ಲಿಂ ಧರ್ಮ ಗುರುಗಳಾದ ಅಬ್ದುಲ್ ಹಸೀಬ್ ಅವರು ರಂಜಾನ್ ಹಬ್ಬದ ಮಹತ್ವದ ಸಂದೇಶ ಸಾರಿದರು.

ಪುಟ್ಟ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಲ್ಲರು ಹೊಸ ಬಟ್ಟೆ ತೊಟ್ಟು ಕಂಗೊಳಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಹೆಂಗಳೆಯರು ಹಬ್ಬದ ದಿನವೂ ತಮಗಿಷ್ಟವಾದ ವಸ್ತುಗಳ ವ್ಯಾಪಾರ, ವಹಿವಾಟಿನಲ್ಲಿ ತೊಡಗಿದ್ದರು.

ಪೊಲೀಸ್ ಬಂದೋಬಸ್ತ್ : ರಂಜಾನ್ ಆಚರಣೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ರಂಜಾನ್ ಸಾಮೂಹಿಕ ಪ್ರಾರ್ಥನೆ ನಡೆಯುವ ಪ್ರದೇಶದಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಭದ್ರತೆ ಕೈಗೊಂಡಿದ್ದು, ಕೆಲವು ಮುಖ್ಯ ರಸ್ತೆಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗಿತ್ತು.

ವಿಜೃಂಭಣೆಯಿಂದ ನಡೆದ ಬ್ರಹ್ಮ ರಥೋತ್ಸವ



ಶ್ರೀ ಮಲೆ ಮಹದೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಹನೂರು: ತಾಲೂಕಿನ ಶ್ರೀಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಯುಗಾದಿ ಜಾತ್ರೆಯ ಅಂಗವಾಗಿ ಮಹದೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ರಾಜ್ಯದ ವಿವಿಧೆಡೆಯಿಂದಲ್ಲದೆ ನೆರೆಯ ತಮಿಳುನಾಡಿನಿಂದ ಬಂದಿದ್ದ ಸಾವಿರಾರು ಭಕ್ತರು ಮಾದಪ್ಪನ ರಥೋತ್ಸವವನ್ನು ಕಣ್ತುಂಬಿಕೊಂಡರು. ರಥೋತ್ಸವದ ಅಂಗವಾಗಿ ಭಾನುವಾರ ಮುಂಜಾನೆಯಿಂದಲೇ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ಬೆಳಗ್ಗೆ 8 ಗಂಟೆಯಿಂದ 9ರ ನಡುವಿನ ಶುಭ ಲಗ್ನದಲ್ಲಿ ರಥೋತ್ಸವ ನಡೆಯಿತು. ಸಾವಿರಾರು ಭಕ್ತರು, ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ದೇವಾಲಯದ ಸುತ್ತ ಒಂದು ಬಾರಿ ತೇರನ್ನು ಎಳೆದರು. ಕಿಕ್ಕಿರಿದು ಸೇರಿದ್ದ ಭಕ್ತರು ನಾಣ್ಯ, ಹಣ್ಣು–ದವಸವನ್ನು ತೇರಿಗೆ ಎಸೆದು ಹರಕೆ ತೀರಿಸಿದರು. ಉಘೇ ಮಾದಪ್ಪ... ಮಾಯ್ಕಾರ ಮಾದಪ್ಪನಿಗೆ ಉಘೇ... ಎಂಬ ಘೋಷಣೆಗಳು ಬೆಟ್ಟದಾದ್ಯಂತ ಮಾರ್ದನಿಸಿತು.

ಪೊಲೀಸ್ ಬಂದೋಬಸ್ತ್: ದೇಗುಲದ ಆವರಣದಲ್ಲಿ ಬೆಳಗ್ಗೆ 6 ಗಂಟೆಯಿಂದಲೇ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಕಲ್ಪಿಸಲಾಗಿತ್ತು. ರಥೋತ್ಸವದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು, ಪ್ರಾಧಿಕಾರದ ನೌಕರರು, ದೇಗುಲದ ಅರ್ಚಕ ವೃಂದ ಪಾಲ್ಗೊಂಡಿದ್ದರು.

ನಗರಸಭಾ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ ನಿಧನ



ಚಾಮರಾಜನಗರ,ಮಾ31–ನಗರಸಭಾ ಮಾಜಿ ಅಧ್ಯಕ್ಷರು ಹಾಗೂ ದಲಿತ ಸಮುದಾಯದ ಹಿರಿಯ ಮುಖಂಡರಾದ ಎಸ್. ನಂಜುಂಡಸ್ವಾಮಿ (81) ಸೋಮವಾರ ನಿಧನರಾದರು.

ಅನಾರೋಗ್ಯ ನಿಮಿತ್ತ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಬೆಳಗ್ಗೆ 8.45ರಲ್ಲಿ ನಿಧನರಾಗಿದ್ದಾರೆ.

ಪುರಸಭೆಯಿಂದ ರಾಜಕೀಯ ಆರಂಭಿಸಿದ ಮೃತರು. ಸತತ 9 ಬಾರಿ ಪುರಸಭೆ ಮತ್ತು ನಗರಸಭಾ ಸದಸ್ಯರಾಗಿದ್ದರು. 3 ಬಾರಿ ನಗರಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ದಲಿತ ಸಮುದಾಯದ ಹಿರಿಯ ಮುಖಂಡರಾಗಿ ಹಾಗೂ ಕಟ್ಟ ಕಾಂಗ್ರೆಸ್ ಬೆಂಬಲರಾಗಿ ಜಿಲ್ಲೆಯ ಅಭಿವೃದ್ಧಿಗೆ ನಂಜುಂಡಸ್ವಾಮಿ ಅವರು ತಮ್ಮದೆ ಕೊಡುಗೆ ನೀಡಿದ್ದಾರೆ.

ಮೃತರು ಪತ್ನಿ ಗೌರಮ್ಮ, ಪುತ್ರರಾದ ಮಹೇಶ್ ಕುದರ್, ಉಮೇಶ್ ಕುದರ್, ಪುತ್ರಿಯರಾದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ. ರೇಣುಕಾದೇವಿ, ಡಾ.ನೀಲಾಂಬಿಕೆ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ.

ನಾಳೆ ಅಂತ್ಯಕ್ರಿಯೆ: ನಗರದ ಕರಿನಂಜನಪುರ ರಸ್ತೆಯಲ್ಲಿರುವ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ. ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಇತರ ಗಣ್ಯರು ಸಂತಾಪ ಸೂಚಿಸಿದ್ದಾರೆ.

ವೆಂಕಟಮ್ಮ



ಚಾಮರಾಜನಗರ: ತಾಲೂಕಿನ ಆಲೂರು ಹೊಮ್ಮ ಗ್ರಾಮದ ನಿವಾಸಿ ದಿ. ಪುಟ್ಟೇಗೌಡರ ಧರ್ಮಪತ್ನಿ ವೆಂಕಟಮ್ಮ(96) ಸೋಮವಾರ ನಿಧನರಾದರು.

ಮೃತರು ನಾಲ್ವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಸ್ವಗ್ರಾಮದಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರಿಯನಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆಯಾದ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ನಿರ್ದೇಶಕರು.

ಆಲೂರು,ಮಾ. 31–ಸಮೀಪದ ಕರಿಯನ ಕಟ್ಟೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಮಹೇಶ್ ಕೆ.ವಿ.ಉಪಾಧ್ಯಕ್ಷರಾಗಿ ಡಿ ನಾಗರಾಜ ಅವಿರೋಧವಾಗಿ ಆಯ್ಕೆಯಾದರು

ಸಂಘದ ಕಛೇರಿಯಲ್ಲಿ ನಡೆದ ಅಧ್ಯಕ್ಷ ಉಪಾಧ್ಯಕ್ಷ ಹಾಗೂ ನಿರ್ದೇಶಕರ ಸಭೆಯಲ್ಲಿ ನಿರ್ದೇಶಕರಾಗಿ ಚಿಕ್ಕಣ್ಣ ಪುಟ್ಟಸ್ವಾಮಿಗೌಡ ವೀರೇಗೌಡ ಕೆ.ವಿ.ರಮೇಶ್ ಕರಗಯ್ಯ ಆಯ್ಕೆಯಾದರು.

ಚುನಾವಣಾಧಿಕಾರಿಗಳಾಗಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಡಿ ಎಲ್ ಸುರೇಶ್ ಹಾಲಿ ಸದಸ್ಯರಾದ ಕೆ.ಬಿ ಚಿನ್ನಸ್ವಾಮಿ ಶಿವರಾಜು ಸಂಘದ ಮಾಜಿ ಅಧ್ಯಕ್ಷ ಕೆ.ವಿ.ವೀರಣ್ಣ ಮತ್ತು ಪಿ ನಾಗರಾಜು ಸಂಘದ ಕಾರ್ಯ ನಿರ್ವಾಹಕ ಸಿ.ರಾಜು ಹಾಲು ಉತ್ಪಾದಕರು ಗ್ರಾಮದ ಮುಖಂಡರು ಹಾಜರಿದ್ದರು.

ಕೆಎಸ್‌ಆರ್‌ಟಿಸಿ ಬಸ್–ಬೈಕ್ ಡಿಕ್ಕಿ: ಸವಾರ ಸಾವು



ಕೊಳ್ಳೇಗಾಲ,ಮಾ.31– ಪಟ್ಟಣದ ಹರಳೆ ಕ್ರಾಸ್ ಬಳಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಬೈಕ್ ನಡುವೆ ಡಿಕ್ಕಿ ಉಂಟಾದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಜರುಗಿದೆ.

ತಾಲ್ಲೂಕಿನ ಹರಳೆ ಗ್ರಾಮದ ನಾಗಬಸವಯ್ಯ (75) ಎಂಬಾತ ಮೃತ ದುರ್ದೈವಿ. ತನ್ನ ಬೈಕ್‌ನಲ್ಲಿ ಹರಳೆಯಿಂದ ಪಟ್ಟಣಕ್ಕೆ ಆಗಮಿಸುತ್ತಿದ್ದಾಗ ಮುಖ್ಯ ರಸ್ತೆಯ ಕ್ರಾಸ್ ಬಳಿ ಬೈಕ್ ತಿರುಗಿಸುವ ವೇಳೆ ಬೆಂಗಳೂರು ಕಡೆಯಿಂದ ಬಂದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಸವಾರ ತೀವ್ರವಾಗಿ ಗಾಯಗೊಂಡ ಬೈಕ್ ಸವಾರನನ್ನು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸುವಷ್ಟರಲ್ಲಿ ಮಾರ್ಗಮಧ್ಯೆ ಸಾವಿಗೀಡಾದರು ಎನ್ನಲಾಗಿದೆ

ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ. ಶವವನ್ನು ಶವಾಗಾರದಲ್ಲಿ ಇರಿಸಿದ್ದು, ನಾಳೆ ಮರಣೋತ್ತರ ಪರೀಕ್ಷೆ ನಡೆಯಲಿದೆ.

ಸತ್ಯಯುಗದ ಮುನ್ಸೂಚನೆಯ ಮಹಾನ್ ಪರ್ವವೇ ಯುಗಾದಿ



ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ, ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀ ಜೀ ಯುಗಾದಿಯ ಕಾರ್ಯಕ್ರಮ ಉದ್ಘಾಟಿಸಿದರು.

ಚಾಮರಾಜನಗರ: ಕಲಹದ ಕಲಿಯುಗವು ತನ್ನ ಚರಮ ಸೀಮೆಯನ್ನು ತಲುಪಿದ್ದು, ಸತ್ಯಯುಗವೂ ಬರಲಿರುವ ಸೂಚನೆಯನ್ನು ತಿಳಿಸುವಂತಹ ಈ ಮಹಾನ್ ಪರ್ವವೇ ಯುಗಾದಿ ಎಂದು ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ, ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀ ಜೀಯವರು ಹೇಳಿದ್ದಾರೆ.

ಅವರು ಪಟ್ಟಣದ ಪ್ರಕಾಶ ಭವನದಲ್ಲಿ ಏರ್ಪಡಿಸಲಾಗಿದ್ದ ಯುಗಾದಿಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ಯುಗಾದಿ ಎಂದರೆ ಯುಗದ ಆದಿ ವರ್ತಮಾನ ಕಲ್ಯಾಣಕಾರಿ ಪುರುಷೋತ್ತಮ ಸಂಗಮಯುಗ. ಕಲಿಯುಗ ಇನ್ನೂ ಹೋಗಿಲ್ಲ ಸತ್ಯಯುಗ ಇನ್ನೂ ಬಂದಿಲ್ಲ ಇದರ ಮಧ್ಯ ಇರುವುದೇ ಸಂಗಮಯುಗ, ಜೀವನವು ಸುಖ–ದುಃಖಗಳು ನಿಂದನೆ ಮತ್ತು ಹೊಗಳಿಕೆಗಳು, ಲಾಭ ಮತ್ತು ನಷ್ಟಗಳ ಸಮ್ಮಿಶ್ರಣ ಎಂದು ಅರ್ಥ ಮಾಡಿಕೊಳ್ಳುವವರಿಗೆ ದೇವರು ಸ್ನೇಹಿತನಾಗುತ್ತಾನೆ ಎಂದು ತಿಳಿಸಿ ಎಲ್ಲರಿಗೂ ಬೇವು ಬೆಲ್ಲವನ್ನು ಹಂಚಿದರು.

ಕಾರ್ಯಕ್ರಮದಲ್ಲಿ ಓಂ ಶಾಂತಿ ನ್ಯೂಸ್ ಸರ್ವಿಸ್‌ನ ಬಿ.ಕೆ ಆರಾಧ್ಯ ನಗರಸಭಾ ಆರೋಗ್ಯ ಅಧಿಕಾರಿ ಪುಷ್ಪ ಗೀತಾ, ನ್ಯಾಯಾಂಗ ಇಲಾಖೆಯ ಶ್ರೀನಿವಾಸ್, ಇಂಜಿನಿಯರ್ ಮಹೇಶ್, ಲಕ್ಷ್ಮಿನರಸಿಂಹ ಪ್ರಸಾದ್, ಆಶಾ ಗುರುಸಿದ್ದಯ್ಯ ಸುಂದರ್ ಹಾಜರಿದ್ದರು.

ಪಾರ್ಟಿ ಮಾಡುತ್ತಿದ್ದ ಫಾರಂಹೌಸ್ ಮೇಲೆ ದಾಳಿ

ಅನುಮತಿ ಮೀರಿ ಹೊಂದಿದ್ದ ಲಿಕ್ಕರ್ ವಶ; ಪ್ರಕರಣ ದಾಖಲು

ಮೈಸೂರು, ಮಾ. 31(ಆರ್‌ಕೆ)– ಧ್ವನಿವರ್ಧಕ ಅಳವಡಿಸಿಕೊಂಡು ಭಾರೀ ಶಬ್ದದೊಂದಿಗೆ ಪಾರ್ಟಿ ಮಾಡುತ್ತಿದ್ದ ಫಾರಂ ಹೌಸ್‌ವೊಂದರ ಮೇಲೆ ದಾಳಿ ಮಾಡಿದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು, ಅನುಮತಿ ನೀಡಿದ್ದ ಪ್ರಮಾಣಕ್ಕಿಂತ ಅಧಿಕ ಲಿಕ್ಕರ್ ಹೊಂದಿದ್ದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರಿನ ಶ್ರೀರಾಂಪುರ ಸಮೀಪ ಪುರಸಯ್ಯನಹುಂಡಿ ಬಳಿ ಹೆಚ್.ಡಿ.ಕೋಟೆ ರಸ್ತೆಯ ಫಾರಂಹೌಸ್‌ನಲ್ಲಿ ಭಾರೀ ಸದ್ದು ಮಾಡಿಕೊಂಡು ಸಂತೋಷಕೂಟ ನಡೆಯುತ್ತಿದೆ ಎಂದು ಸಾರ್ವಜನಿಕರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ದಕ್ಷಿಣ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಶೇಖರ್ ಹಾಗೂ ಸಿಬ್ಬಂದಿ, ಶನಿವಾರ ರಾತ್ರಿ ಸುಮಾರು 11.30 ಗಂಟೆಯಲ್ಲಿ ದಾಳಿ ನಡೆಸಿದಾಗ 5 ಭಾರೀ ಧ್ವನಿವರ್ಧಕ ಪೆಟ್ಟಿಗೆಗಳನ್ನು ಅಳವಡಿಸಿಕೊಂಡು ಪಾರ್ಟಿ ನಡೆಸುತ್ತಿದ್ದುದು ಕಂಡುಬಂದಿತು.

ಪೊಲೀಸರು ಧಾವಿಸುತ್ತಿದ್ದಂತೆಯೇ ಕೆಲವರು ಸ್ಥಳದಿಂದ ಕಾಲ್ಕಿತ್ತರೆ, ಮತ್ತೆ ಕೆಲವರು ವಿವಾಹ ಮಹೋತ್ಸವದ ಕಾರಣ ತಾವು ಚಿಕ್ಕ ಸಂತೋಷಕೂಟ ಮಾಡಿಕೊಳ್ಳುತ್ತಿದ್ದೇವೆಯೇ ಹೊರತು, ಬೇರೆ ಯಾವುದೇ ಅಕ್ರಮ ಚಟುವಟಿಕೆ ನಡೆಸುತ್ತಿಲ್ಲ ಎಂದರು.

ಫಾರಂಹೌಸ್ ಅನ್ನು ಪರಿಶೀಲಿಸಿದಾಗ ಅನುಮತಿ ಪ್ರಮಾಣಕ್ಕಿಂತ ಹೆಚ್ಚು ಲಿಕ್ಕರ್ ಸ್ಥಳದಲ್ಲಿ ಪತ್ತೆಯಾದ ಕಾರಣ ಅಬಕಾರಿ ಕಾಯ್ದೆಯನ್ವಯ ಅಕ್ರಮ ಸಂಗ್ರಹದಡಿ ಪ್ರಕರಣ ದಾಖಲಿಸಿದ ಪೊಲೀಸರು, ಮದ್ಯವನ್ನು ವಶಪಡಿಸಿಕೊಂಡಿದ್ದಾರೆ.

ಭಾರೀ ಸದ್ದು ಮಾಡಿಕೊಂಡು ದೊಡ್ಡ ಪ್ರಮಾಣದ ಪಾರ್ಟಿ ನಡೆಯುತ್ತಿದೆ ಎಂದು ಸಾರ್ವಜನಿಕರು ಮಾಹಿತಿ ನೀಡಿದ ಕಾರಣ ತಾವು ದಾಳಿ ನಡೆಸಿದಾಗ ನಿಯಮಬಾಹಿರವಾಗಿ ಹೊಂದಿದ್ದ ಸ್ವಲ್ಪ ಪ್ರಮಾಣದ ಮದ್ಯ ಸಿಕ್ಕಿತು. ಆ ಸಂಬಂಧ ಪ್ರಕರಣ ದಾಖಲಿಸಿ ಫಾರಂಹೌಸ್ ಮಾಲೀಕರು ಮತ್ತು ಅಲ್ಲಿದ್ದವರಿಗೆ ತಿಳುವಳಿಕೆ ನೀಡಿದ್ದೇವೆ ಎಂದು ಇನ್‌ಸ್ಪೆಕ್ಟರ್ ಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ಕಾಳಿದಾಸ ರಸ್ತೆಯಲ್ಲಿ ಕಲ್ಯಾಣ್ ಜುವೆಲರ್ಸ್ ಮಳಿಗೆ ಉದ್ಘಾಟಿಸಿದ ಬಾಲಿವುಡ್ ಖ್ಯಾತ ನಟಿ ಶಿಲ್ಪಾಶೆಟ್ಟಿ



ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ನೂತನವಾಗಿ ಆರಂಭಗೊಂಡಿರುವ ಕಲ್ಯಾಣ್ ಜುವೆಲರ್ಸ್‌ನ 2ನೇ ಮಳಿಗೆಗೆ ಖ್ಯಾತ ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಕುಂದ್ರಾ ಸೋಮವಾರ ಚಾಲನೆ ನೀಡಿದರು.

ಮೈಸೂರು, ಮಾ.31(ಎಂಕೆ)– ಮೈಸೂರಿನ ಕಾಳಿದಾಸ ರಸ್ತೆ (ಕೆ.ಡಿ. ರೋಡ್)ಯಲ್ಲಿ ನೂತನವಾಗಿ ಆರಂಭಗೊಂಡಿರುವ ಕಲ್ಯಾಣ್ ಜುವೆಲರ್ಸ್‌ನ 2ನೇ ಮಳಿಗೆಗೆ ಖ್ಯಾತ ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಕುಂದ್ರಾ ಸೋಮವಾರ ಚಾಲನೆ ನೀಡಿದರು.

ಕಿಕ್ಕಿರಿದು ತುಂಬಿದ್ದ ಅಭಿಮಾನಿಗಳತ್ತ ಕೈಬಿಸಿ, ಕಿರುನಗೆ ಬೀರುತ್ತಾ ಆಗಮಿಸಿದ ಅವರು, ಟೇಪ್ ಕತ್ತರಿಸಿ, ನೂತನ ಶೋರೂಂಗೆ ಕಾರ್ಯಾರಂಭಕ್ಕೆ ಚಾಲನೆ ನೀಡಿದರು. ಇದಕ್ಕೂ ಮುನ್ನ ಶೋರೂಂ ಎದುರಿದ್ದ ವೇದಿಕೆಗೆ ಆಗಮಿಸಿದ ಅವರು, ನಾನು ಕನ್ನಡದವಳು ಎಂದು ಮಾತು ಆರಂಭಿಸಿದರಲ್ಲದೆ ಮೈಸೂರಿನಲ್ಲಿ ಕಲ್ಯಾಣ್ ಜುವೆಲರ್ಸ್‌ನ 2ನೇ ಹೊಸ ಶೋರೂಂ ಆರಂಭಿಸಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನಗೆ ಮೈಸೂರೆಂದರೆ ಅಚ್ಚುಮೆಚ್ಚು. ಮೈಸೂರು ಪಾಕ್ ನನಗೆ ಇಷ್ಟ. ಮುಂದಿನ ದಿನಗಳಲ್ಲಿ ಕನ್ನಡ ಸಿನಿಮಾಗಳಲ್ಲಿ ನಟಿಸುವುದಾಗಿಯೂ ತಿಳಿಸಿದರು. ಈ ವೇಳೆ ಕಲ್ಯಾಣ್ ಜುವೆಲರ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ರಮೇಶ್ ಕಲ್ಯಾಣರಾಮನ್ ಮತ್ತಿತರರಿದ್ದರು.

ಶೇ.50 ರಿಯಾಯ್ತಿ!: ಕಾಳಿದಾಸ ರಸ್ತೆಯಲ್ಲಿ ನೂತನವಾಗಿ ಆರಂಭವಾಗಿರುವ ಕಲ್ಯಾಣ್ ಜುವೆಲರ್ಸ್‌ನಲ್ಲಿ ಪ್ರತೀ ಚಿನ್ನಾಭರಣದ ಮೇಕಿಂಗ್ ಚಾರ್ಜ್ ಮೇಲೆ ಫ್ಲಾಟ್ ಶೇ.50 ರಷ್ಟು ರಿಯಾಯ್ತಿ ನೀಡಲಾಗಿದೆ. ಕಲ್ಯಾಣ್ ಸ್ಪೆಷಲ್ ಗೋಲ್ಡ್ ರೇಟ್‌ನೊಂದಿಗೆ ಅಪರೂಪದ ಡಿಸೈನ್‌ಗಳು ಲಭ್ಯವಿವೆ. ಮುಹೂರ್ತ್ (ವೆಡ್ಡಿಂಗ್ ಜುವೆಲರಿ ಲೈನ್), ಮುದ್ರಾ(ಕೈಯಿಂದ ಮಾಡಿದ ಆಂಟಿಕ್ ಆಭರಣ), ನಿಮಾಹ್ (ಟೆಂಪಲ್ ಜುವೆಲರಿ), ಗ್ಲೋ (ಡ್ಯಾನ್ಸಿಂಗ್ ಡೈಮಂಡ್ಸ್), ಝಿಯಾಹ್ (ಸಾಲಿಟೇರ್ ಲೈಕ್ ಡೈಮಂಡ್ ಜುವೆಲರಿ), ಅನೋಖಿ(ಅನ್ ಕಟ್ ಡೈಮಂಡ್ಸ್), ಅಪೂರ್ವ(ವಿಶೇಷ ಸಂದರ್ಭಗಳಿಗಾಗಿ ಸಿದ್ಧಗೊಳಿಸಿರುವ ಡೈಮಂಡ್ಸ್), ಅಂತರಾ (ವೆಡ್ಡಿಂಗ್ ಡೈಮಂಡ್ಸ್), ಹೇರಾ (ದೈನಂದಿನ ಧರಿಸುವ ಡೈಮಂಡ್ಸ್), ರಂಗ್ (ಪ್ರೆಷಿಯಸ್ ಸ್ಟೋನ್ಸ್ ಜುವೆಲರಿ) ಹಾಗೂ ಲೀಲಾ(ಕಲರ್ಡ್ ಸ್ಟೋನ್ಸ್ ಮತ್ತು ಡೈಮಂಡ್ ಜ್ಯುವೆಲ್ಲರಿ) ಉತ್ಪನ್ನಗಳು ಕೂಡ ಲಭ್ಯವಿವೆ.

ಮೈಸೂರಿನ ಪದ್ಮಪ್ರಿಯಾಗೆ ಎಸ್.ಎಂ.ಕೃಷ್ಣ ಸ್ಮಾರಕ ಟೆನ್ನಿಸ್ ಸ್ಕಾಲರ್‌ಶಿಪ್ ಅವಾರ್ಡ್



ಎಸ್.ಎಂ.ಕೃಷ್ಣ ಸ್ಮಾರಕ ಟೆನ್ನಿಸ್ ಸ್ಕಾಲರ್‌ಶಿಪ್ ಅವಾರ್ಡ್ ಪಡೆದ ಪದ್ಮಪ್ರಿಯಾ ಅಂತರರಾಷ್ಟ್ರೀಯ ಟೆನ್ನಿಸ್ ತಾರೆ ರೋಹನ್ ಬೋಪಣ್ಣ ಅವರೊಂದಿಗೆ ಇರುವುದು.

ಮೈಸೂರು,ಮಾ.31(ಎಂಟಿವೈ)– ಟೆನ್ನಿಸ್‌ನಲ್ಲಿ 12 ಮತ್ತು 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಮುಂಚೂಣಿ ಆಟಗಾರ್ತಿಯಾಗಿ ಗುರುತಿಸಿಕೊಂಡಿರುವ ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್ ಅವರಿಗೆ ಕರ್ನಾಟಕ ರಾಜ್ಯ ಲಾನ್ ಟೆನ್ನಿಸ್ ಅಸೋಸಿಯೇಷನ್ (ಕೆಎಸ್‌ಎಲ್‌ಟಿಎ) ಎಸ್.ಎಂ.ಕೃಷ್ಣ ಸ್ಮಾರಕ ಟೆನ್ನಿಸ್ ಸ್ಕಾಲರ್‌ಶಿಪ್ ಅವಾರ್ಡ್ ನೀಡಿದೆ.

ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿ, 12 ಹಾಗೂ 14 ವರ್ಷದೊಳಗಿನ ಪಂದ್ಯಾವಳಿಯಲ್ಲಿ ವಿವಿಧ ಬಹುಮಾನ ಪಡೆದು ಸಾಧನೆ ಮಾಡಿದ ಹಿನ್ನೆಲೆಯಲ್ಲಿ ದಿ ಕರ್ನಾಟಕ ಸ್ಟೇಟ್ ಲಾನ್ ಟೆನ್ನಿಸ್ ಅಸೋಸಿಯೇಷನ್ ಎಸ್.ಎಂ.ಕೃಷ್ಣ ಸ್ಮಾರಕ ಟೆನ್ನಿಸ್ ಸ್ಕಾಲರ್‌ಶಿಪ್ ಅವಾರ್ಡ್ –2024 ನೀಡಿದೆ. ಇತ್ತೀಚೆಗೆ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿನ ಎಸ್.ಎಂ.ಕೃಷ್ಣ ಟೆನ್ನಿಸ್ ಸ್ಟೇಡಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಲಾನ್ ಟೆನ್ನಿಸ್ ಅಸೋಸಿಯೇಷನ್ ಅಧ್ಯಕ್ಷರೂ ಆದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ, ಅಂತರರಾಷ್ಟ್ರೀಯ ಟೆನ್ನಿಸ್ ಪಟು ರೋಹನ್ ಬೋಪಣ್ಣ, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಕೆ.ಗೋವಿಂದರಾಜ್, ಎಸ್.ಎಂ.ಕೃಷ್ಣ ಅವರ ಪತ್ನಿ ಪ್ರೇಮಾ ಎಸ್.ಎಂ.ಕೃಷ್ಣ ಹಾಗೂ ಇನ್ನಿತರರು ಪದ್ಮಪ್ರಿಯಾ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಉದಯೋನ್ಮುಖ ಟೆನ್ನಿಸ್ ಪಟುಗಳಿಗೆ ವಿವಿಧ ಪ್ರಶಸ್ತಿ ನೀಡಿ ಗೌರವಿಸಿದರು. ಪದ್ಮಪ್ರಿಯಾ ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಹಾಗೂ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಅವರ ಪುತ್ರಿಯಾಗಿದ್ದಾರೆ.

4 ವರ್ಷಗಳಿಂದ ಬಡ ಕಲಾವಿದರ ಪಿಂಚಣಿಗೆ ಅನುಮೋದನೆ ನೀಡದ ಸರಕಾರ

ಬೆಂಗಳೂರು, ಮಾ.31– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮಾಸಾಶನಕ್ಕೆ ವಯೋವೃದ್ಧ ಬಡ ಕಲಾವಿದರನ್ನು ಆಯ್ಕೆ ಮಾಡಿದ್ದು, ಇದಕ್ಕೆ ಸರಕಾರ ನಾಲ್ಕು ವರ್ಷಗಳಿಂದ ಅನುಮೋದನೆ ನೀಡಿಲ್ಲ. ಹೀಗಾಗಿ ಸಾವಿರಾರು ಕಲಾವಿದರು ಇಳಿವಯಸ್ಸಿನಲ್ಲಿ ಪಿಂಚಣಿಗಾಗಿ ಪರಿತಪಿಸುವಂತಾಗಿದೆ.

ಆರ್ಥಿಕವಾಗಿ ದುರ್ಬಲವಾಗಿರುವ ವಯೋವೃದ್ಧ ಬಡ ಕಲಾವಿದರಿಗೆ ಇಲಾಖೆಯು ಮಾಸಾಶನ ನೀಡುತ್ತದೆ. ಪ್ರತಿ ವರ್ಷವೂ ಮಾಸಾಶನಕ್ಕೆ ಅರ್ಹ ಕಲಾವಿದರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ, ಅನುಮೋದನೆ ಕೋರಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತಿದೆ. ಆದರೆ, ಕಳೆದ ನಾಲ್ಕು ವರ್ಷಗಳಿಂದ ಅನುಮೋದನೆ ನೀಡುತ್ತಿಲ್ಲ. ಹೀಗಾಗಿ ಪ್ರತಿ ವರ್ಷ 800 ರಿಂದ ಒಂದು ಸಾವಿರ ಮಂದಿ ಮಾಸಾಶನದಿಂದ ವಂಚಿತರಾಗುವಂತಾಗಿದೆ.

ಹಿಂದಿನ ಬಿಜೆಪಿ ಸರಕಾರದ ಅವಧಿಯ 2021–22, 2022–23 ಹಾಗೂ 2023–24ನೇ ಸಾಲಿನಲ್ಲಿ ಕಲಾವಿದರನ್ನು ಸಂದರ್ಶಿಸಿ ಪೂರ್ವಾಪರ ಪರಿಶೀಲಿಸಿ, ವಾರ್ಷಿಕ ಒಂದು ಸಾವಿರದಂತೆ ಎರಡೂವರೆ ಸಾವಿರ ಕಲಾವಿದರ ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು. ಆದರೆ ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆಯದ ಕಾರಣ ಆಯ್ಕೆ ಪಟ್ಟಿ ನನೆಗುದಿಗೆ ಬಿದ್ದಿದೆ. ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರವೂ ಈ ಪಟ್ಟಿಗೆ ಅನುಮೋದನೆ ನೀಡಿಲ್ಲ.

ರಾಜ್ಯದಲ್ಲಿ ಕಲಾವಿದರಿಗೆ ನೀಡುತ್ತಿದ್ದ ಮಾಸಾಶವನ್ನು 2 ಸಾವಿರ ರೂ. ನಿಂದ 3 ಸಾವಿರ ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಮಧ್ಯೆ ಹೊಸದಾಗಿ 2023–24 ಹಾಗೂ 2024–25ನೇ ಸಾಲಿನಲ್ಲಿ ಸಾವಿರಕ್ಕೂ ಹೆಚ್ಚು ಅರ್ಜಿಗಳು ಮಾಸಾಶನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಲ್ಲಿಸಲ್ಪಟ್ಟಿವೆ. ಒಂದೆಡೆ ಬಾಕಿ ಪಟ್ಟಿಗೆ ಅನುಮೋದನೆ ದೊರೆಯುತ್ತಿಲ್ಲ. ಮತ್ತೊಂದೆಡೆ ಹೊಸ ಪಟ್ಟಿಯೂ ಅಂತಿಮಗೊಳ್ಳುತ್ತಿಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುವವರು ಕಂದಾಯ ಇಲಾಖೆ ಅಥವಾ ಇತರೆ ಯಾವುದೇ ಇಲಾಖೆಯಿಂದ ಮಾಸಾಶನ ಪಡೆಯುತ್ತಿರಬಾರದು. ಅಂತಹವರಿಗೆ ಮಾತ್ರ ಮಾಸಾಶನ ನೀಡಲಾಗುವುದು. ಸದ್ಯ ಎರಡು ಸಾವಿರ ಮಂದಿ ಪಟ್ಟಿಯಲ್ಲಿದ್ದಾರೆ. ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆಯಾದ ಕೂಡಲೇ ಮಾಸಾಶನ ನೀಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಗೆ ತಡೆ

ಮೈಸೂರು, ಮಾ.31(ಎಸ್‌ಪಿಎನ್)– ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕಾತಿಗಾಗಿ ಹೊಸದಾಗಿ ಅಧಿಸೂಚನೆ ಹೊರಡಿಸುವುದನ್ನು ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ(ಸೇವಾ ನಿಯಮಗಳು) ಮಾ.29ರಂದು ಸುತ್ತೋಲೆ ಮೂಲಕ ತಡೆ ನೀಡಿದೆ. 2024ರ ನ.11ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿಗೆ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸದಂತೆ ಸೂಚಿಸಲಾಗಿದೆ.

ಆದಾಗ್ಯೂ ಕೆಲವೊಂದು ನೇಮಕಾತಿ ಪ್ರಾಧಿಕಾರಿಗಲು ಈ ಸೂಚನೆಗಳನ್ನು ಉಲ್ಲಂಘಿಸಿ ನೇರ ನೇಮಕಾತಿ ಮಾಡಲು ಹೊಸ ಅಧಿಸೂಚನೆಗಳನ್ನು ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ 2024ರ ನ.11ರ ಸುತ್ತೋಲೆಯನ್ನು ಉಲ್ಲಂಘಿಸುವ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಆಯಾಯ ಆಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಸೂಚಿಸಿ, ಕಟ್ಟುನಿಟ್ಟಾಗಿ ಪಾಲಿಸುವಂತೆ ಸಿಆಸುಇಲಾಖೆ(ಸೇವಾ ನಿಯಮಗಳು) ಉಪ ಕಾರ್ಯದರ್ಶಿ–1 ಉಮಾ ವರದಯ್ಯ ಮಾ.29ರಂದು ಸುತ್ತೋಲೆ ಹೊರಡಿಸಿದ್ದಾರೆ.

ಮೋದಿ ಖಾಸಗಿ ಕಾರ್ಯದರ್ಶಿಯಾಗಿ ಯುವ ಐಎಫ್‌ಎಸ್ ಅಧಿಕಾರಿ ನಿಧಿ ತಿವಾರಿ ನೇಮಕ



ನವದೆಹಲಿ: ಯುವ ಐಎಫ್‌ಎಸ್ ಅಧಿಕಾರಿ ನಿಧಿ ತಿವಾರಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರ ಖಾಸಗಿ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

2014 ರ ಬ್ಯಾಚ್‌ನ ಭಾರತೀಯ ವಿದೇಶಾಂಗ ಸೇವೆ ಅಧಿಕಾರಿಯಾಗಿರುವ ನಿಧಿ ತಿವಾರಿ ಅವರನ್ನು ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ತಕ್ಷಣದಿಂದ ಜಾರಿಗೆ ಬರುವಂತೆ ನೇಮಕಾತಿಯನ್ನು ಅನುಮೋದಿಸಿದೆ.

ವಾರಣಾಸಿಯ ಮೆಹಮುರ್ಗಂಜ್ ಮೂಲದ ನಿಧಿ ತಿವಾರಿ 2013 ರ ನಾಗರಿಕ ಸೇವಾ ಪರೀಕ್ಷೆಯಲ್ಲಿ 96ನೇ ರ್‍ಯಾಂಕ್ ಗಳಿಸಿದ್ದರು. ವಾರಣಾಸಿ ಲೋಕಸಭಾ ಕ್ಷೇತ್ರವನ್ನು ಪ್ರಧಾನಿ ಮೋದಿ 2014ರಿಂದ ಪ್ರತಿನಿಧಿಸುತ್ತಿದ್ದಾರೆ.

2016ರಲ್ಲಿ ಅತ್ಯುತ್ತಮ ತರಬೇತಿ ಅಧಿಕಾರಿ ಮತ್ತು ಪ್ರಬಂಧಕ್ಕೆ ರಾಯಭಾರಿ ಬಿಮಲ್ ಸನ್ಯಾಲ್ ಸ್ಮಾರಕ ಪದಕವನ್ನು ನೀಡಿ ಪುರಸ್ಕರಿಸಲಾಗಿತ್ತು. ತಿವಾರಿ ಅವರು ಜನವರಿ 6, 2023 ರಿಂದ ಪ್ರಧಾನ ಮಂತ್ರಿ ಕಚೇರಿಯಲ್ಲಿ ಉಪ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು 2022ರಲ್ಲಿ ಪ್ರಧಾನ ಮಂತ್ರಿ ಕಚೇರಿಯಲ್ಲಿ ಅಧೀನ ಕಾರ್ಯದರ್ಶಿಯಾಗಿ ಸೇರ್ಪಡೆಯಾದರು.

ಈ ಹಿಂದೆ ವಿದೇಶಾಂಗ ಸಚಿವಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ನಿಶ್ಶಸ್ತ್ರೀಕರಣ ಮತ್ತು ಅಂತರರಾಷ್ಟ್ರೀಯ ಭದ್ರತಾ ವ್ಯವಹಾರಗಳ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದರು. ತಿವಾರಿ ಅವರು ಪ್ರಧಾನಿ ಸಚಿವಾಲಯದಲ್ಲಿ ಮೂರು ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ.

2013ರಲ್ಲಿ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮೊದಲು ಅವರು ವಾರಣಾಸಿಯಲ್ಲಿ ಸಹಾಯಕ ಆಯುಕ್ತರಾಗಿ (ವಾಣಿಜ್ಯ ತೆರಿಗೆ) ಕೆಲಸ ಮಾಡುತ್ತಿದ್ದರು. ತಮ್ಮ ಕೆಲಸದೊಂದಿಗೆ ತಯಾರಿ ನಡೆಸಿ ಪರೀಕ್ಷೆಯನ್ನು ತೇರ್ಗಡೆಯಾಗಿದ್ದರು.

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರಿಗೆ ವರದಿ ಮಾಡುವ 'ವಿದೇಶಾಂಗ ಮತ್ತು ಭದ್ರತೆ' ವಿಭಾಗದಲ್ಲಿ ಉಪ ಕಾರ್ಯದರ್ಶಿಯಾಗಿ ನಿಧಿ ತಿವಾರಿ ಕೆಲಸ ಮಾಡಿದ್ದಾರೆ. ಸದ್ಯ ವಿವೇಕ್ ಕುಮಾರ್ ಮತ್ತು ಹಾರ್ದಿಕ್ ಸತೀಶ್ಚಂದ್ರ ಶಾ ಅವರು ಮೋದಿ ಅವರ ಖಾಸಗಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ.

ಏ.3ರಂದು ಅಮೃತ ವಿಶ್ವವಿದ್ಯಾಪೀಠಂನಲ್ಲಿ ಸಿನಿರಮಾ 7ನೇ ರಾಷ್ಟ್ರ ಮಟ್ಟದ ಕಿರುಚಿತ್ರೋತ್ಸವ



ಸೀತಾರಾಮ್

ಮೈಸೂರು, ಮಾ. 31– ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್‌ನ ದೃಶ್ಯ ಸಂವಹನ ವಿಭಾಗವು ಸಿನಿರಮಾ –2025, 7ನೇ ರಾಷ್ಟ್ರ ಮಟ್ಟದ ಕಿರುಚಿತ್ರೋ ತ್ಸವನ್ನು ಏ. 3 ರಂದು ಬೋಗಾದಿ ಎರಡನೇ ಹಂತದಲ್ಲಿರುವ ಅಮೃತ ವಿಶ್ವ ವಿದ್ಯಾಪೀಠಂನ ಆವರಣದಲ್ಲಿ ಆಯೋಜಿಸಿದೆ.

ಉದ್ಘಾಟನಾ ಸಮಾರಂಭವು ಬೆಳಗ್ಗೆ 9.30 ಗಂಟೆಗೆ ನಡೆಯಲಿದ್ದು, ಕನ್ನಡದ ಖ್ಯಾತ ನಿರ್ದೇಶಕ, ನಟ ಹಾಗೂ ಬರಹಗಾರ ಟಿ. ಎನ್.ಸೀತಾರಾಮ್ ಕಿರುಚಿತ್ರೋತ್ಸವವನ್ನು ಉದ್ಘಾಟಿಸಲಿದ್ದಾರೆ. ಕಿರುಚಿತ್ರೋತ್ಸವದ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ಸಂಜೆ 5.30 ಗಂಟೆಗೆ ನಡೆಯಲಿದ್ದು, ಕನ್ನಡ ಚಿತ್ರರಂಗದ ಉದಯೋನ್ಮುಖ ನಟಿ ಮಿಲನ ನಾಗರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರಿನ ಡಿಆರ್‌ಸಿ ಮಲ್ಟಿಪ್ಲೆಕ್ಸ್ ಸಿನೆಮಾಸ್‌ನ ಮಾಲೀಕರಾದ ಶ್ರೀಮತಿ ವೈಶಾಲಿ ಹನುಮಂತ್ ಹಾಗೂ ಸಿ. ಆರ್. ಹನುಮಂತ್ ಗೌರವ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಈ ಕಿರುಚಿತ್ರೋತ್ಸವಕ್ಕೆ ದೇಶಾದ್ಯಂತ ಆಸಕ್ತರಿಂದ ಕಿರುಚಿತ್ರಗಳನ್ನು ಆಹ್ವಾನಿಸಲಾಗಿತ್ತು. ಚಿತ್ರ ನಿರ್ಮಾಣದಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳು ಹಾಗೂ ಯುವ ನಿರ್ದೇಶಕರಿಗೆ ಸಿನಿರಮಾ ಒಂದು ವೇದಿಕೆಯಾಗಿದ್ದು, ಅವರ ಕೌಶಲ್ಯ ಹಾಗೂ ನೈಪುಣ್ಯತೆಯನ್ನು ಮತ್ತಷ್ಟು ಕುಶಲಗೊಳಿಸಲು ಅವಕಾಶವನ್ನು ಕೊಡುತ್ತಿದೆ. ಈ ಕಿರುಚಿತ್ರೋತ್ಸವದಲ್ಲಿ ವಿಜೇತರಾದ ಅತ್ಯುತ್ತಮ ಮೂರು ಚಿತ್ರಗಳಿಗೆ ನಗದು ಬಹುಮಾನವನ್ನು ನೀಡಲಾಗುವುದು. ಇದರ ಜೊತೆಗೆ ಅತ್ಯುತ್ತಮ ನಿರ್ದೇಶಕ, ಅತ್ಯುತ್ತಮ ಚಿತ್ರಕಥೆ, ಅತ್ಯುತ್ತಮ ನಟ,ನಟಿ, ಅತ್ಯುತ್ತಮ ಸಿನೆಮಾಟೋಗ್ರಾಫರ್ ಹಾಗೂ ಅತ್ಯುತ್ತಮ ಎಡಿಟರ್ ಎನ್ನುವ ವಿಶೇಷ ವಿಭಾಗ ಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗುವುದು.

ಈ ಬಾರಿಯ ಸಿನಿರಮಾ ಕಿರುಚಿತ್ರೋತ್ಸವದಲ್ಲಿಯೂ ಕೂಡಾ 60 ಅವರ್ ಫಿಲ್ಮ್ ಮೇಕಿಂಗ್ ಚಾಲೆಂಜ್ ಅನ್ನು ನಡೆಸಲಾಗಿದ್ದು, ಈ ವಿಭಾಗದಲ್ಲಿ ವಿಜೇತರಾದ ಮೂರು ಅತ್ಯುತ್ತಮ ಚಿತ್ರಗಳಿಗೂ ನಗದು ಬಹುಮಾನ ನೀಡಲಾಗುವುದು.

ಮೈಸೂರು ನಗರ ಪಾಲಿಕೆಯಿಂದ ಆಸ್ತಿ ತೆರಿಗೆ ಹೆಚ್ಚಳಕ್ಕೆ ಆಕ್ರೋಶ

ಮೈಸೂರು, ಮಾ.31(ಎಸ್‌ಪಿಎನ್)– ಏಕಾಏಕಿ ಶೇ.3ರಿಂದ 5 ರಷ್ಟು ಮನೆ ಕಂದಾಯವನ್ನು ಹೆಚ್ಚಿಸಿರುವ ಮೈಸೂರು ನಗರ ಪಾಲಿಕೆ ವಿರುದ್ಧ ಜನ ಸಾಮಾನ್ಯರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಮೈಸೂರು ನಗರದಲ್ಲಿ ನಿವೃತ್ತ ನೌಕರರು, ಹಿರಿಯ ನಾಗರಿಕರೇ ಹೆಚ್ಚಾಗಿ ವಾಸುತ್ತಿದ್ದಾರೆ. ಪಾಲಿಕೆ ಸಾಮಾಜಿಕ ಜವಾಬ್ದಾರಿಯನ್ನು ಮರೆತು ಏಕಾಏಕಿ ಮನೆಕಂದಾಯವನ್ನು ಏರಿಕೆ ಮಾಡಿದೆ. ಪಾಲಿಕೆಯ ಈ ನಿರ್ಧಾರ ಹಿಟ್ಲರ್ ಮನಸ್ಥಿತಿಯದ್ದಾಗಿದೆ. ಅಂತೆಯೇ ಕಳೆದ ಹಲವು ತಿಂಗಳಿಂದ ಪಾಲಿಕೆಗೆ ಚುನಾವಣೆ ನಡೆಸದೇ ಸರ್ಕಾರ ಮೀನಾಮೇಷ ತೋರುತ್ತಿದೆ.

ಅಲ್ಲದೆ, ಜನಪ್ರತಿನಿಧಿಗಳು ಪಾಲಿಗೆಗೆ ಆಯ್ಕೆಯಾದರೆ, ಅಧಿಕಾರಿಗಳ ಸರ್ವಾಧಿಕಾರಿ ಧೋರಣೆಗೆ ಕಡಿವಾಣ ಬೀಳುತ್ತದೆ ಎಂಬುದನ್ನು ಅರಿತು, ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ದಿನಕ್ಕೊಂದು ಕಾರಣ ಹೇಳಿ ಮುಂದೂಡುವ ಪ್ರಯತ್ನ ಮಾಡುತ್ತಿರುವುದು ಬೇಸರ ಸಂಗತಿ ಎಂದು ಸತ್ಯ ಬೆಳಕು ಫೌಂಡೇಶನ್ ಆರೋಪಿಸಿದೆ.

ಮೈಸೂರು ನಗರ ಪಾಲಿಕೆಗೆ ಜನ ಪ್ರತಿನಿಧಿಗಳು ಆಯ್ಕೆಯಾಗುವವರೆಗೂ ಏರಿಕೆ ಮಾಡಿರುವ ಕಂದಾಯ ದರವನ್ನು ತಡೆ ಹಿಡಿದು. ಹಿಂದಿನ ಸಾಲಿನ ನಿಗಧಿತ ಕಂದಾಯವನ್ನೇ ವಸೂಲಿ ಮಾಡುವಂತೆ ಸತ್ಯಬೆಳಕು ಫೌಂಡೇಶನ್ ಅಧ್ಯಕ್ಷ ಎಂ.ಎನ್.ಸತ್ಯಾನಂದ ವಿಟ್ಟು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ

ಡಾ. ಆಂಟೋ ರಿಚರ್ಡ್‌ಗೆ ಎಂ.ಎ. ಶಿಕ್ಷಣದಲ್ಲಿ 9ನೇ ರ್‍ಯಾಂಕ್



ಮೈಸೂರು, ಮಾ. 31– ಮೈಸೂರು ಜಯಲಕ್ಷ್ಮಿಪುರಂನ ಸೇಂಟ್ ಜೋಸೆಫ್ ಪಿಯು ಕಾಲೇಜಿನ ಪ್ರಾಂಶುಪಾಲ ಡಾ. ಆಂಟೋ ರಿಚರ್ಡ್ ಅವರು ಕರ್ನಾಟಕ ರಾಜ್ಯ ಮುಕ್ತ ವಿವಿಯಿಂದ ಎಂ.ಎ. ಶಿಕ್ಷಣದಲ್ಲಿ 9ನೇ ರ್‍ಯಾಂಕ್ ಪಡೆದಿದ್ದಾರೆ. ಕಳೆದ ವರ್ಷ ಮನೋವಿಜ್ಞಾನ ಎಂ.ಎಸ್ಸಿಯಲ್ಲಿ 7ನೇ ರ್‍ಯಾಂಕ್ ಪಡೆದಿದ್ದರು.

ಸ್ವಚ್ಛ, ಸುಂದರ ಪರಿಸರ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ

ಅದಮ್ಯ ರಂಗ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿಯೂ ಆದ ರಂಗಕರ್ಮಿ ಚಂದ್ರು ಮಂಡ್ಯ ಅಭಿಮತ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವತಿಯಿಂದ ಹೆಚ್ ಡಿ ಕೋಟೆ ತಾಲೂಕಿನ ಮಂಟಿ ಹಾಡಿಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ರಂಗಕರ್ಮಿ ಚಂದ್ರು ಮಂಡ್ಯ ಮಾತನಾಡಿದರು. ಪ್ರಾಂಶುಪಾಲ ಡಾ. ಎಂ.ಪ್ರಭು, ಎಚ್.ಸೋಮಶೇಖರ್, ಎಚ್.ಬಿ.ದೇವಣ್ಣ, ಎನ್.ಕುಂಟೆಗೌಡ, ನಂದಿನಿ ಮತ್ತು ವಿಜಯ ನಾರಾಯಣಗೌಡ ಉಪಸ್ಥಿತರಿದ್ದರು.

ಮೈಸೂರು, ಮಾ.31– ಮುಂದಿನ ತಲೆಮಾರಿನ ಯುವ ಸಮುದಾಯಕ್ಕೆ ನಿಸ್ವಾರ್ಥ ಮತ್ತು ಸ್ವಾಸ್ಥ್ಯ ಸಮಾಜ ಮತ್ತು ಸ್ವಚ್ಛವಾದ ಗಾಳಿ, ನೀರು, ಬೆಳಕು ಇರುವ ಸುಂದರ ಪರಿಸರವನ್ನು ಉಳಿಸಿ ಹೋಗಬೇಕಾಗಿರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಅದಮ್ಯ ರಂಗ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಹಾಗೂ ರಂಗಕರ್ಮಿ ಚಂದ್ರು ಮಂಡ್ಯ ಹೇಳಿದರು

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ (ಸ್ವಾಯತ್ತ) ವತಿಯಿಂದ ಹೆಚ್ ಡಿ ಕೋಟೆ ತಾಲೂಕಿನ ಮಂಟಿ ಹಾಡಿಯಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ'ದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯ ಉನ್ನತ ವ್ಯಾಸಂಗ ಮಾಡಿ ಪದವಿ ಪಡೆದು ಐ.ಟಿ., ಬಿ.ಟಿ. ಡಾಕ್ಟರ್, ಇಂಜಿನಿಯರ್‌ಗಳಂತಹ ಹುದ್ದೆಗಳು ಮಾತ್ರವೇ ಸಮಾಜದಲ್ಲಿ ನಮಗೆ ಗೌರವ ತಂದು ಕೊಡುತ್ತವೆ ಎಂದು ಭಾವಿಸಿದ್ದಾರೆ. ಕೃಷಿ ಮಾಡುವುದು ಅತ್ಯಂತ ಹೀನ ಕೆಲಸ ಎಂದು ವ್ಯವಸಾಯದ ಕಡೆ ಅಸಡ್ಡೆ ಮಾಡಿದ್ದಾರೆ. ಹೀಗೆಯೇ ಮುಂದುವರೆದರೆ ಮುಂದೊಂದು ದಿನ ಒಂದೊಂದು ತುತ್ತಿನ ಅನ್ನಕ್ಕೂ ಹಾಹಾಕಾರ ಪಡಬೇಕಾಗಿರುವ ಕಾಲ ದೂರ ಇಲ್ಲ ಎಂದರು

ಪ್ರೊ.ಹೆಚ್.ಬಿ. ದೇವಣ್ಣ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ತಂದೆ ತಾಯಿಗಳನ್ನು ಹೇಗೆ ನೋಡಿಕೊಳ್ಳಬೇಕು ಎನ್ನುವುದನ್ನು ನ್ಯಾಯಾಲಯದ ಮುಖಾಂತರ ತಿಳಿದುಕೊಳ್ಳಬೇಕಾಗಿದೆ ಎಂದು ವಿಷಾದಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಎಂ. ಪ್ರಭು ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ತೊಡಗಿಕೊಂಡು ನಾವು ಸೇವೆ ಮಾಡುವುದರ ಜೊತೆಗೆ ತಮ್ಮ ಸುತ್ತಮುತ್ತಲಿನವರಿಗೂ ಸೇವೆ ಮಾಡುವಂತೆ ಪ್ರೇರೇಪಿಸಬೇಕು ಎಂದು ಹೇಳಿದರು

ವೇದಿಕೆಯಲ್ಲಿ ಕೆ.ಎಸ್. ಗದ್ದಿಗೆಯ ಮುಖಂಡ ಎನ್. ಕುಂಟೆಗೌಡ, ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಾಧಿಕಾರಿ ಎನ್. ಸಂತೋಷ್ ಕುಮಾರ್, ರಾಷ್ಟ್ರೀಯ ರುಡ್‌ಸೆಟ್ ಸಂಸ್ಥೆಯ ನಿವೃತ್ತ ಮಹಾ ನಿರ್ದೇಶಕ ಎಚ್. ಸೋಮಶೇಖರ್, ಜನಪದ ಗಾಯಕರಾದ ಅಮ್ಮ ರಾಮಚಂದ್ರ, ವಿಶ್ರಾಂತ ಕ್ಷೇತ್ರ ಶಿಕ್ಷಣಾಧಿಕಾರಿ ಶಿವಕುಮಾರ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾದ ಡಾ. ಬೀರಪ್ಪ, ಸಸ್ಯಧಾಮ ಸಂಸ್ಥೆ ಮಾಲೀಕರಾದ ನಂದಿನಿ, ಅಸ್ವಾಳು ಗ್ರಾಮದ ಮುಖಂಡ ವಿಜಯ ನಾರಾಯಣಗೌಡ ಮತ್ತು ಯುವ ಮುಖಂಡ ರವಿಕುಮಾರ್ ಉಪಸ್ಥಿತರಿದ್ದರು

ಇದೇ ಸಂದರ್ಭದಲ್ಲಿ ಎನ್.ಎಸ್.ಎಸ್. ಶಿಬಿರದಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು ಮಿತ್ರ

ತಿ.ನರಸೀಪುರ ಪುರಸಭೆಗೆ 68.59 ಲಕ್ಷ ಉಳಿತಾಯ ಬಜೆಟ್

ಒಟ್ಟು 23.86 ಕೋಟಿ ಆದಾಯ, 23.17 ಕೋಟಿ ವೆಚ್ಚ

ತಿ.ನರಸೀಪುರ, ಮಾ.31– ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ 2025–26ನೇ ಸಾಲಿಗೆ 68,59,031 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

ಪುರಸಭಾಧ್ಯಕ್ಷೆ ವಸಂತ ಬಿ.ಶ್ರೀಕಂಠ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 47,04,09,031 ಕೋಟಿ ರೂ. ಗಾತ್ರದ ಬಜೆಟ್ ಅನ್ನು ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಮಂಡಿಸಿದರು. ಆನಂತರ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಆರಂಭಿಕ ಶಿಲ್ಕು ಅಂದಾಜು 3.76 ಕೋಟಿ ರೂ.ಗಳೊಂದಿಗೆ ಪುರಸಭೆ ವಿವಿಧ ಮೂಲಗಳಿಂದ ಒಟ್ಟು ಆದಾಯ 23,86,34,031 ಸಂಗ್ರಹವಾಗುವ ನಿರೀಕ್ಷೆ ಇದೆ. ಅದರಲ್ಲಿ 23,17,75,000 ರೂ. ವೆಚ್ಚ ಅಂದಾಜಿಸಲಾಗಿದೆ.

ನೀರು ಸರಬರಾಜು ಮತ್ತು ಒಳ ಚರಂಡಿ ಸಂಪರ್ಕದಿಂದ 68 ಲಕ್ಷ, ಆಸ್ತಿ ತೆರಿಗೆಯಿಂದ 3.20 ಕೋಟಿ, ಜಾಹೀರಾತು ತೆರಿಗೆ 80 ಸಾವಿರ, ವಾಣಿಜ್ಯ ಮಳಿಗೆ ಬಾಡಿಗೆಯಿಂದ 45 ಲಕ್ಷ, ಉದ್ದಿಮೆ ಪರವಾನಗಿಯಿಂದ 15 ಲಕ್ಷ, ಕಟ್ಟಡ ಪರವಾನಗಿಯಿಂದ 10 ಲಕ್ಷ, ವಾಹನ ನಿಲುಗಡೆ ಶುಲ್ಕದಿಂದ 5 ಲಕ್ಷ, ಖಾತಾ ವರ್ಗಾವಣೆ ಮತ್ತು ಖಾತಾ ನಕಲು ಫೀಯಿಂದ 7.50 ಲಕ್ಷ, ಅಭಿವೃದ್ಧಿ ಶುಲ್ಕ, ಜುಲ್ಮಾನೆ ಹಾಗೂ ಇತರೆ ಆದಾಯ 1,09,60,000 ರೂ., ಘನ ತ್ಯಾಜ್ಯ ನಿರ್ವಹಣಾ ಶುಲ್ಕ 21.50 ಲಕ್ಷ, ಖಾಸಗಿ ಬಸ್ ನಿಲ್ದಾಣ ಮತ್ತು ಮಾರುಕಟ್ಟೆ ಶುಲ್ಕದಿಂದ 13 ಲಕ್ಷ, ವೇತನ ಅನುದಾನ 2.89 ಕೋಟಿ, ವಿದ್ಯುತ್ ಅನುದಾನ 2.13 ಕೋಟಿ, ಮುಕ್ತ ನಿಧಿ ಅನುದಾನ 29 ಲಕ್ಷ, ಬರ ಪರಿಹಾರ ಧನದಿಂದ 10 ಲಕ್ಷ, ಬ್ಯಾಂಕ್ ಖಾತೆಗಳಿಂದ ಬಡ್ಡಿ 10 ಲಕ್ಷ, 15ನೇ ಹಣಕಾಸು ಅನು ದಾನ 1.88 ಕೋಟಿ, ಸ್ವಚ್ಛ ಭಾರತ್ ಮಿಷನ್ ಅನುದಾನ 1.50 ಕೋಟಿ, ಸಲ್ಮ್ ಮತ್ತು ನಲ್ಮ್ ಪವರ ಕಾರ್ಮಿಕರ ಗೃಹ ಭಾಗ್ಯ ಅನುದಾನ 5 ಲಕ್ಷ ಹಾಗೂ ಇತರೆ ಅನುದಾನ 5 ಕೋಟಿ ಸೇರಿದಂತೆ 23,86,34,031 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ ಎಂದರು.


ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಉಳಿತಾಯ ಬಜೆಟ್ ಮಂಡಿಸಿದರು.

ಉತ್ತಮ, ಅಭಿವೃದ್ಧಿ ಪರವಾದ ಬಜೆಟ್....!

ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಮಂಡಿಸಿದ ಉಳಿತಾಯ ಬಜೆಟ್‌ಗೆ ಸದಸ್ಯರಾದ ನಟ ಅರ್ಜುನ್ ರಮೇಶ್, ಮಾಜಿ ಅಧ್ಯಕ್ಷ ಮದನ್ ರಾಜ್, ಎನ್.ಸೋಮು, ಎಲ್.ಮಂಜುನಾಥ್, ಬಾದಾಮಿ ಮಂಜು, ಎಸ್.ಕೆ.ಕಿರಣ್ ಮೆಚ್ಚುಗೆ ವ್ಯಕ್ತಪಡಿಸಿ, ಅಧ್ಯಕ್ಷರು ಮಂಡಿಸಿರುವ ಬಜೆಟ್ ಪಟ್ಟಣದ ಅಭಿವೃದ್ಧಿಗೆ ಪೂರಕವಾಗಿದೆ. ಬಜೆಟ್‌ನಲ್ಲಿರುವ ಎಲ್ಲಾ ಅಭಿವೃದ್ಧಿ ಪರವಾದ ಅಂಶಗಳಿಗೆ ಒತ್ತು ನೀಡಿ ಅನುಷ್ಠಾನಕ್ಕೆ ತರಲು ಅಧ್ಯಕ್ಷ–ಉಪಾಧ್ಯಕ್ಷರು ಮುಂದಾಗಬೇಕೆಂದು ಸಲಹೆ ನೀಡಿದರು.

ಪುರಸಭೆ ವ್ಯಾಪ್ತಿ ಮುಖ್ಯ ರಸ್ತೆಗಳಿಗೆ ಸ್ವಾಗತ ಕಮಾನು ನಿರ್ಮಾಣ ಮತ್ತು ವಾರ್ಡ್‌ಗಳಿಗೆ ಸೂಚನಾ ಫಲಕ ನಿರ್ಮಾಣಕ್ಕಾಗಿ 81ಲಕ್ಷ, ಕಟ್ಟಡಗಳ ಅಭಿವೃದ್ಧಿಗಾಗಿ 10 ಲಕ್ಷ, ರಸ್ತೆ ಮತ್ತು ರಸ್ತೆ ಬದಿ ಚರಂಡಿಗಳು, ಮಳೆ ನೀರಿನ ಚರಂಡಿಗಳು, ಉದ್ಯಾನಗಳ ಅಭಿವೃದ್ಧಿಗಾಗಿ 6.19 ಕೋಟಿ, ಸ್ವಚ್ಛ ಭಾರತ್ ಮಿಷನ್‌ಗಾಗಿ 1.50 ಕೋಟಿ, ಪ್ರಮುಖ ವೃತ್ತಗಳ ಟ್ರಾಫಿಕ್ ನಿಯಂತ್ರಣಕ್ಕಾಗಿ ಸಿಸಿ ಕ್ಯಾಮೆರಾ ಅಳವಡಿಸಲು 15 ಲಕ್ಷ, ಬೀದಿ ನಾಯಿಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಗಾಗಿ 10 ಲಕ್ಷ, ಸರ್ವ ಜನಾಂಗದವರ ಸ್ಮಶಾನಗಳ ಅಭಿವೃದ್ಧಿಗಾಗಿ 50 ಲಕ್ಷ, ಜಾಹೀರಾತು ವೆಚ್ಚ ಪಾವತಿಗಾಗಿ 12 ಲಕ್ಷ, ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಇತರ ಕಾರ್ಯಕ್ರಮಗಳಿಗೆ 28 ಲಕ್ಷ, ಪ.ಜಾತಿ/ಪ.ಪಂಗಡಗಳ ಅಭಿವೃದ್ಧಿ ನಿಧಿಗೆ ಎಸ್‌ಎಫ್‌ಸಿ ಮತ್ತು ಪುರಸಭೆ ನಿಧಿ 27 ಲಕ್ಷ, ಪುರಸಭೆ ಖಾಯಂ ನೌಕರರ ವೇತನಕ್ಕಾಗಿ 3 ಕೋಟಿ, ವಿದ್ಯುತ್ ಶುಲ್ಕ ಪಾವತಿಗಾಗಿ 2.13 ಕೋಟಿ, ನೀರು ಸರಬರಾಜು ಯಂತ್ರಗಳ ಖರೀದಿ, ಕೊಳವೆ ಬಾವಿ ಸಾಮಾಗ್ರಿಗಳು, ಮೋಟಾರ್ ಪಂಪ್, ಸ್ಟಾರ್ಟರ್, ಹ್ಯಾಂಡ್ ಪಂಪ್ ಖರೀದಿ ಮತ್ತು ನಿರ್ವಹಣೆಗಾಗಿ 1.60 ಕೋಟಿ, ಮಲೀನ ನೀರು ಶುದ್ಧೀಕರಣ ಘಟಕದ ಭೂಸ್ವಾಧೀನ ಪಾವತಿ ವೆಚ್ಚ 1.15 ಕೋಟಿ, ಘನ ತ್ಯಾಜ್ಯ ವಿಲೇವಾರಿ ವಾಹನಗಳ ಖರೀದಿಗೆ 10 ಲಕ್ಷ, ಹೊರಗುತ್ತಿಗೆ ನೌಕರರ ವೇತನಕ್ಕಾಗಿ 75 ಲಕ್ಷ, ಬೀದಿ ದೀಪಗಳ ಅಳವಡಿಕೆ ಮತ್ತು ವಾರ್ಷಿಕ ನಿರ್ವಹಣೆ 30 ಲಕ್ಷ, ಪೌರ ಕಾರ್ಮಿಕರ ದಿನಾಚರಣೆ, ಬೆಳಗಿನ ಉಪಹಾರ, ವೈಯಕ್ತಿಕ ಸುರಕ್ಷಾ ಧಿರಿಸು/ ಸಾಧನಗಳ ಖರೀದಿಗೆ 15 ಲಕ್ಷ ಕೌನ್ಸಿಲ್ ಸಂಬಂಧಿ ವೆಚ್ಚಗಳಿಗೆ 22 ಲಕ್ಷ, ಸಂಬಂಧಿಸಿದ ವಿವಿಧ ಇಲಾಖೆಗಳಿಗೆ ಪಾವತಿಸಬೇಕಾದ ಶಾಸನ ಬದ್ಧ ತೆರಿಗೆ ಮತ್ತು ಕರ ಪಾವತಿಗಾಗಿ 1,35,50,000 ರೂ., ನೋಂದಾಯಿತ ಪತ್ರಕರ್ತರ ಆರೋಗ್ಯ ತಪಾಸಣೆ /ವೈದ್ಯಕೀಯ ವೆಚ್ಚಗಳ ಮರುಪಾವತಿಗೆ 10 ಲಕ್ಷ ಹಾಗೂ ಸಾಮಾನ್ಯ ಆಡಳಿತ ವೆಚ್ಚಗಳು/ ಇತರೆ ವೆಚ್ಚಗಳಿಗಾಗಿ 21.50 ಲಕ್ಷ ರೂ. ಸೇರಿದಂತೆ ಒಟ್ಟಾರೆ 23,17,75,000 ರೂ. ನಿರೀಕ್ಷಿತ ಪಾವತಿಯಡಿ ಮೀಸಲಿರಿಸಲಾಗಿದೆ ಎಂದರು.

ಸಭೆಯಲ್ಲಿ ರಾಜೇಶ್ವರಿ ರಾಘವೇಂದ್ರ, ಮಾಜಿ ಅಧ್ಯಕ್ಷರಾದ ಎನ್.ಸೋಮಣ್ಣ, ಟಿ.ಎಂ.ನಂಜುಂಡ ಸ್ವಾಮಿ, ಎಸ್.ಮದನ್ ರಾಜ್, ಪ್ರೇಮಾ ಮರಯ್ಯ, ನಾಗರತ್ನ ಮಾದೇಶ್, ಪುರಸಭೆ ಸದಸ್ಯರಾದ ಎಲ್. ಮಂಜುನಾಥ್, ಆರ್.ಅರ್ಜುನ್, ಸಿಸ್ಟಂ ಸಿದ್ದು, ಮೆಡಿಕಲ್ ನಾಗರಾಜು, ಎಸ್.ಕೆ.ಕಿರಣ್, ಬಾದಾಮಿ ಮಂಜು, ಬೇಬಿ ಹೇಮಂತ್, ಮಾದೇವಿ, ಜಿ.ರೂಪಶ್ರೀ ಪರಮೇಶ್, ರೂಪಾ ಕರಿಯಪ್ಪ ಮಹದೇವಮ್ಮ, ಪಿ.ಶೋಭರಾಣಿ, ಆರ್.ತೇಜಸ್ವಿನಿ, ಮುಖ್ಯಾಧಿಕಾರಿ ಬಿ.ಕೆ.ವಸಂತಕು ಮಾರಿ, ವ್ಯವಸ್ಥಾಪಕ ಮಹೇಂದ್ರ, ಎಫ್‌ಡಿಎ ತ್ರಿವೇಣಿ, ಆರ್‌ಐ ಅಶೋಕ, ಜೆಇ ಸಿದ್ದಯ್ಯ, ಆರೋಗ್ಯಾಧಿಕಾರಿ ಮಧು, ಎಸ್‌ಡಿಎ ಆಶಾ, ಪ್ರಿಯಾಂಕಾ, ವಿನಯ್, ಮಹೇಂದ್ರ ಇದ್ದರು.

ನಂಜನಗೂಡಲ್ಲಿ ರಂಜಾನ್ ಸಾಮೂಹಿಕ ಪ್ರಾರ್ಥನೆ


ರಂಜಾನ್ ಪ್ರಯುಕ್ತ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ನಂಜನಗೂಡು, ಮಾ.31– ರಂಜಾನ್ ಹಬ್ಬದ ಪ್ರಯುಕ್ತ ಮುಸ್ಲಿಂ ಸಮುದಾಯದವರು ನಗರದ ತ್ಯಾಗರಾಜ ಕಾಲೋನಿಯ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಮುಸ್ಲಿಂ ಬಾಂಧವರು ವಕ್ಫ್ ಮಸೂದೆ ತಿದ್ದುಪಡಿ ವಿರೋಧಿಸಿ ಕೈಗೆ ಕಪ್ಪು ಪಟ್ಟಿ ಧರಿಸಿ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಯಾಗಿದ್ದರು.

ತ್ಯಾಗರಾಜ ಕಾಲೋನಿ ಈದ್ಗಾ ಮಸೀದಿ ಧಾರ್ಮಿಕ ಗುರುಗಳಾದ ಮೊಹಮ್ಮದ್ ಮುಸಾಫಿರ್ ಪ್ರಾರ್ಥನೆ ಬಳಿಕ ಹಬ್ಬದ ಸಂದೇಶ ನೀಡಿ ಮಾತನಾಡಿ, ಭಾರತೀಯರೆಲ್ಲರೂ ಶಾಂತಿ, ಸೋದರತೆ ಹಾಗೂ ಸಹಬಾಳ್ವೆಯಿಂದ ಜೀವನ ನಡೆಸಬೇಕು. ಆ ಮೂಲಕ ಸಮಾಜದಲ್ಲಿ ಎಲ್ಲರೂ ಒಟ್ಟಾಗಿ ಶಾಂತಿ ನಿರ್ಮಿಸಬೇಕು. ಇನ್ನು ಕೇಂದ್ರ ಸರ್ಕಾರದ ವಕ್ಫ್ ಕಾಯಿದೆ ತಿದ್ದುಪಡಿಯಿಂದ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಭಾವನೆಗಳಿಗೆ ಧಕ್ಕೆಯಾಗಲಿದ್ದು, ಸಂವಿಧಾನಬದ್ಧ ನ್ಯಾಯವನ್ನು ನೀಡುವ ಸಲುವಾಗಿ ಉದ್ದೇಶಿತ ತಿದ್ದುಪಡಿ ಮಸೂದೆ ಕೈಬಿಡಬೇಕು ಎಂದು ಒತ್ತಾಯಿಸಿದರು.

ಮಸೀದಿ ಸಮಿತಿ ಅಧ್ಯಕ್ಷ ಅಬ್ದುಲ್ ಖಾದರ್ ಮಾತನಾಡಿ, ಕೇಂದ್ರ ಸರ್ಕಾರ ವಕ್ಫ್ ಕಾಯ್ದೆಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಿರುವ ಮಸೂದೆಯಿಂದ ಮುಸ್ಲೀಂ ಸಮುದಾಯಕ್ಕೆ ಅನ್ಯಾಯವಾಗಲಿದ್ದು, ಸರ್ಕಾರದ ಈ ಕ್ರಮ ವಿರೋಧಿಸಿ ರಂಜಾನ್ ಹಬ್ಬದ ಪ್ರಾರ್ಥನೆ ಸಂದರ್ಭ ಕೈಗೆ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಲಾಗಿದೆ. ಇನ್ನು 2 ತಿಂಗಳೊಳಗೆ ತಿದ್ದುಪಡಿ ಮಸೂದೆ ಹಿಂಪಡೆಯದಿದ್ದಲ್ಲಿ ಮುಂಬರುವ ದಿನಗಳಲ್ಲಿ ದೇಶಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದರು. ಈ ವೇಳೆ ಕೆಪಿಸಿಸಿ ಕಾರ್ಯದರ್ಶಿ ಅಕ್ಬರ್ ಅಲೀಮ್ ಸೇರಿದಂತೆ ಹಲವರಿದ್ದರು.

ವಿಜೃಂಭಣೆಯ ಚಿಕ್ಕದೇವಮ್ಮನ ಹಾಲುಗಡ ಜಾತ್ರಾ ಮಹೋತ್ಸವ

ಸರಗೂರು, ಮಾ.31– ತಾಲೂಕಿನ ಶಕ್ತಿದೇವತೆ ಶ್ರೀಚಿಕ್ಕದೇವಮ್ಮನ ಬೆಟ್ಟದಲ್ಲಿ ಯುಗಾದಿ ಅಂಗವಾಗಿ ನಡೆದ ಹಾಲುಗಡ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ಚಂದ್ರಮಾನ ಯುಗಾದಿ ಹಬ್ಬದಂದು ಮುಂಜಾನೆಯೇ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಶ್ರೀಚಿಕ್ಕದೇವಮ್ಮನ ಬೆಟ್ಟದಿಂದ ಅಮ್ಮನವರು ಹಾಗೂ ಶಿವ ಪಾರ್ವತಿ ಉತ್ಸವ ಮೂರ್ತಿಯನ್ನು ತಂದು ಕಪಿಲಾ ನದಿ ಬಳಿಯ ಹಾಲುಗಡುವಿನ ಜಪದ ಕಟ್ಟೆಯಲ್ಲಿ ಕೂರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಹೋಮ–ಹವನಗಳು ನಡೆದವು. ನಂತರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಇದೇ ವೇಳೆ 10ಕ್ಕೂ ಹೆಚ್ಚು ಸತ್ತಿಗೆಗಳನ್ನು ಮೆರವಣಿಗೆ ಮಾಡಲಾಯಿತು. ಈ ವೇಳೆ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಮಾಡಿಕೊಂಡಿದ್ದ ಹರಕೆ ತೀರಿಸಿದರು. ಜಾತ್ರಾ ಸಮಿತಿ ಹಾಗೂ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ, ಬಸವ ಧರ್ಮ ಜ್ಞಾನ ಪೀಠ ಹಾಗೂ ಪಶುಪ್ರಾಣಿ ಬಲಿ ನಿರ್ಮೂಲನಾ ಮಹಾ ಸಂಘದ ಅಧ್ಯಕ್ಷ ದಯಾನಂದ ಸ್ವಾಮೀಜಿ ಪ್ರಾಣಿ ಬಲಿ ಬಗ್ಗೆ ಭಕ್ತರಿಗೆ ಅರಿವು ಮೂಡಿಸಿದರು. ಸಿಪಿಐ ಪ್ರಸನ್ನ ಕುಮಾರ್, ಎಸ್‌ಐ ಕಿರಣ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು

ಬೆಟ್ಟಕ್ಕೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಹ್ಯಾಂಡ್‌ಪೋಸ್ಟ್, ಸರಗೂರಿನಿಂದ ವಾಹನದ ವ್ಯವಸ್ಥೆ ಮಾಡಲಾಗಿತ್ತು. ಭಕ್ತರಿಗೆ ರಾಜ್ಯ ರೈತ ಪರ್ವ ರಾಜ್ಯಾಧ್ಯಕ್ಷ ವೈ.ಎಲ್.ನವೀನ್ ಕುಮಾರ್ ಅವರು ಮಜ್ಜಿಗೆ ವಿತರಣೆ ಮಾಡಿದರು.

ಈ ವೇಳೆ ಮುಜರಾಯಿ ಇಲಾಖೆ ಇಓ ರಘು, ಪಾರುಪತ್ತೇದಾರ ಮಹದೇವ ಸ್ವಾಮಿ, ಅರ್ಚಕರಾದ ಶಿವಕುಮಾರ್, ಪ್ರಸನ್ನ, ಮನು, ಚಿಕ್ಕದೇವಣ್ಣ, ನಿಂಗಣ್ಣ ಶಾಸ್ತ್ರಿ, ಸಿದ್ದಲಿಂಗ ಸ್ವಾಮಿ, ಮಹದೇವಸ್ವಾಮಿ, ವೀರಣ್ಣ, ಮಣಿಕಂಠ, ಮನು, ರವಿ, ದೇವಣ್ಣ, ಲಿಂಗಪ್ಪ, ಸಂತೋಷ್, ನಾಗಣ್ಣ, ಇಟ್ನಾ ಹಾಲುಗಡ ಜಾತ್ರಾ ಕಮಿಟಿ ಪದಾಧಿಕಾರಿಗಳು, ಬೆಟ್ಟದ ಸುತ್ತಮುತ್ತಲಿನ ಗ್ರಾಮಸ್ಥರು ಇತರರಿದ್ದರು.



ಶ್ರೀಚಿಕ್ಕದೇವಮ್ಮನ ಬೆಟ್ಟದ ಹಾಲುಗಡ ಜಾತ್ರಾ ಮಹೋತ್ಸವ ನಡೆಯಿತು.

ಹುಣಸೂರು ನಗರಸಭೆಗೆ 73.99 ಲಕ್ಷ 'ಉಳಿತಾಯ'

ಹುಣಸೂರು, ಮಾ.31– ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ನಗರಸಭೆ ಸಿದ್ಧಪಡಿಸಿರುವ 2025–26ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯ 73.99 ಲಕ್ಷ ರೂಗಳ ಉಳಿತಾಯ ಬಜೆಟ್ ಅನ್ನು ಅಧ್ಯಕ್ಷ ಶರವಣ ಮಂಡಿಸಿದರು.

ನಗರಸಭಾ ಸಭಾಂಗಣದಲ್ಲಿ ನಡೆದ ಬಜೆಟ್ ಮಂಡನೆ ಸಭೆಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಆಸ್ತಿ ತೆರಿಗೆ 540 ಲಕ್ಷ, ನೀರು ಸರಬರಾಜು ಶುಲ್ಕ 93.50 ಲಕ್ಷ, ಉದ್ದಿಮೆ ಹಾಗೂ ಕಟ್ಟಡ ಪರವಾನಿಗೆಯಿಂದ 26.40 ಲಕ್ಷ, ವಾಣಿಜ್ಯ ಸಂಕೀರ್ಣಗಳ ಬಾಡಿಗೆಯಿಂದ 30 ಲಕ್ಷ, ಅಭಿವೃದ್ಧಿ ಮತ್ತು ಇತರೆ ಶುಲ್ಕಗಳಿಂದ 60.40 ಲಕ್ಷ, ಮುದ್ರಾಂಕ ಶುಲ್ಕ 10 ಲಕ್ಷ, ಖಾತೆ ವರ್ಗಾವಣೆ, ನಕಲು ಇನ್ನಿತರ ಶುಲ್ಕ 19 ಲಕ್ಷ ಹಾಗೂ ಯುಜಿಡಿ ಸೆಸ್‌ಗಳಿಂದ 43.05 ಲಕ್ಷ ರೂ. ಸೇರಿದಂತೆ 859.26 ಲಕ್ಷಗಳು.

ಎಸ್‌ಎಫ್‌ಸಿ ಮುಕ್ತ ನಿಧಿಯಿಂದ 125 ಲಕ್ಷ, ಎಸ್‌ಎಫ್‌ಸಿ ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಅನುದಾನ 651.70 ಲಕ್ಷ, ವೇತನ ಬಾಬ್ತು 525 ಲಕ್ಷ, ಕುಡಿಯುವ ನೀರಿನ ಅನುದಾನ 10 ಲಕ್ಷ, 15ನೇ ಹಣಕಾಸು ಆಯೋಗದ ಅನುದಾನ 414.60 ಲಕ್ಷ, ಎಸ್‌ಬಿಎಂ–2 ಅನುದಾನ 260 ಲಕ್ಷ, ಇತರೆ ಅನುದಾನಗಳು 10 ಲಕ್ಷ ಸೇರಿದಂತೆ 1996.30 ಲಕ್ಷ ಆದಾಯ ನಿರೀಕ್ಷಿಸಲಾಗಿದೆ ಎಂದರು.

ಪ್ರಮುಖ ಪಾವತಿಯ ಬಂಡವಾಳ ವೆಚ್ಚಗಳಾಗಿ ಕಟ್ಟಡ ನಿರ್ಮಾಣಕ್ಕಾಗಿ 300 ಲಕ್ಷ, ವಾಹನ ಖರೀದಿ 100 ಲಕ್ಷ, ನಾಮ ಫಲಕ ಮತ್ತು ಸ್ವಾಗತ ಕಮಾನುಗಳ ಅಳವಡಿಕೆ 90 ಲಕ್ಷ, ರಸ್ತೆ, ಮಳೆ ನೀರು ಚರಂಡಿ ಹಾಗೂ ತೆರೆದ ಚರಂಡಿ ಕಾಮಗಾರಿಗಾಗಿ 386.40 ಲಕ್ಷ, ಒಳಚರಂಡಿ ಅಭಿವೃದ್ಧಿಗಾಗಿ 223.54 ಲಕ್ಷ, ಶೌಚಾಲಯಕ್ಕಾಗಿ 50 ಲಕ್ಷ, ಉದ್ಯಾನವನ ಅಭಿವೃದ್ಧಿ 100 ಲಕ್ಷ, ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ 527.94 ಲಕ್ಷ, ಬೀದಿ ದೀಪ ನಿರ್ವಹಣೆಗಾಗಿ 100 ಲಕ್ಷ, ಸ್ಮಶಾನ ಅಭಿವೃದ್ಧಿ 20 ಲಕ್ಷಗಳು, ಯಂತ್ರೋಪಕರಣ ಖರೀದಿಗಾಗಿ 80 ಲಕ್ಷಗಳು, ನೀರು ಸರಬರಾಜು ಅಭಿವೃದ್ಧಿ ಮತ್ತು ನಿರ್ವಹಣೆ 378.54 ಲಕ್ಷ, ಕೆಯುಡಬ್ಲ್ಯೂಎಸ್ ಸಿಡಿಬಿ ವಂತಿಕೆ 100 ಲಕ್ಷ, ಪೀಠೋಪಕರಣ ಖರೀದಿ 40 ಲಕ್ಷ, ಶೇ.24.10ರ ಕಲ್ಯಾಣ ಕಾರ್ಯಕ್ರಮಗಳಿಗೆ 43.60 ಲಕ್ಷ, ಶೇ.7.25 ಕಲ್ಯಾಣ ಕಾರ್ಯಕ್ರಮಗಳಿಗಾಗಿ 12,71 ಲಕ್ಷ ಅಂಗವಿಕಲರ ಶೇ.5ರ ಕಲ್ಯಾಣ ಕಾರ್ಯಕ್ರಮಗಳಿಗಾಗಿ 6–70 ಲಕ್ಷ ಸೇರಿದುತೆ ಒಟ್ಟು 2619.46 ಲಕ್ಷ ವೇತನ ಪಾವತಿಗಾಗಿ 525 ಲಕ್ಷ ಲೇಖನ ಸಾಮಗ್ರಿ, ಪತ್ರಿಕಾ ಪ್ರಕಟಣೆ ಮತ್ತಿತರೆ ವೆಚ್ಚಗಳಿಗಾಗಿ 108.25 ಲಕ್ಷ, ಕೌನ್ಸಿಲ್ ಸಭೆ ವೆಚ್ಚ 16 ಲಕ್ಷ ರಸ್ತೆ ದುರಸ್ತಿ ನಿರ್ವಹಣೆ ವೆಚ್ಚ 25 ಲಕ್ಷ, ಬೀದಿ ದೀಪ ನಿರ್ವಹಣೆ 128.63 ಲಕ್ಷ, ಮಳೆ ನೀರು, ಚರಂಡಿ ಮತ್ತು ತೆರೆದ ಚರಂಡಿ ನಿರ್ವಹಣೆ 33 ಲಕ್ಷ, ಘನತ್ಯಾಜ್ಯ ವಸ್ತು ನಿರ್ವಹಣೆ, ಚಾಲಕರ ವೇತನ, ವಾಹನಗಳ ದುರಸ್ತಿ ಮತ್ತು ವಿಮೆಗಳಿಗಾಗಿ 218.60 ಲಕ್ಷ, ನೀರು ಸರಬರಾಜು ಹಾಗೂ ಒಳ ಚರಂಡಿ ನಿರ್ವಹಣೆ, ಇಂಧನ, ಹೊರಗುತ್ತಿಗೆ ನೌಕರರ ವೇತನ, ದುರಸ್ತಿ ಹಾಗೂ ಇತರೆ ವೆಚ್ಚ 537 ಲಕ್ಷ, ಉದ್ಯಾನವನ ನಿರ್ವಹಣೆ 10 ಲಕ್ಷ, ಸ್ಮಶಾನ ನಿರ್ವಹಣೆ 5 ಲಕ್ಷ, ಸರ್ಕಾರಕ್ಕೆ ಪಾವತಿಸಬೇಕಾದ ಆದಾಯ ತೆರಿಗೆ ಮತ್ತು ಜಿಎಸ್‌ಟಿ 85 ಲಕ್ಷ ಪತ್ರಕರ್ತರ ವೈದ್ಯಕೀಯ ವೆಚ್ಚ 5 ಲಕ್ಷ ಸೇರಿದಂತೆ ಒಟ್ಟು 1696.48 ಲಕ್ಷ ವೆಚ್ಚವಾಗಲಿದೆ ಎಂದರು.

ಈ ವೇಳೆ ಶಾಸಕ ಜಿ.ಡಿ.ಹರೀಶ್‌ಗೌಡ ನಗರಸಭಾ ಸದಸ್ಯರಿದ್ದರು.



ನಗರಸಭಾ ಅಧ್ಯಕ್ಷ ಶರವಣ ಬಜೆಟ್ ಮಂಡಿಸಿದರು

ಏ.25ಕ್ಕೆ, ವಿಜೃಂಭಣೆಯ ಬಾಬೂಜಿ, ಅಂಬೇಡ್ಕರ್ ಜಯಂತಿ

ಪೂರ್ವಭಾವಿ ಸಭೆಯಲ್ಲಿ ತೀರ್ಮಾನ

ಕೆ.ಆರ್.ನಗರ, ಮಾ.31– ಪಟ್ಟಣದ ಪುರಸಭೆಯ ಬಯಲು ರಂಗ ಮಂದಿರದಲ್ಲಿ ಏ.25ರಂದು ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಂ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಯಿತು.

ಪಟ್ಟಣದ ಆಡಳಿತಸೌಧದ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಏ.5ರಂದು ಜಗಜೀವನರಾಂ ಮತ್ತು ಏ.14ರಂದು ಅಂಬೇಡ್ಕರ್ ಜಯಂತಿಯನ್ನು ಸರ್ಕಾರದಿಂದ ಸಾಂಕೇತಿಕವಾಗಿ ಆಚರಿಸಲು ತೀರ್ಮಾನಿಸಲಾಯಿತು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಏ.25ರಂದು ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ದಲಿತ ಮುಖಂಡರು ಮತ್ತು ಇತರ ಎಲ್ಲಾ ಸಮಾಜಗಳ ಹಿರಿಯರ ಸಲಹೆಯಂತೆ ವಿಜೃಂಭಣೆಯಿಂದ ಜಯಂತಿ ಆಚರಣೆ ಮಾಡಲಿದ್ದು ಇದಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದರು.

ಕಾರ್ಯಕ್ರಮಕ್ಕೆ ಬರುವ ಎಲ್ಲರಿಗೂ ವಾಹನ ಮತ್ತು ಊಟದ ವ್ಯವಸ್ಥೆ ನಾನು ಮಾಡಲಿದ್ದು, ಹೆಚ್ಚು ಜನ ಸೇರುವಂತೆ ಸಮಾಜದ ಮುಖಂಡರು ನೋಡಿಕೊಂಡು ಪ್ರತಿ ಗ್ರಾಮಗಳಿಗೆ ತೆರಳಿ ವ್ಯಾಪಕ ಪ್ರಚಾರ ಮಾಡಬೇಕೆಂದು ತಿಳಿಸಿದರು.

ಇಬ್ಬರು ಮಹನೀಯರ ಜಯಂತಿಗೆ ಎರಡೂ ಸಮುದಾಯದ ಶ್ರೀಗಳು, ಬೌದ್ಧ ಭಿಕ್ಕುಗಳು ಮತ್ತು ಸಚಿವರನ್ನು ಆಹ್ವಾನಿಸಿ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, ಸಾಧಕರನ್ನು ಗೌರವಿಸಲಾಗುತ್ತದೆ ಎಂದು ತಿಳಿಸಿದರು.

ಜಯಂತಿಯಂದು ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಕೃಷ್ಣರಾಜೇಂದ್ರ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನ ಆವರಣದಿಂದ ಬಾಬುಜಗಜೀವನರಾಂ ಮತ್ತು ಅಂಬೇಡ್ಕರ್ ಅವರ ಬೃಹತ್ ಭಾವಚಿತ್ರಗಳನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಕೃಷ್ಣರಾಜೇಂದ್ರ ವೃತ್ತ, ಪುರಸಭೆ ವೃತ್ತದ ಮೂಲಕ ವೇದಿಕೆಗೆ ಕರೆ ತರಲಾಗುತ್ತದೆ ಎಂದರು.

ತಹಸೀಲ್ದಾರರಾದ ಜಿ.ಸುರೇಂದ್ರ ಮೂರ್ತಿ, ಎಸ್.ಎನ್.ನರಗುಂದ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಎಲ್.ಶಂಕರಮೂರ್ತಿ, ದಲಿತ ಮುಖಂಡರಾದ ರಾಜಯ್ಯ, ನಾಗರಾಜು, ಎಂ.ಲೋಕೇಶ್, ಗೀತಾ, ಎಂ.ಎಸ್.ಮಹದೇವ್, ರಾಚಯ್ಯ, ಡಿ.ಕಾಂತರಾಜು, ಸಿದ್ದಯ್ಯ, ಕಂಠಿ ಕುಮಾರ್, ನಂದೀಶ್, ರಾಜಯ್ಯ, ಹೆಚ್.ಎಸ್.ಸ್ವಾಮಿ ಮಾತನಾಡಿದರು.

ತಾಪಂ ಇಓ ಎ.ಎನ್.ರವಿಕುಮಾರ್, ವಿ.ಪಿ.ಕುಲದೀಪ್, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು, ನಿರ್ದೇಶಕ ಸಿ.ಇ.ಉಮೇಶ್, ರಾಜ್ಯ ಪರಿಷತ್ ಸದಸ್ಯ ಎಸ್.ಆರ್.ಯಶ್ವಂತ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಬಿ.ವಿ.ವೆಂಟೇಶ್, ಬಿಇಓ ಆರ್.ಕೃಷ್ಣಪ್ಪ, ಆರಕ್ಷಕ ನಿರೀಕ್ಷಕ ಎಸ್. ಶಿವಪ್ರಕಾಶ್, ಮುಖಂಡರಾದ ನರಸಿಂಹರಾಜು, ಗುರುಸಿದ್ದಯ್ಯ, ಎಂ.ಹೆಚ್.ಸ್ವಾಮಿ, ನಂಜುಂಡ, ನಂಜಯ್ಯ, ಚಲುವರಾಜು, ಉದಯಶಂಕರ್, ಸೈಯದ್ ಜಾಬೀರ್, ಚಂದ್ರು, ತಿಮ್ಮಶೆಟ್ಟಿ, ಗುರುಸ್ವಾಮಿ, ಮಂಜುನಾಥ್ ಹಾಜರಿದ್ದರು.


ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಛತ್ರಿ ವಿತರಣೆ



ಹೆಚ್.ಡಿ.ಕೋಟೆಯ ಲಯನ್ಸ್ ಕ್ಲಬ್ ವತಿಯಿಂದ ಬೀದಿ ಬದಿ ವ್ಯಾಪಾರಿಗಳಿಗೆ ಅಧ್ಯಕ್ಷ ಬೀಚನಹಳ್ಳಿ ಭಾಸ್ಕರ್ ಛತ್ರಿಗಳನ್ನು ಉಚಿತವಾಗಿ ವಿತರಿಸಿದರು. ಈ ವೇಳೆ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಲಯನ್ಸ್ ಖಜಾಂಚಿ ಬಸವರಾಜು, ನಾಗಣ್ಣ, ವೀರಪ್ಪ ಇನ್ನಿತರರಿದ್ದರು.

ಆಶ್ಲೇಷ ಬಲಿ ಸರ್ಪ ಸಂಸ್ಕಾರ ಹೋಮ


ತಲಕಾಡಿನ ಹಸ್ತಿಕೇರಿ ಮಠದಲ್ಲಿ ವೇದ ವಿದ್ವಾಂಸ ಜಾವಗಲ್ ಶ್ರೀಹೊನ್ನಪ್ಪಾಜಿ ಅವರ ಪೌರೋಹಿತ್ಯದಲ್ಲಿ ಮಠದ ಡಾ.ಸಿದ್ದಮಲ್ಲಿಕಾರ್ಜುನ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಆಶ್ಲೇಷ ಬಲಿ ಸರ್ಪ ಸಂಸ್ಕಾರ, ಸರ್ಪ ಶಾಂತಿ ಹೋಮ ನೆರವೇರಿಸಲಾಯಿತು.

ಕೆ.ಆರ್.ನಗರ: ವ್ಯಕ್ತಿ ನಾಪತ್ತೆ



ಕೆ.ಆರ್.ನಗರ, ಮಾ.31– ಪಟ್ಟಣದ ಬಸವೇಶ್ವರ ಬಡಾವಣೆ ನಿವಾಸಿ, ಚಾಲಕ ಹೆಚ್.ಆರ್.ಮಹದೇವ್ (72) ನಾಪತ್ತೆಯಾಗಿದ್ದಾರೆ.

ಮಾ.15ರಂದು ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ಸಾಗಿಲ್ಲ ಎಂದು ಪುತ್ರ ಹೆಚ್. ಎಂ.ಹರೀಶ್ ಕೆ.ಆರ್.ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಕೆ.ಆರ್.ನಗರ ಠಾಣೆ ಅಥವಾ ಮೊ.8618911694 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನೀರಿನಲ್ಲಿ ಮುಳುಗಿ ಬಾಲಕ ಸಾವು

ತಿ.ನರಸೀಪುರ, ಮಾ.31– ಯುಗಾದಿ ಹಬ್ಬದ ಅಂಗವಾಗಿ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಲು ತೆರಳಿದ್ದ ಬಾಲಕ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.



ಪಟ್ಟಣದ ಶ್ರೀರಾಂಪುರ ಬೀದಿ ನಿವಾಸಿ ರಾಜು ಎಂಬುವರ ಪುತ್ರ ಆರ್.ಶರಣ್ (14) ಸಾವನ್ನಪ್ಪಿದ ಬಾಲಕ. ಈತ ತನ್ನ ಸಂಬಂಧಿಕರೊಂದಿಗೆ ಕಾವೇರಿ ನದಿಯಲ್ಲಿ ಸ್ನಾನ ಮಾಡಲು ತೆರಳಿದ್ದ ವೇಳೆ ಈ ದುರ್ಘಟನೆ ನಡೆದಿದೆ. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಮೃತ ಬಾಲಕನ ತಂದೆ ದೂರು ನೀಡಿದ್ದಾರೆ.

ತಿ.ನರಸೀಪುರ ಪುರಸಭೆ ಸಾಮಾನ್ಯ ಸಭೆ

ಆಸ್ತಿ, ಬೀದಿನಾಯಿ ಹಾವಳಿ, ಹಲವು ಸಮಸ್ಯೆ ಚರ್ಚೆ

ತಿ.ನರಸೀಪುರ, ಮಾ.31– ಪುರಸಭೆಗೆ ಸೇರಿದ ಜಾಗವನ್ನು ಮಹಿಳಾ ಸಮಾಜಕ್ಕೆ ನೀಡಿದ್ದು, ಅಲ್ಲಿ ಅನಧಿಕೃತವಾಗಿ ವಾಣಿಜ್ಯ ಮಳಿಗೆ ನಿರ್ಮಾಣವಾಗಿದೆ. ಅದರಿಂದ ಬರುತ್ತಿರುವ ಬಾಡಿಗೆ ಎಲ್ಲಿಗೆ ಸಂದಾಯವಾಗುತ್ತಿದೆ ಎಂಬುದರ ಬಗ್ಗೆ ತನಿಖೆಯಾಗಲಿ ಎಂದು ಪಟ್ಟಣದ ಪುರಸಭೆಯಲ್ಲಿ ನಡೆದ ಸಭೆಯಲ್ಲಿ ಒತ್ತಾಯಿಸಲಾಯಿತು.

ಪುರಸಭಾಧ್ಯಕ್ಷೆ ವಸಂತ ಬಿ.ಶ್ರೀಕಂಠ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಸದಸ್ಯ ಅರ್ಜುನ್ ರಮೇಶ್, ಪಟ್ಟಣದ ಲಿಂಕ್ ರಸ್ತೆಗೆ ಹೊಂದಿಕೊಂಡಿರುವ ಪುರಸಭೆ ಆಸ್ತಿಯನ್ನು ಈ ಹಿಂದೆ ಸರಸ್ವತಿ ಮಹಿಳಾ ಸಮಾಜಕ್ಕೆ ನೀಡಿ ಮಹಿಳಾ ಸಂಘದ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಸೂಚಿಸಲಾಗಿತ್ತು. ಆದರೀಗ ಅಲ್ಲಿ ಮಹಿಳಾ ಸಮಾಜ ವಾಣಿಜ್ಯ ಮಳಿಗೆಯಾಗಿ ಪರಿವರ್ತನೆಯಾಗಿದೆ. ಪುರಸಭೆಯಿಂದ ನೀಡಲಾಗಿರುವ ಈ ಬಿಲ್ಡಿಂಗ್ ಬಾಡಿಗೆ ಯಾರಿಗೆ ಹೋಗುತ್ತಿದೆ. ಈ ಬಗ್ಗೆ ಮಾಹಿತಿ ನೀಡುವಂತೆ ಒತ್ತಾಯಿಸಿದ ಅರ್ಜುನ್ ಇಷ್ಟು ವರ್ಷಗಳ ಕಾಲ ವಾಣಿಜ್ಯ ಚಟುವಟಿಕೆ ನಡೆಸಲು ಅವಕಾಶ ಕೊಟ್ಟಿರುವುದಾದರೂ ಏಕೆ ಎಂದು ಪ್ರಶ್ನಿಸಿದರು.

ಈ ಕುರಿತು ಸ್ಪಷ್ಟನೆ ನೀಡಿದ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಬಾಡಿಗೆ ಸೋರಿಕೆಯಾಗುತ್ತಿರುವ ಬಗ್ಗೆ ತನಿಖೆ ಮಾಡಿ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದರು.

ಪಟ್ಟಣದಲ್ಲಿ ಇತ್ತೀಚಿನ ದಿನಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಈಗಾಗಲೇ ಬೀದಿ ನಾಯಿಗಳು ಹಲವು ಮಕ್ಕಳನ್ನು ಕಚ್ಚಿ ಗಾಯಗೊಳಿಸಿವೆ. ಪುರಸಭೆಯಿಂದ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅರ್ಜುನ್ ಒತ್ತಾಯಿಸಿದರು.

ಎಡಗೈ ಜನಾಂಗದವರು ನಿವೇಶನಕ್ಕಾಗಿ ಧರಣಿ ನಡೆಸುತ್ತಿರುವ ಜಾಗಕ್ಕೆ ಮೂಲ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್ ಸೌಕರ್ಯ ಕಲ್ಪಿಸಿಕೊಡುವಂತೆ ಮಾಡಿದ ಮನವಿಗೆ ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು. ಎಡಗೈ ಜನಾಂಗದವರು ನಿವೇಶನಕ್ಕಾಗಿ ಗುಡಿಸಲು ನಿರ್ಮಿಸಿಕೊಂಡಿರುವ ಜಾಗವನ್ನು ಅದೇ ಸಮಾಜದವರಿಗೆ ನೀಡಲು ಪುರಸಭೆ ಸದಸ್ಯರ ಸಹಮತವಿದೆ. ಇದನ್ನು ಉಪವಿಭಾಗಾಧಿಕಾರಿ ಹಾಗೂ ಆಶ್ರಯ ಸಮಿತಿ ಗಮನಕ್ಕೆ ತರುವಂತೆ ಮನವಿ ಮಾಡಿದರು.

ಭೈರಾಪುರ ಸರ್ವೇ ನಂ.48ರಲ್ಲಿನ ತುರುಕನಕಟ್ಟೆ 38 ಗುಂಟೆ ಜಮೀನಿನ ಪೈಕಿ 19 ಗುಂಟೆ ಜಮೀನನ್ನು ಸರ್ಕಾರ ಪಿಟೀಲು ಚೌಡಯ್ಯ ಗಾಯನ ಸಮಾಜಕ್ಕೆ ನೀಡಿತ್ತು. ಆದರೆ ಇತ್ತೀಚಿಗೆ ಮುಖ್ಯಾಧಿಕಾರಿಗಳು ರಾಜಕೀಯ ಪ್ರಭಾವಕ್ಕೆ ಮಣಿದು ಕಾರ್ಯದರ್ಶಿಗಳು, ಪಿಟೀಲು ಚೌಡಯ್ಯ ಸ್ಮಾರಕ ಭವನ ಎಂದು ಖಾಸಗಿ ಟ್ರಸ್ಟ್ ಹೆಸರಿಗೆ ಖಾತೆ ಮಾಡಿದ್ದು, ಈ ಬಗ್ಗೆ ಜಿಲ್ಲಾಧಿಕಾರಿಗಳು ತನಿಖೆ ನಡೆಸಬೇಕು. ಅಲ್ಲದೆ ಸದರಿ ಆಗಿರುವ ಖಾತೆಯನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಧ್ವನಿಗೂಡಿಸಿದ ಮಾಜಿ ಅಧ್ಯಕ್ಷ ಸೋಮಣ್ಣ ಮತ್ತು ಸದಸ್ಯ ತುಂಬಲ ಪ್ರಕಾಶ್ ಅಕ್ರಮ ಖಾತೆ ಆಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಈ ಬಗ್ಗೆ ಮುಖ್ಯಾಧಿಕಾರಿ, ರಾಜಸ್ವ ನಿರೀಕ್ಷಕರು ಮತ್ತು ವಿಷಯ ನಿರ್ವಾಹಕನ ಮೇಲೆ ಶಿಸ್ತು ಕ್ರಮಕ್ಕೆ ಆದೇಶವಾಗಿದೆ. ಆಗಿರುವ ಖಾತೆಯನ್ನು ತಕ್ಷಣವೇ ರದ್ದುಪಡಿಸಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ, ಮಾಜಿ ಅಧ್ಯಕ್ಷರಾದ ಎನ್.ಸೋಮಣ್ಣ, ಟಿ.ಎಂ.ನಂಜುಂಡಸ್ವಾಮಿ, ಎಸ್.ಮದನ್ ರಾಜ್, ಪ್ರೇಮಾ ಮರಯ್ಯ, ನಾಗರತ್ನ ಮಾದೇಶ್, ಸದಸ್ಯರಾದ ಎಲ್. ಮಂಜುನಾಥ್, ಆರ್.ಅರ್ಜುನ್, ಸಿಸ್ಟಂ ಸಿದ್ದು, ಮೆಡಿಕಲ್ ನಾಗರಾಜು, ಎಸ್.ಕೆ. ಕಿರಣ್, ಬಾದಾಮಿ ಮಂಜು, ಬೇಬಿ ಹೇಮಂತ್, ಮಾದೇವಿ, ಜಿ.ರೂಪಶ್ರೀ ಪರಮೇಶ್, ರೂಪ ಕರಿಯಪ್ಪ ಮಹದೇವಮ್ಮ, ಪಿ.ಶೋಭರಾಣಿ, ಆರ್.ತೇಜಸ್ವಿನಿ, ಮೋಹನ್, ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ವ್ಯವಸ್ಥಾಪಕ ಮಹೇಂದ್ರ, ಎಫ್‌ಡಿಎ ತ್ರಿವೇಣಿ, ಆರ್‌ಐ ಅಶೋಕ, ಜೆಇ ಸಿದ್ದಯ್ಯ, ಆರೋ ಗ್ಯಾಧಿಕಾರಿ ಮಧು, ಎಸ್‌ಡಿಎ ಆಶಾ, ಪ್ರಿಯಾಂಕಾ, ವಿನಯ್, ಮಹೇಂದ್ರ ಇತರರಿದ್ದರು.


ತಿ.ನರಸೀಪುರ ಪುರಸಭೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

2 ಕೋಟಿ ರೂ. ಮಳಿಗೆ ಬಾಡಿಗೆ

ಪುರಸಭೆ ನಿರ್ಮಿಸಿರುವ 111 ಮಳಿಗೆಗಳಲ್ಲಿ ಬಹುತೇಕ ಬಾಡಿಗೆದಾರರು ಜನಪ್ರತಿನಿಧಿಗಳಾಗಿದ್ದಾರೆ. 2 ಕೋಟಿ ರೂ.ಗೂ ಹೆಚ್ಚಿನ ಬಾಡಿಗೆ ಉಳಿಸಿಕೊಂಡಿದ್ದಾರೆ. ಕೋರ್ಟ್ ಈಗಾಗಲೇ ತೆರವು ಮಾಡಿಸುವಂತೆ ಆದೇಶ ನೀಡಿದ್ದರೂ ಯಾಕೆ ನೀವು ತೆರವು ಕಾರ್ಯಕ್ಕೆ ಮುಂದಾಗಿಲ್ಲ ಎಂಬ ಅರ್ಜುನ್ ಪ್ರಶ್ನೆಗೆ ಸಿಇಓ ವಸಂತ ಕುಮಾರಿ ಯಾವುದೇ ಮುಲಾಜಿಲ್ಲದೇ ಬಾಕಿ ಬಾಡಿಗೆ ಉಳಿಸಿಕೊಂಡಿರುವ ಬಾಡಿಗೆದಾರರಿಗೆ ನೋಟೀಸ್ ನೀಡಿ ಕೇಸು ದಾಖಲಿಸುತ್ತೇವೆ ಎಂದರು.

ಅಕ್ರಮ ಮದ್ಯ ಸೇವಿಸಿ ವ್ಯಕ್ತಿ ಸಾವು

ನಂಜನಗೂಡು, ಮಾ.31– ಕಿರಾಣಿ ಅಂಗಡಿಗಳಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಮದ್ಯ ಸೇವಿಸಿ ಆದಿವಾಸಿಯೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ನಾಗಣಪುರ ಆದಿವಾಸಿ ಕಾಲೋನಿಯಲ್ಲಿ ನಡೆದಿದೆ.

ತಾಲೂಕಿನ ಹೆಡಿಯಾಲ ಬಳಿಯ ನಾಗಣಪುರ ಆದಿವಾಸಿ ಕಾಲೋನಿ ನಿವಾಸಿ ರಾಜು (54) ಮೃತಪಟ್ಟವರು. ಕುಡಿತದ ಚಟಕ್ಕೆ ದಾಸನಾಗಿದ್ದ ರಾಜು ಭಾನುವಾರ ಕಂಠಪೂರ್ತಿ ಮದ್ಯ ಸೇವಿಸಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಇದರೊಂದಿಗೆ ಅಕ್ರಮ ಮದ್ಯ ಮಾರಾಟಕ್ಕೆ ಮೂರನೇ ಬಲಿಯಾದಂತಾಗಿದೆ.

ಆದಿವಾಸಿ ಬಡಾವಣೆಗಳ ಸುತ್ತಮುತ್ತ ಕಿರಾಣಿ ಅಂಗಡಿಗಳು ಮತ್ತು ಪೆಟ್ಟಿ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಇದರಿಂದ ಆದಿವಾಸಿಗಳು ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದಾರೆ. ಕಳೆದ 20 ದಿನಗಳ ಹಿಂದೆ ಈರೇಗೌಡನಹುಂಡಿ ಗ್ರಾಮದ ಚೆನ್ನಪ್ಪ ಹಾಗೂ ಬಳ್ಳೂರುಹುಂಡಿ ಗ್ರಾಮದ ಮಹದೇವ ಎಂಬುವರು ಅಕ್ರಮ ಮದ್ಯ ಸೇವಿಸಿ ಬಲಿಯಾಗಿದ್ದರು. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ನಿಂಗಮ್ಮ ನಿಧನ



ಹುಣಸೂರು, ಮಾ.31– ನಗರದ ದಾವಣಿ ಬೀದಿ ನಿವಾಸಿ ನಿಂಗಮ್ಮ (68) ಶನಿವಾರ ಬೆಳಗ್ಗೆ ನಿಧನರಾದರು.

ಮೃತರು ಪತಿ, ಐವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ಶನಿವಾರ ಸಂಜೆ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಮುಂಬೈ ವಿರುದ್ಧ ಕೆಕೆಆರ್‌ಗೆ ಹೀನಾಯ ಸೋಲು



ಮುಂಬೈ, ಮಾ.31– ರಯಾನ್ ರಿಕಲ್ಟನ್ ಅವರ ಅರ್ಧಶತಕ ಹಾಗೂ ಅಶ್ವನಿ ಕುಮಾರ್ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಕೋಲ್ಕತ್ತಾ ನೈಟ್ ರೈಡರ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ ಹೀನಾಯ ಸೋಲು ಅನುಭವಿಸಿದೆ. ಇದರೊಂದಿಗೆ 8 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದ ಮುಂಬೈ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ 16.2 ಓವರ್‌ಗಳಲ್ಲಿ 116 ರನ್ ಗಳಿಗೆ ಆಲೌಟಾಯಿತು. ಇನ್ನಿಂಗ್ಸ್ ಆರಂಭದಿಂದಲೂ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿದ ಕೆಕೆಆರ್ ಯಾವ ಹಂತದಲ್ಲೂ ಸುಧಾರಣೆ ಕಾಣಲಿಲ್ಲ. ಬದಲಿಗೆ ಸಾಧಾರಣ ಮೊತ್ತ ದಾಖಲಿಸಿತು. ತಂಡದ ಪರ ನಾಯಕ ಅಜಿಂಕ್ಯಾ ರಹಾನೆ 11, ಅಂಗಕ್ರಿಶ್ ರಘುವಂಶಿ 26, ರಿಂಕು ಸಿಂಗ್ 17, ಮನೀಶ್ ಪಾಂಡೆ 19, ರಮಣ್‌ದೀಪ್ ಸಿಂಗ್ 22 ರನ್ ಗಳಿಸಿದರು. ಮುಂಬೈ ಪರ ಅಶ್ವನಿ ಕುಮಾರ್ 4, ದೀಪಕ್ ಚಹಾರ್ 2, ಟ್ರೆಂಟ್ ಬೌಲ್ಟ್, ಹಾರ್ದಿಕ್ ಪಾಂಡ್ಯ, ವಿಘ್ನೇಶ್ ಪುತ್ತೂರ್ ಹಾಗೂ ಮಿಚೆಲ್ ಸ್ಯಾಂಟ್ನರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

117 ರನ್‌ಗಳ ಸಾಧಾರಣ ಮೊತ್ತ ಬೆನ್ನತ್ತಿದ ಮುಂಬೈ ತಂಡದ ಮೊತ್ತ 46 ಆಗ ಆಗಿದ್ದ ವೇಳೆ 13 ರನ್ ಗಳಿಸಿದ್ದ ರೋಹಿತ್ ಶರ್ಮಾ ವಿಕೆಟ್ ಕಳೆದುಕೊಂಡಿತು. ನಂತರ ಬಂದ ವಿಲ್ಲ್ ಜಾಕ್ಸ್ 16 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ನಡೆಸಿದ ರಯಾನ್ ರಿಕಲ್ಟನ್ 41 ಎಸೆತಗಳಲ್ಲಿ 5 ಸಿಕ್ಸರ್, 4 ಬೌಂಡರಿ ಒಳಗೊಂಡ ಅಜೇಯ 62 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಇವರಿಗೆ ಉತ್ತಮ ಸಾಥ್ ನೀಡಿದ ಸೂರ್ಯ ಕುಮಾರ್ ಯಾದವ್ 27 ರನ್ ಗಳಿಸಿ ಅಜೇಯರಾಗಿ ಉಳಿದರು. ಕೆಕೆಆರ್ ಪರ ಆಂಡ್ರೆ ರಸೆಲ್ 2 ವಿಕೆಟ್ ಪಡೆದರು. ಅಶ್ವನಿ ಕುಮಾರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಡೆಲ್ಲಿ ಕ್ಯಾಪಿಟಲ್ಸ್, ರಾಜಸ್ಥಾನ್ ರಾಯಲ್ಸ್‌ಗೆ ಜಯ: 18ನೇ ಆವೃತ್ತಿಯ ಐಪಿಎಲ್ ಪಂದ್ಯಾವಳಿಯ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ 7 ವಿಕೆಟ್‌ಗಳಿಂದ ಜಯಗಳಿಸಿದರೇ, ಸಂಜೆ ನಡೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ರಾಜಸ್ಥಾನ್ ರಾಯಲ್ಸ್ ತಂಡಗಳು 6 ರನ್‌ಗಳಿಂದ ಜಯ ಗಳಿಸಿದೆ.

ಡೆಲ್ಲಿಗೆ ಜಯ: ಇಲ್ಲಿನ ವೈಎಸ್.ರಾಜಶೇಖರ ರೆಡ್ಡಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 18.4 ಓವರ್‌ಗಳಲ್ಲಿ 163 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಅಂಕಿತ್ ವರ್ಮಾ 74, ಟ್ರಾವಿಸ್ ಹೆಡ್ 22, ಹೆನ್ರಿಚ್ ಕ್ಲಾಸೆನ್ 32ರನ್ ಗಳಿಸಿದರು. ಡೆಲ್ಲಿ ಪರ ಮಿಚೆಲ್ ಸ್ಟಾರ್ಕ್ 5, ಕುಲದೀಪ್ ಯಾದವ್ 3, ಮೋಹಿತ್ ಶರ್ಮಾ 1 ವಿಕೆಟ್ ಪಡೆದರು.

164 ರನ್‌ಗಳ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 16 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 166 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ಜೇಕ್ ಫ್ರೇಸರ್–ಮೆಕ್‌ಗುರ್ಕ್ 38, ಫಾಫ್ ಡುಪ್ಲೆಸಿಸ್ 50, ಅಭಿಷೇಕ್ ಪೋರೆಲ್ 34, ಕೆ.ಎಲ್.ರಾಹುಲ್ 15, ಟ್ರಿಸ್ಟನ್ ಸ್ಟಬ್ಸ್ 21 ರನ್ ಗಳಿಸಿದರು. ಹೈದರಾಬಾದ್ ಪರ ಜೀಶನ್ ಅನ್ಸಾರಿ 3 ವಿಕೆಟ್ ಪಡೆದರು. ಮಿಚೆಲ್ ಸ್ಟಾರ್ಕ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಆರ್‌ಆರ್‌ಗೆ ಜಯ: ಇಲ್ಲಿನ ಬರ್ಸಾಪರ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿತು. ತಂಡದ ಪರ ನಿತೀಶ್ ರಾಣಾ 81, ರಿಯಾನ್ ಪರಾಗ್ 37, ಸಂಜು ಸ್ಯಾಮ್ಸನ್ 20, ಹೆಟ್ಮೆಯರ್ 19 ರನ್ ಗಳಿಸಿದರು. ಚೆನ್ನೈ ಪರ ಖಲೀಲ್ ಅಹಮ್ಮದ್, ನೂರ್ ಅಹಮ್ಮದ್, ಮತೀಶ ಪತಿರಾಣ ತಲಾ 2, ಅಶ್ವಿನ್, ಜಡೇಜಾ ತಲಾ ಒಂದೊಂದು ವಿಕೆಟ್ ಪಡೆದರು.

183 ರನ್‌ಗಳ ಗುರಿ ಬೆನ್ನತ್ತಿದ ಚೆನ್ನೈ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ರಾಹುಲ್ ತ್ರಿಪಾಠಿ 23, ಋತುರಾಜ್ ಗಾಯಕ್ವಾಡ್ 63, ಶಿವಂ ದುಬೆ 18, ರವೀಂದ್ರ ಜಡೇಜಾ 32, ಎಂ.ಎಸ್.ಧೋನಿ 16, ಜೇಮಿ ಓವರ್‌ಟನ್ 11 ರನ್ ಗಳಿಸಿದರು. ರಾಜಸ್ಥಾನ್ ಪರ ವಾನಿಂದು ಹಸರಂಗ 4, ಜೋಫ್ರಾ ಆರ್ಚರ್, ಸಂದೀಪ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದರು. ನಿತೀಶ್ ರಾಣಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	2	2	0	0	4
ಡೆಲ್ಲಿ	2	2	0	0	4
ಲಕ್ನೋ	2	1	1	0	2
ಗುಜರಾತ್	2	1	1	0	2
ಪಂಜಾಬ್	1	1	0	0	2
ಮುಂಬೈ	3	1	2	0	2
ಚೆನ್ನೈ	3	1	2	0	2
ಹೈದರಾಬಾದ್	3	1	2	0	2
ರಾಜಸ್ಥಾನ್	3	1	2	0	2
ಕೋಲ್ಕತ್ತಾ	3	1	2	0	2

ಇಂದಿನ ಪಂದ್ಯ

ಲಕ್ನೋ ಸೂಪರ್ ಜಯಂಟ್ಸ್ V/S ಪಂಜಾಬ್ ಕಿಂಗ್ಸ್

ಸಮಯ: ಸಂಜೆ 7.30

ಸ್ಥಳ : ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ, ಲಕ್ನೋ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬ್ಯಾಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
L2 ಎಂಪುರಾನ್ (ತ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಲ್ಲಿ ಯುಗಾದಿ ಸಂಭ್ರಮ–ಸಡಗರ

ಹಿಂದೂ ಹೊಸ ವರ್ಷಾರಂಭದ ಉತ್ಸಾಹ



ಮೈಸೂರು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ 23ನೇ ವಾರ್ಡಿನಲ್ಲಿ ಯುಗಾದಿ ಹಬ್ಬದ ಅಂಗವಾಗಿ ಶಾಸಕ ಹರೀಶ್ ಗೌಡರು ಪೌರಕಾರ್ಮಿಕರಿಗೆ ಬೇವು–ಬೆಲ್ಲ ವಿತರಿಸಿ ಶುಭಾಶಯ ಕೋರಿದರು. ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈಕಾ ಪ್ರೇಮ್ ಕುಮಾರ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಮಹದೇವ್, ಗುರುರಾಜ್ ಶೆಟ್ಟಿ ಪ್ರಮೋದ್‌ಗೌಡ, ನವೀನ್, ಸಂದೀಪ್,ಹರೀಶ್ ಗೌಡ, ರವಿಚಂದ್ರ, ನೀತು, ಶಿವು, ರವಿ, ಎಸ್ ಎನ್ ರಾಜೇಶ್, ಸಂತೋಷ್, ಮಂಜು, ಜಗದೀಶ್ ಹಾಗೂ ಇನ್ನಿತರರು ಈ ವೇಳೆ ಹಾಜರಿದ್ದರು.

ಮೈಸೂರು, ಮಾ.31(ಎಸ್‌ಬಿಡಿ)– ಮೈಸೂರು ಸೇರಿದಂತೆ ನಾಡಿನೆಲ್ಲೆಡೆ ಭಾನುವಾರ 'ಯುಗಾದಿ' ಹಬ್ಬವನ್ನು ಸಂಭ್ರಮ–ಸಡಗರದಿಂದ ಆಚರಿಸಲಾಯಿತು.

ಹಿಂದೂ ಕ್ಯಾಲೆಂಡರ್ ಪ್ರಕಾರ 'ಯುಗಾದಿ' ಯಂದು ಹೊಸ ವರ್ಷಾರಂಭವಾಗುತ್ತದೆ ಎಂಬ ನಂಬಿಕೆ ಇರುವುದರಿಂದ ಮನೆ ಮುಂದೆ ಮಾವು–ಬೇವಿನಿಂದ ತೋರಣ ಕಟ್ಟಿ, ಎಣ್ಣೆ ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ ಸಂಭ್ರಮಿಸಿದರು. ಮನೆಯ ಹಸು–ಕರುಗಳನ್ನೂ ಸ್ವಚ್ಛಗೊಳಿಸಿ, ಅವುಗಳನ್ನು ಸಿಂಗರಿಸಿ ಪೂಜೆ ಸಲ್ಲಿಸಿದರು. ಮನೆಯಲ್ಲಿ ವಿಶೇಷ ಪೂಜೆ ಮಾಡುವುದರ ಜೊತೆಗೆ ದೇವಾಲಯಗಳಿಗೂ ತೆರಳಿ ಪೂಜೆ ಸಲ್ಲಿಸಿದರು.

'ಯುಗಾದಿ' ಎಂದರೆ ಬೇವು–ಬೆಲ್ಲದ ಹಬ್ಬ. ಹಾಗೆಯೇ ಪೂಜೆ ಬಳಿಕ ಬೇವು–ಬೆಲ್ಲದ ಮಿಶ್ರಣವನ್ನು ಸೇವಿಸುವ ಮೂಲಕ ಕಷ್ಟ–ಸುಖಗಳೆರಡನ್ನೂ ಸಮಾನವಾಗಿ ಸ್ವೀಕರಿಸುವ ಶಕ್ತಿ ನೀಡುವಂತೆ ದೇವರನ್ನು ಬೇಡಿಕೊಂಡರು. ಯುಗಾದಿಯ ವಿಶೇಷ ಖಾದ್ಯ 'ಒಬ್ಬಟ್ಟು' ಜೊತೆಗೆ ಪಾಯಸ, ಕೋಸಂಬರಿ, ಚಿತ್ರಾನ್ನ ಇನ್ನಿತರ ಖಾದ್ಯಗಳ ಹಬ್ಬದೂಟ ಸವಿದರು. ನಂತರ ದೇವಾಲಯದ ಮುಂದೆ ಸಿಂಗರಿಸಿದ್ದ ಜೋಡೆತ್ತುಗಳನ್ನು ಸಾಲಾಗಿ ನಿಲ್ಲಿಸಿ, ಪೂಜೆ ಸಲ್ಲಿಸಿ, ಹೊನ್ನಾರು ಕಟ್ಟಿ ಉಳುಮೆ ಮಾಡುವ ಮೂಲಕ ಉತ್ತಮ ಮಳೆ–ಬೆಳೆಗೆ ಪ್ರಾರ್ಥಿಸಿದರು. ಕೆಲವರು ತಮ್ಮ ಪೂರ್ವಜರಿಗೆ ಹೊಸ ಬಟ್ಟೆಗಳೊಂದಿಗೆ ಎಡೆ ಇಟ್ಟು ಪೂಜೆ ಸಲ್ಲಿಸಿದರು. ನಗರದಲ್ಲೂ ಯುಗಾದಿ ಸಂಭ್ರಮ ಜೋರಾಗಿತ್ತು.

ಹೊಸತೊಡಕು: ಹಬ್ಬದ ಮರುದಿನವನ್ನು ಹೊಸ ತೊಡಕು ಎನ್ನುತ್ತಾರೆ. ಕೆಲವೆಡೆ ವರ್ಷತೊಡಕು ಎನ್ನಲಾಗುತ್ತದೆ. ಅದರಲ್ಲೂ ಯುಗಾದಿ ಹೊಸ ತೊಡಕು ತುಂಬಾ ವಿಶೇಷ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಸೇರಿದಂತೆ ಹಳೇ ಮೈಸೂರು ಭಾಗದಲ್ಲಂತೂ ಹೊಸ ತೊಡಕಿನಿಂದಲೇ ಹಬ್ಬದ ಮೆರುಗು ಹೆಚ್ಚುತ್ತದೆ. ಮಾಂಸಾಹಾರಿಗಳಿಗೆ ಹೊಸ ತೊಡಕು ಇನ್ನೂ ವಿಶೇಷ. ಏಕೆಂದರೆ ಇದು ಭರ್ಜರಿ ಬಾಡೂಟದ ದಿನ. ಆದರೆ ಈ ಬಾರಿ ಸೋಮವಾರ ಹೊಸತೊಡಕು ಬಂದಿರುವುದರಿಂದ ಹಲವು ಮಂದಿ ಬಾಡೂಟವನ್ನು ಮಂಗಳವಾರಕ್ಕೆ ಮುಂದೂಡಿದ್ದಾರೆ. ಯುಗಾದಿ ಚೀಟಿ ಕಟ್ಟಿದ್ದವರೂ ಮಂಗಳವಾರವೇ ಮಾಂಸ ಹಂಚಿಕೊಳ್ಳಲಿದ್ದಾರೆ. ಹೊಸ ತೊಡಕಿನ ಹಿನ್ನೆಲೆಯಲ್ಲಿ ಚಿಕನ್ ಹಾಗೂ ಮಟನ್ ಬೆಲೆಯೂ ಹೆಚ್ಚಾಗಿದೆ.

ಜೂಜು–ಮೋಜು: ಯುಗಾದಿ ಹಬ್ಬದಲ್ಲಿ ಜೂಜು ಅಂದರೆ ಇಸ್ಪೀಟ್ ಆಡುವುದು ಸಂಪ್ರದಾಯದಂತೆ ನಡೆದು ಬಂದಿದೆ. ಜೂಜಾಡುವುದು ಕಾನೂನಿನನ್ವಯ ತಪ್ಪಾದರೂ ಯುಗಾದಿಯಲ್ಲಿ ಅವ್ಯಾಹತವಾಗಿದೆ. ಈ ಬಾರಿಯೂ ಯುಗಾದಿ ಜೂಜು ಜೋರಾಗಿತ್ತು. ಸ್ನೇಹಿತರೆಲ್ಲಾ ಒಟ್ಟುಗೂಡಿ ಇಸ್ಪೀಟ್ ಆಟವಾಡಿದರು. ಮನೆ ಮುಂದಿನ ವಿಶಾಲ ಜಗುಲಿಗಳು, ಹೊರಾಂಡದಲ್ಲೇ ಎಲೆಗಳನ್ನು ಹಾಕಿದರು. ಪೊಲೀಸರು ಗಸ್ತು ತಿರುಗುವ ಮಾರ್ಗದಲ್ಲೂ ಇಸ್ಪೀಟ್ ಆಟ ನಡೆದಿತ್ತು. ಸಂಜೆಯಾಗುತ್ತಿದ್ದಂತೆ ಹೆಚ್ಚು ಪ್ರಜ್ವಲಿಸುವ ವಿದ್ಯುತ್ ದೀಪದ ವ್ಯವಸ್ಥೆಯನ್ನೂ ಮಾಡಿಕೊಂಡು, ಜೂಜಾಡಿದರು. ಹಬ್ಬದ ಕಾರಣಕ್ಕೆ ಪೊಲೀಸರೂ ಸುಮ್ಮನಾದರು.

ಆದರೆ ಕೆಲವೆಡೆ ದಾಳಿ ನಡೆಸಿ, ಇಸ್ಪೀಟ್ ಆಡುತ್ತಿದ್ದವರ ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಿದರು. ಯುಗಾದಿಯಂದು ಮೋಜಿಗಾಗಿ ಆಡುವ ಇಸ್ಪೀಟ್, ಹತ್ತಾರು ದಿನ ಮುಂದುವರೆಯುವ ಸಾಧ್ಯತೆ ಇರುತ್ತದೆ. ಬೇರೆ ಊರುಗಳಿಗೆ ಹೋಗಿ ಭಾರಿ ಹಣ ಪಣಕ್ಕಿಟ್ಟು ಆಡಬಹುದು. ಹಲವರು ಲಕ್ಷ ಲಕ್ಷ ಹಣ ಕಳೆದುಕೊಳ್ಳುತ್ತಾರೆ. ಈ ವೇಳೆ ನಡೆಯುವ ಸಣ್ಣ ಜಗಳಗಳು ವೈಷಮ್ಯಕ್ಕೆ ತಿರುಗಬಹುದು. ಹಾಗಾಗಿ ಪೊಲೀಸರು ಗಸ್ತು ಮಾಡಲಾರಂಭಿಸಿದ್ದಾರೆ.

ಏ. 11ರಿಂದ 'ರಜಾ–ಮಜಾ' ಬೇಸಿಗೆ ಶಿಬಿರ

ಮೈಸೂರು, ಮಾ. 31– ನಟನ ರಂಗಶಾಲೆಯು ತನ್ನ ಚಟುವಟಿಕೆಯ ಭಾಗವಾಗಿ 24ನೇ ವರ್ಷದ 'ರಜಾ–ಮಜಾ' ಮಕ್ಕಳ ಬೇಸಿಗೆ ಶಿಬಿರವನ್ನು ಏಪ್ರಿಲ್ 11ರಿಂದ ಮೇ 03ರ ವರೆಗೆ ದಟ್ಟಗಳ್ಳಿಯಲ್ಲಿರುವ ಸುಪ್ರೀಮ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಆಯೋಜಿಸಿದೆ. ಶಿಬಿರದಲ್ಲಿ ಸತತ 23 ದಿನಗಳ ಕಾಲ ನಾಟಕಕಲೆಯನ್ನು ಕೇಂದ್ರವಾಗಿರಿಸಿಕೊಂಡು ಕರ್ನಾಟಕದ ದೇಸಿ ಜಾನಪದ ಕಲಾ ಪ್ರಕಾರಗಳು, ಹಾಡುಗಾರಿಕೆ, ಕರಕುಶಲ ಕಲೆ, ಸಂವಹನ ಕೌಶಲ, ಅಭಿನಯ, ಸಾಧಕರೊಂದಿಗೆ ಸಂವಾದ, ಕಂಪೆನಿ ಮತ್ತು ಆಧುನಿಕ ನಾಟಕಗಳ ಕುರಿತು ಮಕ್ಕಳಿಗೆ ಸಂಪೂರ್ಣ ಮನೋರಂಜನೆಯೊಂದಿಗೆ ವಿಶಿಷ್ಟ ಪ್ರಾತ್ಯಕ್ಷಿಕೆಗಳ ಮೂಲಕ ರಂಗಭೂಮಿಯಲ್ಲಿ ಪ್ರಖ್ಯಾತರಾದ ಸಾಧಕರು ಮಕ್ಕಳಿಗೆ ತರಬೇತಿ ನೀಡಲಿದ್ದಾರೆ. ಮಾರ್ಚ್ 30 ರಂದು ಬೆಳಿಗ್ಗೆ 10ರಿಂದ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಅರ್ಜಿ ವಿತರಣೆ ಮತ್ತು ಪ್ರವೇಶ ಪ್ರಕ್ರಿಯೆ ನಡೆಯಲಿದ್ದು, ಹೆಚ್ಚಿನ ವಿವರಗಳಿಗೆ 7259537777, 9480468327, 9845595505 ಸಂಪರ್ಕಿಸಬಹುದು.

ಎಳೆಯರ ಮೇಳ–2025

ಮೈಸೂರು, ಮಾ. 31– ಬೇಸಿಗೆ ರಜಾ ದಿನಗಳಲ್ಲಿ ಮಕ್ಕಳಿಗೆ ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ 'ಎಳೆಯರ ಮೇಳ–2025' ಬೇಸಿಗೆ ಶಿಬಿರವನ್ನು ಏ.1ರಿಂದ 21ರವರೆಗೆ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. 8 ವರ್ಷದಿಂದ 14 ವರ್ಷ ವಯೋಮಾನದ ಮಕ್ಕಳಿಗೆ ಭಾಗವಹಿಸಲು ಅವಕಾಶವಿರುತ್ತದೆ. ಈಗಾಗಲೇ ಅರ್ಜಿಗಳನ್ನು ವಿತರಿಸಿ, ನೋಂದಣಿ ಮಾಡಿಕೊಳ್ಳಲಾಗುತ್ತಿದೆ.

ಹೆಚ್ಚಿನ ವಿವರಗಳಿಗೆ ಚಂದ್ರಶೇಖರಾಚಾರ್ (94487 39365), ಎಂ. ಗುರುಸ್ವಾಮಿ (99454 72541), ಮಂಜುನಾಥ (ಕಾಚಕ್ಕಿ) ಇವರುಗಳನ್ನು ಸಂಪರ್ಕಿಸಲು ಕೋರಿದೆ.

ಹಿರಿಯ ಸಾಹಿತಿ ಪ್ರೊ.ಕೆ.ಭೈರವಮೂರ್ತಿ ಸಾಹಿತ್ಯ ಕೊಡುಗೆ ಅಪಾರ

ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಸ್ಮರಣೆ



ಮೈಸೂರಿನ ರಾಮಾನುಜ ರಸ್ತೆಯ ನಮೋ ಯೋಗ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ.ಕೆ.ಭೈರವಮೂರ್ತಿ ಅವರ ಭಾವಚಿತ್ರಕ್ಕೆ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಮಾ.31(ಪಿಎಂ)– ಹಿರಿಯ ಸಾಹಿತಿ ಪ್ರೊ.ಕೆ.ಭೈರವಮೂರ್ತಿ ಅವರು ಸರಳ–ಸಜ್ಜನ ಹಾಗೂ ಸದ್ಗುಣ ವ್ಯಕ್ತಿತ್ವದವರು. ಅವರ ಸಾಹಿತ್ಯ ಕೊಡುಗೆ ಅಪಾರ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸ್ಮರಿಸಿದರು.

ಮೈಸೂರಿನ ರಾಮಾನುಜ ರಸ್ತೆಯ ನಮೋ ಯೋಗ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹಾಗೂ ಹಿಮಾಲಯ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಎ.ಅನಂತ ಅಯ್ಯಂಗಾರ್ ಮತ್ತು ಕಮಲಮ್ಮ ಸ್ಮರಣಾರ್ಥದ ದತ್ತಿ ಕಾರ್ಯಕ್ರಮದಡಿ ಸೋಮವಾರ ಹಮ್ಮಿಕೊಂಡಿದ್ದ 'ಹಿರಿಯ ಸಾಹಿತಿ ಪ್ರೊ.ಕೆ. ಭೈರವಮೂರ್ತಿ ; ಒಂದು ನೆನಪು' ಕಾರ್ಯಕ್ರಮಕ್ಕೆ ಭೈರವಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತಿಗಳ ಕೊಡುಗೆ ಸಮಾಜಕ್ಕೆ ದಾರಿದೀಪ. ಸಮಾಜಕ್ಕೆ ಸನ್ಮಾರ್ಗ ತೋರುವಲ್ಲಿ ಸಾಹಿತಿಗಳ ಪಾತ್ರ ಅಪಾರ. ಅನೇಕ ದಿಗ್ಗಜ ಸಾಹಿತಿಗಳು ತಮ್ಮ ಬರವಣಿಗೆ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ಸಾರಿದ್ದಾರೆ. ಅಂತಹ ದಿಗ್ಗಜ ಸಾಹಿತಿಗಳಲ್ಲಿ ಪ್ರೊ.ಕೆ.ಭೈರವಮೂರ್ತಿಯೂ ಒಬ್ಬರು. ದೇಜಗೌ (ದೇ.ಜವರೇಗೌಡ) ಅವರಿಗೆ ಪ್ರೊ.ಕೆ.ಭೈರವಮೂರ್ತಿ ಹಾಗೂ ಡಾ.ಸಿಪಿಕೆ (ಸಿ.ಪಿ.ಕೃಷ್ಣಕುಮಾರ್) ಎರಡು ಕೈಗಳಂತೆ ಇದ್ದರು ಎಂದರು.

ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್ ಮಾತನಾಡಿ, ಪ್ರೊ.ಕೆ.ಭೈರವಮೂರ್ತಿ ಅವರಿಗೆ ಅವರೇ ಸಾಟಿ. ಹೃದಯವಂತರಾದ ಅವರು ಮಂಡ್ಯ ಜಿಲ್ಲೆಯಲ್ಲಿ 1945ರ ಮೇ 30ರಂದು ಜನಿಸಿದರು. ಮಹಾರಾಜ ಸಂಜೆ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿ, ಸಾಹಿತಿಯಾಗಿ ಬೆಳೆದರು. ಕಿರಿಯ ಸಾಹಿತಿ ಹಾಗೂ ಲೇಖಕರನ್ನು ಬೆನ್ನು ತಟ್ಟಿ ಪ್ರೋತ್ಸಾಹ ನೀಡುವ ಮೇರು ವ್ಯಕ್ತಿತ್ವ ಅವರದು. ಹಿರಿಯ ಸಾಹಿತಿ ಸಿಪಿಕೆ ಅವರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಭೈರವಮೂರ್ತಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಬೇಕಿತ್ತು ಎಂದು ಹೇಳಿದರು.

ಸಾವಿರ ವಚನಗಳನ್ನು ರಚಿಸಿದ ಹೆಗ್ಗಳಿಕೆ ಭೈರವಮೂರ್ತಿ ಅವರಿಗೆ ಸಲ್ಲುತ್ತದೆ. ಅನೇಕ ಗಣ್ಯರ ಅಭಿನಂದನಾ ಗ್ರಂಥಗಳನ್ನು ಅವರು ಹೊರತಂದಿದ್ದಾರೆ. ಹನಿಗವನ, ಚುಟುಕು ಸಾಹಿತ್ಯದಲ್ಲೂ ಅವರ ಕೊಡುಗೆ ಇದೆ. ಅವರ 'ಮಾತೃತೀರ್ಥ' ಕೃತಿ ತ್ರಿಪದಿಗಳಲ್ಲಿ ತಾಯಿಯ ಮಹತ್ವ ಅನಾವರಣಗೊಳಿಸಿದೆ. ಭೈರವಮೂರ್ತಿಯವರು ಅನೇಕ ಸಾಹಿತಿಗಳನ್ನು ವಿಮರ್ಶೆ ಸಹ ಮಾಡಿದ್ದಾರೆ. 100ಕ್ಕೂ ಹೆಚ್ಚು ಕೃತಿಗಳಿಗೆ ಮುನ್ನುಡಿ ರಚಿಸಿರುವ ಹಿರಿಮೆ ಸಹ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂಸ್ಕೃತಿ ಪೋಷಕಿ ವೈದೇಹಿ, ಸಮಾಜ ಸೇವಕರಾದ ಡಾ.ಎ.ಪುಷ್ಪ ಅಯ್ಯಂಗಾರ್, ಡಾ.ಕೆ.ರಘುರಾಮ್ ವಾಜಪೇಯಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಸಂಚಾಲಕ ಎಂ.ವಿ.ನಾಗೇಂದ್ರಬಾಬು, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮ.ನ. ಲತಾಮೋಹನ್ ಮತ್ತಿತರರು ಹಾಜರಿದ್ದರು.

'ಮಹಾರಾಜ ಕಾಲೇಜು–ಒಂದು ಚಾರಿತ್ರಿಕ ಬೆಳವಣಿಗೆ' ಗ್ರಂಥ ಪ್ರಕಟಿಸಲು ಮೈಸೂರು ವಿವಿ–ದಿ ಮಿಥಿಕ್ ಸೊಸೈಟಿ ಒಡಂಬಡಿಕೆ



ಮೈಸೂರು, ಮಾ.31(ಆರ್‌ಕೆ)– 'ಮೈಸೂರಿನ ಮಹಾರಾಜ ಕಾಲೇಜು–ಒಂದು ಚಾರಿತ್ರಿಕ ಬೆಳವಣಿಗೆ (1833–1956)' ವಿಷಯ ಸಂಬಂಧ ಸಂಶೋಧನೆ ನಡೆಸಿ, ಅದರ ಮಾಹಿತಿಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಲು ಮೈಸೂರು ವಿಶ್ವವಿದ್ಯಾನಿಲಯವು ದಿ ಮಿಥಿಕ್ ಸೊಸೈಟಿಯೊಡನೆ ಇಂದು ಒಡಂಬಡಿಕೆ ಮಾಡಿಕೊಂಡಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮತ್ತು ಮಿಥಿಕ್ ಸೊಸೈಟಿ ಗೌರವ ಕಾರ್ಯದರ್ಶಿ ಡಾ.ಎಸ್.ರವಿ, ಒಡಂಬಡಿಕೆಗೆ ಸಹಿ ಮಾಡಿದರು. ಮಹಾರಾಜ ಕಾಲೇಜು ಪ್ರಾಧ್ಯಾಪಕರಾದ ಡಾ.ರೋಹಿತ್ ಈಶ್ವರ, ಡಾ.ಪವಮಾನ ಹಾಗೂ ಡಾ.ಗ್ಯಾವಿನ್ ಜೂಡ್ ವಿಲ್ಸನ್ ಅವರು ಸಂಶೋಧನೆಯಲ್ಲಿ ತೊಡಗಿದ್ದು ಇತಿಹಾಸಕಾರರಾದ ಡಾ.ನರೇಂದ್ರಪ್ರಸಾದ್ ಅವರು ಭಾರತದ ಪತ್ರಗಾರ ಹಾಗೂ ಇನ್ನಿತರ ಗ್ರಂಥಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಕಲೆ ಹಾಕಿ ಗ್ರಂಥವನ್ನು ರಚಿಸಲಾಗುವುದು ಎಂದು ಪ್ರಕಟಿಸಿದ್ದಾರೆ. ಈ ಸಂದರ್ಭ ವಿವಿ ಕುಲಸಚಿವೆ ಎಂ.ಕೆ.ಸವಿತಾ, ಪರೀಕ್ಷಾಂಗ ಕುಲಸಚಿವ ಡಾ.ಎಲ್.ನಾಗರಾಜು, ಹಣಕಾಸು ಅಧಿಕಾರಿ ರೇಖಾ ಹಾಗೂ ಇತರರು ಉಪಸ್ಥಿತರಿದ್ದರು.

ಬೀಳ್ಕೊಡುಗೆ



34 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದ ಭಾರತೀಯ ಜೀವ ವಿಮಾ ನಿಗಮ ಶಾರದಾದೇವಿನಗರ ಶಾಖೆಯ ಉದ್ಯೋಗಿ ಸಿ.ಎನ್.ಗೌರಿ ಅವರನ್ನು ಶಾಖೆಯ ವತಿಯಿಂದ ಹಾರ್ದಿಕವಾಗಿ ಬೀಳ್ಕೊಡಲಾಯಿತು, ಈ ವೇಳೆ ಶಾಖಾಧಿಕಾರಿ ಉಮಾಶಂಕರ್, ನಿವೃತ್ತ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಸೇರಿದಂತೆ ಎಲ್ಲ ಸಿಬ್ಬಂದಿ ವರ್ಗ ಹಾಜರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ



ಇವರು ದಿನಾಂಕ 31-03-2025 ರಂದು ದೈವಾದೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ಗೋಕುಲಂನ ರುದ್ರಭೂಮಿಯಲ್ಲಿ ದಿನಾಂಕ 01.04.2025 ಮಂಗಳವಾರ ನೆರವೇರಿಸಲಾಗುವುದು .
ದುಃಖತಪ್ತರು: ಮಕ್ಕಳಾದ ರಾಗಿಣಿ, ಶೈಲಜಾ ಮತ್ತು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಪಡುವಾರಹಳ್ಳಿ ಗ್ರಾಮಸ್ಥರು, ಮೈಸೂರು

ಹೊನ್ನಮ್ಮ (ಪುಟ್ಟಮ್ಮ)

ಭಾವಪೂರ್ಣ ಶ್ರದ್ಧಾಂಜಲಿ



ಇವರು ದಿನಾಂಕ 23-03-2025 ರಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ಮೃತರ ಆತ್ಮಕ್ಕೆ ಶಾಂತಿ ಕೋರುವವರು : ಕಸ್ತೂರಿಬಾ ಗಾಂಧಿ ಸೇವಾಶ್ರಮ ಅರಕೆರೆ, ಮಂಡ್ಯ ಹಾಗೂ ವಿಜಯ್

ಶ್ರೀಮತಿ ಸುಶೀಲಮ್ಮ

19ನೇ ವರ್ಷದ ಪುಣ್ಯಸ್ಮರಣೆ



ಪೊನ್ನಿರ ಡಾಲು

ನೀವು ನಮ್ಮನ್ನು ಅಗಲಿ ಇಂದಿಗೆ 19 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು: ಪತ್ನಿ: ಸೀತಮ್ಮ,
ಮಕ್ಕಳು: ವಿಶಾಲ, ಚೇತನ್ ಚೆಂಗಪ್ಪ,
ಸೊಸೆ: ಶಿಲ್ಪ, ಮೊಮ್ಮಗ:ಕವಿನ್ ಕಾರ್ಯಪ್ಪ
ಮತ್ತು ತಮ್ಮ: ಪೊನ್ನಿರ ಕೆ ರಾಜು, ಬಿಟ್ಟಂಗಾಲ

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮಾನ್
ಎಸ್. ನಂಜುಂಡಸ್ವಾಮಿ ರವರು

ಜನನ: 14-04-1945 ಮರಣ: 31-03-2025

ಮಾಜಿ ಅಧ್ಯಕ್ಷರು, ನಗರಸಭೆ, ಚಾಮರಾಜನಗರ, ಅಧ್ಯಕ್ಷರು, ಚಾಮರಾಜನಗರ ತಾಲ್ಲೂಕು ಆದಿ ಕರ್ನಾಟಕ ಅಭಿವೃದ್ಧಿ ಸಂಘ, ಹಾಗೂ ಹಿರಿಯ ರಾಜಕಾರಣಿಗಳು

ಶ್ರದ್ಧಾಂಜಲಿ ಸಲ್ಲಿಸುವವರು

ಜಿ.ಎನ್. ನಂಜುಂಡಸ್ವಾಮಿ, ಮಾಜಿ ಶಾಸಕರು, ಅಧ್ಯಕ್ಷರು - ನಾಗಸೇನಾ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್ (ರಿ), ಸಿದ್ದಾರ್ಥ ಶಿಕ್ಷಣ ಸಂಸ್ಥೆಗಳು, ಚಾಮರಾಜನಗರ.

ಎಸ್. ಮಹದೇವಯ್ಯ, ಮಾಜಿ ಅಧ್ಯಕ್ಷರು, ಕಾಂಪೋಸ್ಟ್ ಅಭಿವೃದ್ಧಿ ನಿಗಮ ಜಿಲ್ಲಾ ಪಂಚಾಯತ್, ಚಾಮರಾಜನಗರ

PAPER PUBLICATION

Under instruction from our client, Sri M.K. VENKATESH, son of Moganna Char, aged about 56 years, residing at # 71, Flat No.003, 6th Main, Jayalakshmipuram, Mysuru-570002, is intending to purchase the schedule property from Sri. K.V. Narayanamurthy, son of Late. Vasudevachar. K., No. 5, 22A Main, Raghavendra Layout, Padmanabhanagara, Bengaluru.

If anybody has got any claim over the schedule property, they can file their objection with authentic documents in support of their objection and claims if any, within 7 days from the date of this publication, failing which, our client will go ahead with the transaction with respect to the schedule property.

This is for the kind information of the public at large.

DESCRIPTION OF THE SCHEDULE PROPERTY

Property bearing Old Sy.No. 98/2 measuring 1 Acre 25 Guntas of Bandipalya Village, Kasaba Hobli, Mysuru Taluk, which was converted as per ALN(1)C.R.272/2008-09 dated 20-05-2009, bounded on the: East by: Government Road ; West by: Land bearing Sy.No. 98/1 and 90 ; North by: Road ; South by: Land bearing Sy. No. 97 and 96.

Sd/- O. Shama Bhat, B.A., LL.B., Reg. No. KAR 417/77
O. Sathisha, B.Sc., LL.B. Reg. No. KAR 721 / 89
Advocates, No. 20/C, 2nd Floor, Near Airlines Hotel, Jayalakshmi Vilas Road, Chamarajapuram, Mysuru-570 005.
Mob: 9900788245
Date: 31-3-2025

ಸಾರ್ವಜನಿಕರ ತಿಳುವಳಿಕೆಗೆ

ನಮ್ಮ ಕಕ್ಷಿದಾರರಾದ ಜೆ.ಎಸ್.ಎಸ್.ಬಡಾವಣೆಯಲ್ಲಿರುವ ಮನೆ.ನಂ.24ರ ನಿವಾಸಿ ಎಂ.ನಂದೀಶ್ವರ S/o ಮಹದೇವಪ್ಪ, ರವರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಚಾಮರಾಜನಗರ ಜಿಲ್ಲೆ, ಮತ್ತು ತಾಲ್ಲೂಕ್, ಗಣಗನೂರು ಹಳ್ಳಿಕೆರೆಹುಂಡಿ ಗ್ರಾಮದ ಶ್ರೀ.ರವಿ.ಹೆಚ್.-ಎನ್.ರವರ ಪತ್ನಿ ಶ್ರೀಮತಿ.ಮಲ್ಲಿಗಮ್ಮ ಅಲಿಯಾಸ್ ಮಲ್ಲಿಕಾ ಎಂಬುವವರಿಂದ ಖರೀದಿಸಲು ಇಚ್ಛಿಸಿ ದಿ:07/03/2025ರಂದು ಒಂದು ನೋಂದಾಯಿತ ಸ್ಥಿರ ಸ್ವತ್ತಿನ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಕ್ರಯಕ್ಕೆ ಸಂಬಂಧಪಟ್ಟಂತೆ ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಹೊಂದಿದ್ದಲ್ಲಿ ಅಥವಾ ಈ ಕುರಿತು ಯಾರಿಗಾದರೂ ಯಾವುದೇ ರೀತಿಯ ತಕರಾರು ಇದ್ದಲ್ಲಿ ಸೂಕ್ತ ದಾಖಲೆಗಳೊಡನೆ ಈ ತಿಳುವಳಿಕೆಯು ಪ್ರಕಟಗೊಂಡ ಏಳು ದಿನಗಳ ಒಳಗೆ ನಮ್ಮ ಕಛೇರಿಯಲ್ಲಿ ಸಲ್ಲಿಸತಕ್ಕದ್ದು. ಯಾವುದೇ ತಕರಾರು ಬರದಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಭಾವಿಸಿ ನಮ್ಮ ಕಕ್ಷಿದಾರರು ಮುಂದುವರೆಯುತ್ತಾರೆ. ಆನಂತರ ಬಂದಂತಹ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲ.

ಷೆಡ್ಯೂಲ್ : ಮೈಸೂರು ತಾಲ್ಲೋಕ್, ವರುಣ ಹೋಬಳಿ, ವರುಣ ಗ್ರಾಮಕ್ಕೆ ಸೇರಿದ ಸರ್ವೆ ನಂ.184/2ರಲ್ಲಿರುವ 20 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂಧಿ; ಪೂರ್ವಕ್ಕೆ: ಬ್ಲಾಕ್ 2 ಪಶ್ಚಿಮಕ್ಕೆ: ಲಾ.ಸ.ನಂ.183, ಉತ್ತರಕ್ಕೆ: ಲಾ.ಹಿ.1 ದಕ್ಷಿಣಕ್ಕೆ: ರಸ್ತೆ

ಸಹಿ/- (ಕೆ.ಸಿ.ರವೀಂದ್ರ)
ವಕೀಲರು, ನಂ.21, ಗಗನಚುಂಬಿ ಜೋಡಿರಸ್ತೆ, ಕುವೆಂಪುನಗರ 'ಐ' ಬ್ಲಾಕ್, ಮೈಸೂರು-23
ದಿನಾಂಕ: 28/03/2025 , 9449621105

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2025ಕ್ಕೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 46ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳು ಏಪ್ರಿಲ್ 10, 2025 ರೊಳಗೆ ತಲುಪುವಂತೆ ಮಾಡಲು ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋವ್: 8951668960
ಪ್ರೇಮಾ: 9880549879
ಕೆ.ಆರ್. ಸರ್ಕಲ್ ಕಚೇರಿ: 0821-2431774
ದೇವರಾಜ ಅರಸ್ ರಸ್ತೆ ಕಚೇರಿ: 0821-2428695

ಕೊಡಗು — ಪ್ರಸಾದ್, ಸೀತಾ ನಿಲಯ, ಮಡಿಕೇರಿ ರೇಂಜ್ ಫಾರೆಸ್ಟ್ ಹತ್ತಿರ, ಹೊಸ ಬಡಾವಣೆ, ಮಡಿಕೇರಿ 9731469871

ಮಂಡ್ಯ — ಕೆ. ಮೋಹನ್‌ರಾಜ್ 8762960325

ಶ್ರೀರಂಗಪಟ್ಟಣ — ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234

ಹುಣಸೂರು — ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ. ಕಲ್ಕುಣಿಕೆ, ಹುಣಸೂರು. 9448720626

ಚಾಮರಾಜನಗರ — ಸಿದ್ದಲಿಂಗಸ್ವಾಮಿ, ಪಿ.ಹೆಚ್ ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657

ಟಿ.ನರಸೀಪುರ — ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ — ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426

ಕೆ.ಆರ್. ನಗರ — ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345

ಮಳವಳ್ಳಿ — ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806

ಕೊಳ್ಳೇಗಾಲ — ಎಸ್.ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರುಳಿಕೇರಿ ಬೀದಿ, ಕೊಳ್ಳೇಗಾಲ 9916621007

ಹಾಸನ — ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ — ರಘು ಹೆಬ್ಬಾಳೆ, ಮೈಸೂರು ಮಿತ್ರ ರಿಪೋರ್ಟರ್ C/o ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401

ಜಯಪುರ — ಬಿಳಿಗಿರಿ, ಜಯಪುರ 9945479288

ಪಿರಿಯಾಪಟ್ಟಣ — ವಿರೇಶ್, ಪಿರಿಯಾಪಟ್ಟಣ 8660057128

ವಿರಾಜಪೇಟೆ — ಮಂಜುನಾಥ, ವಿರಾಜಪೇಟೆ 9900949353

ಯಳಂದೂರು — ವಿ.ನಾಗರಾಜು, ಮೈತ್ರಿ ಮೆಡಿಕಲ್, ಬಳೆಪೇಟೆ, ಯಳಂದೂರು 9844349191

ಕೆ.ಆರ್.ಪೇಟೆ — ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438

ಹೆಚ್.ಡಿ.ಕೋಟೆ — ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452

ಕೆ.ಎಂ.ದೊಡ್ಡಿ — ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338

ನಂಜನಗೂಡು — ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226

ಹುಣಸೂರು — ಹೆಚ್.ಆರ್. ಕೃಷ್ಣಕುಮಾರ್ (ಜನ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093

ಕೊಳ್ಳೇಗಾಲ — ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858

